

ಶ್ರೀ
ಶೇಷಾಚಲಗ್ರಂಥಮಾಲೆ

ಆನಂದವನ

ಭಾಮಿನಿ

ಶಂ. ಅ. ಕುಲಕರ್ಣಿ

೮ ಆಣೆ

S. R. Deshpande.

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ.

ಭಾಮಿನಿ.

(ಸಾಮಾಜಿಕ ಕಾದಂಬರಿ)

ಲೇಖಕ:
ಕೈ. ವಾ. ಶಂ. ಅ. ಕುಲಕರ್ಣಿ.


ಪ್ರಕಾಶಕ:
ಭಿ. ಪ. ಕಾಳೆ,
ಶ್ರೀಶೇಷಾಚಲ ಗ್ರಂಥಮಾಲಾ,
ಆ ನ ಂ ದ ವ ನ

೨ನೇ ಆವೃತ್ತಿ

1 9 3 9

ಬೆಲೆ ೮ ಆಣೆ

ಭಾಮಿನಿಯ ಲೇಖಕರಾದ



ಕೈ. ವಾ. ಶಂಕರ ಅಣ್ಣಾಜಿ ಕುಲಕರ್ಣಿ, ನೂಲವಿ.

ಭಾಮಿನಿ.

ಅಪ್ರಿಯ ವಾದ.

ಒಳೆಗಾಲ. ಶುಕ್ಲಪಕ್ಷದ ಸಾಯಂಕಾಲದ ಸಮಯ. ಸುಮಾರು ಐದೂವರೆ ಗಂಟೆಯಾಗಿರಬಹುದು. ದಿನಪತಿಯು ಅಸ್ತಾಚಲವನ್ನೇರಿದ್ದನು. ಹೂಬಿಸಿಲು ಅಲ್ಲಲ್ಲಿ ಬಿದ್ದಿತ್ತು. ನಗರದ ರಾಜಮಾರ್ಗಗಳು ಸಂಚರಿಸುವ ಜನರಿಂದ ಮುಖರಿತವಾಗಿದ್ದುವು. ಈ ಸಮಯದಲ್ಲಿ ಶ್ರೀಯುತ ರವದಿ ರಂಗರಾಯರ ಮನೆಯಲ್ಲಿ ಚಹಾಪಾರ್ಟಿ ನಡೆದಿತ್ತು. ಚಹಾಪಾನಕ್ಕಾಗಿ ಕೂಡಿದವರೆಲ್ಲ ರಂಗರಾಯರ ಸ್ನೇಹಿತರು. ಈ ಗೆಳೆಯರ ಗುಂಪು ಬಿಸ್ಕೀಟ-ಚಹಗಳ ಸೇವನೆಯೊಡನೆ ಹರಟೆ ನಡೆಸಿತ್ತು.

ರಂಗರಾಯನು ಕರ್ನಾಟಕ ಕಾಲೇಜದ ಪ್ರೊಫೆಸರನು—ತತ್ವಜ್ಞಾನದ ಅಧ್ಯಾಪಕನು. ವಿಲಾಯತಿಗೆ ಹೋಗಿ ಅಭ್ಯಾಸ ಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಪದವಿಯನ್ನು ಪಡೆದು ಬಂದವನು. ಹೆಸರಾದ ಶಿಕ್ಷಕನು. ವಯಸ್ಸು ಸುಮಾರು ಮೂವತ್ತೆರಡು. ಸಂಬಳ ತಿಂಗಳೊಂದಕ್ಕೆ ಎಂಟುನೂರು ರೂಪಾಯಿ. ರಂಗರಾಯನು ವಂಶಪರಂಪರಾಗತ ಧಾರವಾಡದ ನಿವಾಸಿಯು. ಮಾಳಮಡ್ಡಿಯಲ್ಲಿ ಇವನ ಸ್ವಾಮಿತ್ವದ ಬಂಗಲೆಯಿತ್ತು. ರಂಗರಾಯನು ಈ ಬಂಗಲೆಯಲ್ಲಿಯೇ ವಾಸವಾಗಿದ್ದನು. ಇವನ ಎರಡನೆಯ ಹೆಂಡತಿಯಾದ ರಮೆಯು ಐದು ತಿಂಗಳ ಹಿಂದೆ ಒಂಬತ್ತು ವರುಷ ವಯಸ್ಸಿನ ಒಬ್ಬ ಹುಡುಗನನ್ನಿರಿಸಿ ನಿಧನಹೊಂದಿದ್ದಾಳೆ. ರಂಗರಾಯನ ಬಂಗಲೆಯಲ್ಲಿ ಬೇರೆ ಬೇರೆ ಕೆಲಸಗಳಿಗಾಗಿ ಹಲವರು ದಾಸ-ದಾಸಿಯರಿದ್ದಾರೆ. ಒಂದು ದೃಷ್ಟಿಯಿಂದ ಈ ದಾಸ-ದಾಸಿಯರಿಂದಲೇ ರಂಗರಾಯನ ಸಂಸಾರವು ಸಾಗಿದೆಯೆಂದು ಹೇಳಬಹುದು.

ರಂಗರಾಯನು ಎರಡನೆಯ ಹೆಂಡತಿಯ ಮರಣದ ತರುವಾ
ಕೆಲವು ದಿನಗಳ ವರೆಗೆ ಮತ್ತೆ ಮದುವೆ ಮಾಡಿಕೊಳ್ಳಲಿಕ್ಕೆ ಮನಸ
ಮಾಡಲಿಲ್ಲ. ಇದು ಸ್ವಾಭಾವಿಕ ಸಂಗತಿಯಾಗಿದೆ; ಆದರೆ ರಂಗ
ಯನು ಕೆಲವು ದಿನಗಳಿಂದ ಮೂರನೆಯ ವಿವಾಹಕ್ಕೆ ಒಪ್ಪಿದ್ದಾ
ಇದರಲ್ಲಿ ವೈಶಿಷ್ಟ್ಯವೇನೂ ಇಲ್ಲ. ಮದಿಹಾಳದ ಮಧ್ವರಾಯರ ಮಗ
ನೋಡುವದಕ್ಕೆ ಸುಂದರಿಯು; ಹಾಗು ಈ ವರ್ಷ ಮ್ಯಾಟ್ರಿಕ್ಯುಲೇಶ
ಪರೀಕ್ಷೆಯನ್ನು ಪಾಸಾಗಿದ್ದಾಳೆ. ಮಧ್ವರಾಯನು ತನ್ನ ಈ ಮಗಳನ
ರಂಗರಾಯನಿಗೆ ಧಾರೆಯೆರೆಯಬೇಕೆಂದು ಹವಣಿಸುತ್ತಿದ್ದಾನೆ. ರಂ
ರಾಯನ ಈ ಮೂರನೆಯ ಮದುವೆಯ ಮಾತು ಕೌತುಕದ್ದಲ್ಲ; ವಿಶೇ
ಷತೆಯನ್ನೊಡಗೊಂಡದ್ದೂ ಅಲ್ಲ; ಆದರೆ ಇಂದಿನ ಚಹಾಪಾರ್ಟಿಯ
ಬೈಠಕಿಯಲ್ಲಿ ಇದೇ ವಿಷಯದ ಚರ್ಚೆಗೆ ಆರಂಭವಾಗಿತ್ತು.

ಈ ಚಹಾಪಾನದ ಸಭೆಯ ಮೆಂಬರರಲ್ಲಿ ಕನ್ನಡ ಶಾಲೆಯ
ಶಿಕ್ಷಕನೊಬ್ಬನಿದ್ದನು. ಇವನು ವಯಸ್ಸಿನಿಂದ ಎಲ್ಲರಿಗಿಂತ ಹಿರಿಯನು
ಬಡಮಾಸ್ತರನಾಗಿದ್ದರೂ ಚಹಾಪಾನದ ಮೇಲಾಟದಲ್ಲಿ ಪ್ರೊಫೆಸ
ರನ್ನೂ ಹಿಂದೆ ದೂಡತಕ್ಕವನು. ರಂಗರಾಯನ ಅಂತರಂಗದ ಸ್ನೇಹಿ
ನಾಗಿರದಿದ್ದರೂ ಪುರೋಹಿತನು. ಆದುದರಿಂದ ಇವನು ಆಮಂತ್ರಣ
ಹೊಂದದಿದ್ದರೂ ಚಹಾಪಾನದ ಸಮಯದಲ್ಲಿ ತಪ್ಪದೆ ಹಾಜರಿರುತ್ತಿ
ದ್ದನು. ಇದರಿಂದ ಆ ಶಿಕ್ಷಕನು ರಂಗರಾಯನ ಗೆಳೆಯರಿಗೆ ಗುರು
ನವನಾಗಿದ್ದನು. ರಂಗರಾಯನ ಎಲ್ಲ ಸ್ನೇಹಿತರಿಗೆ ಈ ಮುದುಕ ಮಾ
ಸ್ತರನು ಚೇಷ್ಟೆಯ ವಿಷಯವಾಗಿದ್ದನು. ಎಲ್ಲರೂ ಇವನನ್ನು ದಿಗ್ಗ
ನೆಂದು ಸಂಬೋಧಿಸುತ್ತಿದ್ದರು; ಯಾಕಂದರೆ ಈ ದಿಗ್ಗಜ ಪಂಡಿತನ
ವಿಚಾರ ಮಾಡಿ ಮಾತಾಡುತ್ತಿದ್ದಿಲ್ಲ; ತಾನಾಡಿದ ಮಾತಿನ ಜವಾಬ
ದಾರಿಯನ್ನು ಹೊರುತ್ತಿರಲಿಲ್ಲ.

ದಿಗ್ಗಜನು ಇಂಗ್ಲಿಷಭಾಷೆಯನ್ನು ಕಲಿತವನಲ್ಲ. ಹೆಣ್ಣುಮಕ್ಕಳ
ಇಂಗ್ಲಿಷ ಭಾಷೆಯಲ್ಲಿ ಪಾಸಾಗಿರುವರೆಂಬ ಸುದ್ದಿಯನ್ನು ಕೇಳುತ್ತಲೆ
ಇವನಿಗೆ ಕಡು ಕೋಪವುಂಟಾಗುತ್ತಿತ್ತು. ಇಂದಿನ ಚಹಕುಡಿಯುವ

ಮಿಟಿಂಗಿನಲ್ಲಿ ಮಧ್ವರಾಯನ ಮಗಳ ಸುದ್ದಿಯು ಹೊರಡುತ್ತಲೆ, ದಿಗ್ಗಜನು ಕುಪಿತನಾಗಿ ರಂಗರಾಯನನ್ನು ಕುರಿತು ಮಾತಾಡಹತ್ತಿದನು:—"ಒಬ್ಬ ಹೆಂಡತಿಯನ್ನು ಮನೆಬಿಡಿಸಿ ಹೊರದೂಡಿರುವೆ! ಮತ್ತೊಬ್ಬ ಮಡದಿಯನ್ನು ಮರಣಕ್ಕೆ ಗುರಿಮಾಡಿದೆ! ಇಷ್ಟರಿಂದ ನಿನಗೆ ಸಂತುಷ್ಟತೆಯಾಗಲೊಲ್ಲದೆ? ಮತ್ತೆ ಮದುವೆಯನ್ನು ಮಾಡಿಕೊಳ್ಳುವೆಯಾ? ರಾಮಪುರದ ವೇಣುಗೋಪಾಲಾಚಾರ್ಯರ ಮಗಳ ದೋಷವೇನು? ಇನ್ನೂ ಸಾಂಸಾರಿಕನಾಗಿರುವ ಇಚ್ಛೆಯು ನಿನಗಿದ್ದರೆ, ಅವಳನ್ನು ಕರೆಕಳುಹು; ಅವಳೊಡನೆ ಬಾಳುವೆ ಮಾಡು!"

ಮಿತ್ರಮಂಡಳಿಯಲ್ಲಿ ಯಾವನೂ ರಂಗರಾಯನ ಪ್ರಥಮ ವಿವಾಹದ ಸಂಗತಿಯನ್ನರಿತಿರಲಿಲ್ಲ. ಕಾರಣ ಆ ಗೆಳೆಯರೆಲ್ಲರೂ ದಿಗ್ಗಜನ ಮಾತು ಕೇಳಿ ಆಶ್ಚರ್ಯಾನ್ವಿತರಾದರು. ದಿಗ್ಗಜನು ಮತ್ತೆ ಹೇಳಹತ್ತಿದನು:—"ವೇಣುಗೋಪಾಲಾಚಾರ್ಯರ ಮಗಳ ಹಣೆಯ ಬರೆಹವು ಚನ್ನಾಗಿದೆ. ಅಂತೆಯೇ ಭಗವಂತನು ಅಕಾಲದಲ್ಲಿ ರಮಾಬಾಯಿಯು ಸಾಯುವಂತೆ ಮಾಡಿದ್ದಾನೆ. ಇನ್ನು ನೀನು ಬೇರೆ ವಿವಾಹದ ವಿಚಾರ ಮಾಡಬೇಡ. ಅವಳನ್ನೇ ಕರೆದುಕೊಂಡು ಬಾ. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣಳಾದ ಹೆಂಡತಿ ದೊರೆಯುವಳೆಂದು ಮಬ್ಬಿಗೆ ಬೀಳಬೇಡ! ಪರೀಕ್ಷೆ ಪಾಸಾದರೇನಾಯಿತು? ಇಂಥ ಹೆಂಡತಿಯಿಂದ ನಿನ್ನ ಬಾಳುವೆಗೆ ಉಪಯೋಗವೇನು? ಈಗಿನ ಕಾಲಕ್ಕೆ ವಿದ್ಯೆಯು ಅಗ್ಗವಾಗಿ ಹೋಗಿದೆ! ಎಲ್ಲರೂ ಕಲಿಯುವವರೇ! ಎಲ್ಲರೂ ಪಾಸಾಗಿ ಪದವಿಗಳನ್ನು ಪಡೆಯುವವರೆ!" ಮುಂದೆ ಮಾತು ಹೊರಡಲಿಲ್ಲ. ಕ್ರೋಧಾತಿಶಯದಿಂದ ದಿಗ್ಗಜನ ಕಣ್ಣುಗಳಿಗೆ ಕೆಂಪಡರಿತು. ರಂಗರಾಯನಿಗೂ ಬಹಳ ಸಿಟ್ಟು ಬಂದಿತು. ಆದರೂ ಅವನು ತನ್ನ ಕೋಪವನ್ನು ತೋರಗೊಡದೆ, ಪ್ರಸ್ತುತ ಪ್ರಸಂಗವನ್ನು ನಗೆಚಾಟಿಗೆಯಲ್ಲಿ ದೂಡುವದಕ್ಕಾಗಿ, "ಓಹೊ ದಿಗ್ಗಜ, ಅರಣ್ಯ ಪಂಡಿತರು ತಾವು! ಹುಚ್ಚನಂತೆ ಏನಾದರೊಂದು ಮಾತಾಡಿಬಿಟ್ಟರಾಯಿತೇನು?" ಎಂದು ಅಂದನು.

ದಿಗ್ಗಜನು ಅನ್ಯರು ಹುಚ್ಚನೆಂದು ಅಂದುದನ್ನು ಕೇಳಿದರೆ ಸುತ್ತಿರಲಿಲ್ಲ. ಇವನ ಸಿಟ್ಟು ಮತ್ತಿಷ್ಟು ಹೆಚ್ಚಿತು. ಈ ಕ್ರೋಧದ ದಲ್ಲಿ ಮೈ ಮರೆದ ಅವನು "ಎಲ್ಲರೂ ಹುಚ್ಚರೆ! ಜನರು ನನ್ನ ಹುಚ್ಚನೆಂದು ಕರೆಯುತ್ತಾರೆ; ಅಂದಬಳಿಕ ನಾನು ಹುಚ್ಚನೇ ಸ ಎಂದು ನುಡಿದನು.

ದಿಗ್ಗಜನ ಈ ಅಸಂಬದ್ಧ ವಚನಗಳನ್ನು ಕೇಳಿ ಎಲ್ಲರೂ ದೊ ದನಿಯಿಂದ ನಗಹತ್ತಿದರು; ಆದರೆ ಸಹಜವಾಗಿ ಒಮ್ಮೆ ಎದ್ದ ಆ ಅಪ್ರಿ ಸಂಗತಿಯು ಅಡಗಿ ಹೋಗಲಿಲ್ಲ. ನಗುವು ನಿಂತ ಬಳಿಕ ರಂಗರಾಯ ನಾಚುಗೆಹೊಂದಿ ಗೆಳೆಯರ ಸಮಾಧಾನಕ್ಕಾಗಿ ಹೇಳಹತ್ತಿದನು: "ನ ಜೀವನದಲ್ಲಿ ಅದೊಂದು ಅತಿಶಯ ವಿಷಾದದ ವಿಷಯವು. ನಾನ ವಿಲಾಯತಿಗೆ ಹೊರಡುವ ಮೊದಲೇ ನನ್ನ ಮೊದಲಿನ ಲಗ್ನವಾಗಿತ್ತು ಆದರೆ ಮುಂದೆ ತುಸ ದಿವಸಗಳಲ್ಲಿ ಯಾವದೋ ಒಂದು ಕಾರಣಕ್ಕಾಗಿ ನನ್ನ ಶ್ವಶುರನಿಗೂ ತಂದೆಗೂ ಭಯಾನಕ ಕಲಹವುಂಟಾಯಿತು ಮೇಲಾಗಿ ಅಪ್ಪನು ಅವಳ ಕಾಲ್ಗುಣವು ಕೆಟ್ಟದೆಂದು ಗೊತ್ತು ಮಾಡಿ ಕೊಂಡಿದ್ದನು. ಈ ಕಾರಣಗಳಿಂದ ಅವಳು ನಮ್ಮ ಮನೆಯಲ್ಲಿ ಬಹಳ ದಿವಸ ನಿಲ್ಲಲಿಲ್ಲ. ಅಪ್ಪನು ಅಲ್ಪದಿನಗಳಲ್ಲಿಯೇ ಅವಳನ್ನು ತೌರೂರಿಗ ಕಳುಹಿ ಕೊಟ್ಟನು; ತಿರುಗಿ ಕರೆತರಲಿಲ್ಲ. ನಾನು ಇಂಗ್ಲಂಡದಿಂದ ಬಂದ ಬಳಿಕ ಅವಳನ್ನು ನೋಡಿಲ್ಲ." ರಂಗರಾಯನು ಕೃತ್ರಿಮಹಾಸ್ಯ ವನ್ನು ತಂದುಕೊಂಡು ನಗುವ ಪ್ರಯತ್ನ ಮಾಡಿ ಹೇಳತೊಡಗಿದನು "ದಿಗ್ಗಜ ಪಂಡಿತರೇ, ತಾವು ಒಳ್ಳೇ ಬುದ್ಧಿವಂತರು! ಮಾತಾಡುವದು ಬಹು ಸುಲಭ; ಆದರೆ ಕರ್ಮ-ಧರ್ಮಸಂಯೋಗದಿಂದ ಆ ಮಾತಿ ನಂತೆ ಕೃತಿಯು ನಡೆಯಿತೆಂದರೆ, ಆಗ ಅದನ್ನು ನಿಸ್ತರಿಸಿಕೊಳ್ಳುವದು ಬಹಳ ಜಡ ಹರಿಯುವದೆಂಬದನ್ನು ಮರೆಯದಿರ್ರಿ! ಮುಂದಿನ ಮಾತು ಪನೇ ಇರಲಿ, ಈಗ ನಾನೊಂದು ಮಾತು ನಿಮಗೆ ಕೇಳುತ್ತೇನೆ. ನನ್ನ ಶ್ವಶುರನು ಈ ಅವಧಿಯಲ್ಲಿ ಅವಳನ್ನು ನನ್ನ ಮನೆಗೆ ಏಕೆ ಕಳುಹಿ ಕೊಡಬಾರದು? ಇದು ವರೆಗೆ ಉಪೇಕ್ಷೆಯಿಂದ ತ್ಯಜಿಸಿದ ಅವಳನ್ನು ಈಗ

ನಾನು ಆಗ್ರಹದಿಂದ ಕರೆಯಹೋಗುವದು ಉಚಿತವಾದೀತೇ? ಮ-ತ್ತೊಂದು ಮಾತೆಂದರೆ, ಈಗ ನೀವು ದಿನಾಲು ನನ್ನ ಈ ಮನೆಗೆ ಚಹ ಕುಡಿಯುವದಕ್ಕೆ ಬರುತ್ತೀರಷ್ಟೇ? ಆದರೆ ಅವಳು ಬಂದಳೆಂದರೆ, ನಿಮ್ಮ ಮಾತು ಹಾಗಿರಲಿ, ನಾನೂ ಸಹ ಚಹಾಕ್ಕೆ ಎರವಾಗುವ ಪ್ರಸಂಗ ಬರದಿರದು! ನಾವು ಹೀಗೆ ನಾಲ್ವರು ಕೂಡಿ ಚಹಾಪಾನ ಮಾಡುತ್ತಿರುವುದನ್ನು ನೋಡಿ ಅವಳೆಂದಿಗೂ ಸಹಿಸಳು! ಗೋಮಯವನ್ನೂ, ಕಸಬರಿಗೆಯನ್ನೂ ತಕ್ಕೊಂಡು ಬಂದು ಈ ಸ್ಥಳವನ್ನು ಸ್ವಚ್ಛಮಾಡಲಿಕ್ಕೆ ತೊಡಗುವ ಮೊದಲು ಅವಳು ನಮ್ಮ ಶುದ್ಧತೆಗೆ ಪ್ರಯತ್ನಿಸದೆ ಬಿಡಳು. ಅವಳು ಈ ಮನೆಗೆ ಬಂದಳೆಂದರೆ, ಮುಂದೆ ಏನಾದೀತೆಂಬದರ ಕೊಂಚ ದಿಗ್ದರ್ಶನವನ್ನು ನಾನು ಮಾಡಿದ್ದೇನೆ. ನೀವು ಇದೆಲ್ಲವನ್ನೂ ವಿಚಾರಿಸಿ ಸರಿಯಾಗಿ ಮಾತನಾಡಿರಿ!"

"ಹಾಗೆಂದಿಗೂ ಆಗದು! ನೀನು ಅವಳನ್ನು ಕರೆತರುವುದೇ ವಿಹಿತವಾದದ್ದು!" ದಿಗ್ಗಜನು ನಿರ್ಧಾರದಿಂದ ನುಡಿದನು.

ಉಳಿದವರಲ್ಲಾರೂ ಈ ವಾದವಿವಾದದಲ್ಲಿ ಸೇರಲಿಲ್ಲ. ಇಷ್ಟೇ ಅಲ್ಲ, ಒಬ್ಬ ಗೆಳೆಯನು ಈ ಅಪ್ರಿಯ ವಾದವನ್ನು ಮರೆಮಾಜುವ ಉದ್ದೇಶದಿಂದ ಬೇರೆ ಮಾತೆತ್ತಿದನು. ಮುಂದೆ ತುಸ ಹೊತ್ತಿನವರೆಗೆ ಬೇರೆ ವಿಷಯದ ಹರಟೆಯು ನಡೆಯಿತು. ಬಳಿಕ ಹೊತ್ತು ಬಹಳ ವಾಯಿತೆಂದು ಹೇಳಿ, ಮಿತ್ರಮಂಡಳಿಯು ತಮ್ಮ ಮನೆಗಳಿಗೆ ಹೊರಟಿತು. ದಿನಾಲು ಹೀಗೆಯೇ ನಡೆಯುತ್ತಿತ್ತು. ನಿಯಮಿತ ವೇಳೆಯಲ್ಲಿ ಚಹಾಪಾನಕ್ಕೋಸುಗ ಕಲೆಯುತ್ತಿದ್ದರು. ಸರಿಯಾದ ವೇಳೆಗೆ ಚಹಾಪಾನವನ್ನೂ ಹರಟೆಯನ್ನೂ ಮುಗಿಸಿ, ತಮ್ಮ ಮನೆಗಳಿಗೆ ಹೊರಡುತ್ತಿದ್ದರು. ಇಂದಿನ ದಿನವೂ ಈ ಕ್ರಮವು ತಪ್ಪಲಿಲ್ಲ; ಆದರೆ ಈ ವಿನೋದದ ಸಮಯದಲ್ಲಿ ಆಗಂತುಕವಾಗಿ ಎದ್ದ ಆ ಅಪ್ರಿಯ ಮಾತುಗಳು ಎಲ್ಲರಿಗೂ ವಿಷಾದವನ್ನುಂಟುಮಾಡಿದ್ದವು. ಉಂಟಾದ ಈ ಅಸಮಾಧಾನವು ಎಷ್ಟೋ ವೇಳೆಯವರೆಗೆ ಕಡಿಮೆಯಾಗದೆ, ಹಾಗೆಯೇ ಉಳಿಯಿತು.

* * *

ನಿನ್ನಂತೆಯೇ ಆಗಲಿ.

ಮಿತ್ರಮಂಡಳಿಯಲ್ಲಿಯ ಒಬ್ಬನು ಸಹ ತನ್ನ ಮೂರನೆಯ ಮ
ವೆಗೆ ಸಮ್ಮತಿಯನ್ನು ಕೊಡಲಿಲ್ಲವಿಷ್ಟೇ ಅಲ್ಲ, ಎಲ್ಲರೂ ಸುಮ್ಮ
ತಿರಸ್ಕಾರವನ್ನೇ ವ್ಯಕ್ತಪಡಿಸಿದರೆಂಬದು ರಂಗರಾಯನಿಗೆ ಹೊಳೆಯಿ
ಇದರಿಂದ ರಂಗರಾಯನಿಗೆ ಕೋಪವುಂಟಾಯಿತು. ನಾಚುಗೆಂ
ಹುಟ್ಟಿತು. ತಾನಿನ್ನು ತನ್ನ ಆ ಸ್ನೇಹಿತರಿಗೆ ಮೋರೆಯನ್ನು ತೊ
ವದು ಲಜ್ಜಾಹೀನತೆಯ ಲಕ್ಷಣವೆಂದು ಇವನಿಗೆ ಅನಿಸಿತು. ಇ
ಮೊದಲನೆಯ ಮದುವೆಯಾದಾಗ ಇವನು ಹದಿನೆಂಟು ವರ್ಷದ
ದ್ದನು. ಆಗ ಇವನ ಹೆಂಡತಿಯಾದ ಭಾಮಿನಿಯ ವಯಸ್ಸು ಕೇವ
ಹನ್ನೊಂದು ವರ್ಷ. ಈ ಕನ್ಯೆಯು ಬಹು ಚಲುವೆಯಾಗಿದ್ದುದರಿಂದ
ರಂಗರಾಯನ ತಂದೆಯು ಅಲ್ಪವರದಕ್ಷಿಣೆಯಿಂದ ಮಗನ ಮದುವ
ಸಮ್ಮತಿಸಿದ್ದನು; ಆದರೆ ಮುಂದೆ ರಂಗರಾಯನು ವಿಲಯತಿಗೆ ಹೊ
ಗುತ್ತಲೆ ಕೊಡಕೊಳ್ಳುವ ವಿಷಯವಾಗಿ ಬೀಗರಲ್ಲಿ ಭಯಂಕ
ಕಲಹವೆದ್ದಿತು. ರಂಗರಾಯನ ತಂದೆಯು ಸೊಸೆಯನ್ನು ಜುಲು
ಯಿಂದ ತೌರುಮನೆಗೆ ಕಳುಹಿಕೊಟ್ಟನು. ಮುಂದೆ ರಂಗರಾಯ
ವಿಲಾಯತಿಯಿಂದ ಬಂದ ಬಳಿಕ ಸೊಸೆಯನ್ನು ಕರೆಯಿಸಿಕೊಳ್ಳಲಿ
ವಿಷ್ಟೇ ಅಲ್ಲ; ಈ ತರದ ಇಚ್ಛೆಯೂ ಅವನಿಗುಂಟಾಗಲಿಲ್ಲ. ಅ
ಭಾಮಿಯ ತಂದೆಯೂ ಬಹು ಅಭಿಮಾನಿಯಾಗಿದ್ದನು. ಅವನು ಬೀಗ
ಬಳಿಯಲ್ಲಿ ಕೊಂಚವೂ ತಲೆಬೊಗ್ಗಿಸಲು ಮನಸ್ಸು ಮಾಡಲಿಲ್ಲ; ಬೀ
ನಿಗೆ ಹೇಳಿಕೊಂಡು ಮಗಳನ್ನು ಮಾವನ ಮನೆಯಲ್ಲಿ ಬಿಟ್ಟು ಬರಲಿ
ಇಚ್ಛಿಸಲಿಲ್ಲ.

ರಂಗರಾಯನು ವಿಲಾಯತಿಯಲ್ಲಿರುವಾಗಲೆ ತಂದೆ-ಮಾವಂದಿ
ನಡುವೆ ನಡೆದಿದ್ದ ಕಲಹದ ಸುದ್ದಿಯನ್ನು ಕೇಳಿದ್ದನು. ಈ ಕಲಹ
ಮುಂದೆ ತಾನೇ ತಾನಾಗಿ ನೊಂದುವದೆಂದು ಭಾವಿಸಿದ ಇವನು ಆ
ವಿಷಯದಲ್ಲಿ ಮನಸ್ಸು ಹಾಕಿರಲಿಲ್ಲ. ರಂಗರಾಯನು ಮುಂದೆ ನಾಲ
ವರುಷಗಳ ತರುವಾಯ ಪದವಿಯನ್ನು ಪಡೆದು ಸ್ವಗೃಹಕ್ಕೆ ಮರ

ಂದನು. ಈ ಅವಧಿಯಲ್ಲಿ ಇವನ ಸ್ವಭಾವವು ಪರಿವರ್ತನೆಯನ್ನು ಹೊಂದಿಹೋಗಿತ್ತು. ಬೇಡಿಕೆಯೂ ಭಿನ್ನವಾಗಿತ್ತು. ಕಾರಣ ನವ ನಾಗರಿಕತೆಯ ಸುಂದರ ತರುಣಿಯು ಹೇರಳ ಹಣದೊಡನೆ ಕೈಹಿಡಿಯ ಬಂದುದನ್ನು ಕಂಡ ಇವನು ಮೊದಲನೆಯ ಮದುವೆಯ ಮಾತನ್ನು ಮರೆದುಬಿಟ್ಟನು. ಎರಡನೆಯ ವಿವಾಹಕ್ಕೆ ಸಂತೋಷದಿಂದ ಸಮ್ಮತಿ ಸಿದನು. ತರುವಾಯ ಬಹು ದಿನಗಳು ಗತಿಸಿ ಹೋಗಿವೆ. ಈ ಅವಧಿ ಯಲ್ಲಿ ರಂಗರಾಯನ ತಂದೆಯು ತೀರಿಕೊಂಡಿದ್ದಾನೆ. ಭಾಮಿನಿಯ ತಂದೆಯೂ ನಿಧನ ಹೊಂದಿದ್ದಾನೆ.

ರಂಗರಾಯನು ಭಾಮಿನಿಯನ್ನು ಸಂಪೂರ್ಣ ರೀತಿಯಿಂದ ಮರೆ ತು ಬಿಟ್ಟಿದ್ದನೆಂದಲ್ಲ. ಜನಮುಖದಿಂದ ಅವಳ ವಿಷಯದ ಕೆಲ ಸಂಗತಿ ಗಳನ್ನು ತಿಳಿದಿದ್ದಾನೆ; ಅವಳು ಅಣ್ಣಂದಿರ ಸಂಸಾರದಲ್ಲಿ ಸೇರ್ಪಡೆ ಯಾಗಿದ್ದಾಳೆ. ಮಡಿ-ಮೈಲಿಗೆಗಳ ಚರ್ಚೆಯಲ್ಲೂ ದೇವಪೂಜೆ-ನಾಮ ಸ್ಮರಣೆಗಳಲ್ಲೂ ಕಾಲಕಳೆಯುತ್ತಿದ್ದಾಳೆ. ಅವಳ ಅತಿ ಧಾರ್ಮಿಕಾಚರಣೆ ಯಿಂದ ಅಣ್ಣ-ತಮ್ಮಂದಿರು ಬೇಸತ್ತು ಹೋಗಿದ್ದಾರೆ. ಭಾಮಿನಿಯ ಈ ಆಚರಣೆಗಳಲ್ಲಿಯ ಯಾವುದೂ ರಂಗರಾಯನಿಗೆ ಸಂತೋಷಪ್ರದ ವಾಗಲಿಲ್ಲ. ರಂಗರಾಯನು ಭಾಮಿನಿಯ ನಡವಳಿಯ ಬಗ್ಗೆ ಬಹು ಜನ ರನ್ನು ವಿಚಾರಿಸಿದ್ದನು. ಇವರಲ್ಲಿಯ ಒಬ್ಬನೂ ಸಹ ಭಾಮಿನಿಯ ಚರಿತ್ರದೋಷದ ಮಾತೆತ್ತಿರಲಿಲ್ಲ. ಎಲ್ಲರೂ ಭಾಮಿನಿಯು ಧಾರ್ಮಿಕ ಸ್ತ್ರೀಯೆಂದು ಸ್ತುತಿಸುತ್ತ ಬಂದಿದ್ದರಲ್ಲದೆ, ಕಲಂಕಿತಳೆಂದು ಸ್ವಲ್ಪಸಹ ಉಸಿರಿರಲಿಲ್ಲ. ಹೀಗೆ ಹೇಳದಿದ್ದರೆ ಅದು ರಂಗರಾಯನಿಗೆ ಎಷ್ಟರ ಮಟ್ಟಿಗೆ ತಾಗುತ್ತಿತ್ತೆಂಬದನ್ನು ಹೇಳುವುದು ದುಸ್ತರವಾಗಿದ್ದರೂ, ಈ ವಿಷಯದಲ್ಲಿ ರಂಗರಾಯನು ನಿಶ್ಚಿಂತನಾಗಿದ್ದನೆಂದು ನಾವು ಹೇಳ ಬಲ್ಲೆವು.

ರಾತ್ರಿಯ ವಿಶ್ರಾಂತಿಯ ವೇಳೆಯಲ್ಲಿ ರಂಗರಾಯನು ಇಂತು ಯೋಚಿಸಹತ್ತಿದನು:-“ಇನ್ನು ಕೆಲದಿನಗಳ ಮಟ್ಟಿಗಾದರೂ ಮೂರ ನೆಯ ಮದುವೆಯ ಸಂಗತಿಯನ್ನು ಮರೆದಿರಲಿಕ್ಕೆಬೇಕು. ಇದು ಆಷ್ಟು

ಕಠಿಣ ಕಾರ್ಯವಲ್ಲ; ಆದರೆ ಇಪ್ಪತ್ತುಮೂರು-ಇಪ್ಪತ್ತುನಾಲ್ಕು ವ
ಗಳ ವಯಸ್ಸಿನ ಗಾವಿಲ ಹೆಂಗಸನ್ನು ಕರೆತಂದು, ಅವಳ ಮೇಲೆ
ಸಂಸಾರದ ಗೃಹಿಣಿಯ ಭಾರವನ್ನು ಹೇರಿದರೆ, ದಕ್ಷಯಜ್ಞದ
ಭಯಂಕರ ಗೊಂದಲವೇಳದೆ ಬಿಡದು! ಮುಖ್ಯವಾಗಿ ನಾ
ರಾಮನ ಬಗ್ಗೆ ಯೋಚಿಸಬೇಕಾಗಿದೆ. ರಾಮನ ಜನನಿಯೇ ತನ್ನ
ವರೆಗಿನ ದುರ್ದೆಸೆಯ ಮೂಲಕಾರಣಳೆಂದು ಭಾವಿಸಿದ್ದ ಅವಳು, ರಾ
ನನ್ನು ವಿಷದೃಷ್ಟಿಯಿಂದ ನೋಡುವದು ಸ್ವಾಭಾವಿಕವಾದದ್ದು!
ಗಾಗಿ ಇದ್ದೊಬ್ಬ ಮಗನು ವಿಪತ್ತಿಗೆ ಗುರಿಯಾಗುವಂತೆ ಮಾಡುವ
ಸರಿಯಲ್ಲ. ತಂಗಿಯ ಮನೆಯು ಊರಲ್ಲಿಯೇ ಇದೆ. ಇವಳು ರಾ
ನನ್ನು ಸರಿಯಾಗಿ ಸಂರಕ್ಷಿಸಬಲ್ಲಳು; ಆದರೆ ರಾಮನ ಸಂರಕ್ಷಣೆ
ಭಾರವನ್ನು ಚಿರಕಾಲ ತಂಗಿಯ ಮೇಲೆ ಚೆಲ್ಲಿಕೊಡುವದು ಹೇಗೆ?
ರಂಗರಾಯನಿಗೆ ಮುಂದಿನ ಯೋಚನೆಯು ಹೊಳೆಯದಾಯಿತು. ಇವ
ಯಾವತ್ತೂ ಕೋಪವು ದಿಗ್ಗಜನ ಮೇಲೆ ಹೊರಳಿತು. ರಂಗರಾಯನ
ಇದುವರೆ ಹಲವು ಸಾರೆ ಚಹ ಕುಡಿಸಿದ್ದನು; ಬಿಸ್ಕೀಟು ತಿನಿಸಿದ್ದನ
ಆ ಅರಣ್ಯಪಂಡಿತನು ಹೀಗೆ ಪ್ರತ್ಯುಪಕಾರವನ್ನು ತೀರಿಸಬೇಕೆ? ರಂ
ರಾಯನು ಇನ್ನು ದಿಗ್ಗಜನಿಗೆ ಚನ್ನಾಗಿ ಕೈತೋರಿಸಬೇಕೆಂದು ಸಂ
ಲ್ಪಿಸಿಕೊಂಡನು. ದಿಗ್ಗಜನು ಈ ಸಮಯದಲ್ಲಿ ರಂಗರಾಯನ ಹತ್ತ
ದ್ದರೆ ಏನಾಗುತ್ತಿತ್ತೋ ಏನೋ! ಆದರೆ ಆ ನಿಶ್ಚಿಂತ ಪುರುಷನು
ವೇಳೆಯಲ್ಲಿ ಮನೆಯಲ್ಲಿಯ ಮೆತ್ತಗಿನ ಹಾಸುಗೆಯ ಮೇಲೆ ನಿದ್ರೆಯ
ದ್ದುದರಿಂದ, ರಂಗರಾಯನ ಕೋಪದ ಪ್ರಯೋಗವು ಅವನ ಮೇ
ಆಗುವಂತಿರಲಿಲ್ಲ.

ರಂಗರಾಯನು ಸ್ವಭಾವದಿಂದ ಕೆಟ್ಟವನಲ್ಲ; ಆದರೆ ಅತಿಶಯ
ದುರ್ಬಲ ಪ್ರಕೃತಿಯ ಮನುಷ್ಯನಾಗಿದ್ದನು. ಕಾರಣ ಮನಲಜ್ಜೆಗಿ
ತಲೂ ಜನಲಜ್ಜೆಯು ಇವನನ್ನು ಹೆಚ್ಚಾಗಿ ಪೀಡಿಸುತ್ತಿತ್ತು. ವಿದ್ಯೆಯ
ಅಭಿಮಾನದೊಡನೆ ಅದಕ್ಕೂ ಪ್ರಬಲವಾದ ಮತ್ತೊಂದು ಅಭಿಮಾ
ನವು ಇವನಲ್ಲಿ ಮನೆಮಾಡಿಕೊಂಡಿತ್ತು. ಅದು ಯಾವುದೆಂದರೆ, ನಾನ

ನತಃ ಅನ್ಯರ ವಿಷಯದಲ್ಲಿ ಕಿಂಚಿನ್ಮಾತ್ರವೂ ಅನ್ಯಾಯವನ್ನಾಚರಿಸ ಕ್ಕವನಲ್ಲವೆಂಬದು. ಚಹಾಪಾರ್ಟಿಯ ಸಮಯದಲ್ಲಿ ಕೂಡಿದ್ದ ತ್ರರು ಬಾಯಿಂದ ಒಡನುಡಿಯದಿದ್ದರೂ ಮನಸಾ ತಿರಸ್ಕರಿಸಿದ ಬುದನ್ನು ರಂಗರಾಯನು ಗೊತ್ತುಮಾಡಿಕೊಂಡಿದ್ದನು. ಗೆಳೆಯರ ಅವ್ಯಕ್ತ ತಿರಸ್ಕಾರವನ್ನು ಸಹಿಸಿಕೊಳ್ಳುವದು ರಂಗರಾಯನಿಗೆ ೀರ ಅಸಹ್ಯವಾಗಿತ್ತು.

ರಂಗರಾಯನಿಗೆ ಅಂದು ಬೆಳಗಿನ ವರೆಗೂ ನಿದ್ದೆಹತ್ತಲಿಲ್ಲ. ನಸ್ಸಿನಲ್ಲಿ ಕಟೆಯುತ್ತಿದ್ದ ಒಂದೇಒಂದು ವಿಷಯದ ಬಗ್ಗೆ ವಿಚಾರಾ ೋಚನೆ ಮಾಡಿ ಬೇಸತ್ತುಹೋದನು; ಆದರೆ ಬೆಳಗಿನ ಜಾವದಲ್ಲಿ ವನಿಗೆ ಸುಲಭವಾದ ಒಂದು ಹಂಚಿಕೆಯು ಹೊಳೆಯಿತು. ಈ ಹಂಚಿ ಯ ಮೇರೆಗೆ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಿಕೊಳ್ಳಹತ್ತಿ ನು:"ಅವಳನ್ನು ಕರೆಯ ಕಳುಹಬೇಕು. ಬಹುಶಃ ಅವಳು ಬರುವ ಲ್ಲ. ಬಂದರೂ ಇಲ್ಲಿ ನಾಲ್ಕೆಂಟು ದಿನಗಳಿಗಿಂತ ಹೆಚ್ಚು ಕಾಲ ಇರ ಕ್ಕವಳಲ್ಲ; ಯಾಕಂದರೆ, ಇಲ್ಲಿಯ ಆಚಾರ-ವಿಚಾರಗಳು ಅವಳ ವ್ಯವ ಾರಕ್ಕೆ ತೀರ ವಿಪರೀತವಾದವುಗಳು. ಅವಳು ಈ ಆಚಾರ-ವಿಚಾರ ಳನ್ನು ಸಹಿಸದವಳಾಗಿ ಅಲ್ಪ ಕಾಲದಲ್ಲಿಯೇ ಮತ್ತೆ ತೌರುಮನೆಗೆ ಹೋಗಿಬಿಡುವಳು. ಆ ಬಳಿಕ ಜನರು ನನಗೆ ದೋಷ ಕೊಡುವಂತಿಲ್ಲ. ಅವಳು ಇಲ್ಲಿರುವ ವರೆಗೆ ರಾಮನನ್ನು ತಂಗಿಯ ಮನೆಗೆ ಕಳುಹಿಕೊಡ ಬೇಕು. ನಾನು ಅತ್ತಿತ್ತ ಅಡ್ಡಾಡಿ ಬರಬೇಕು. ಅವಳು ಮನೆ ಬಿಟ್ಟು ಹೋದ ಬಳಿಕ ಮತ್ತೆ ಮನೆಯಲ್ಲಿ ಹೊಂದಿಕೊಂಡರಾಯಿತು." ಈ ಸಹಜವಾದ ಉಪಾಯವು ಇಷ್ಟು ಹೊತ್ತಿನ ವರೆಗೆ ಏಕೆ ಲಕ್ಷ್ಯದಲ್ಲಿ ಬಂದಿರಲಿಕ್ಕಿಲ್ಲೆಂಬದನ್ನು ಭಾವಿಸಿದ ರಂಗರಾಯನಿಗೆ ಆಶ್ಚರ್ಯವಾಗ ದಿರಲಿಲ್ಲ.

ರಂಗರಾಯನು ಮತ್ತಿಷ್ಟು ಆಲೋಚಿಸಿ ಒಮ್ಮೆ ನಿರ್ಧರಿಸಿಕೊಂ ಡಿದ್ದ ಆ ಹಂಚಿಕೆಯನ್ನು ಸ್ಥಿರಪಡಿಸಿಕೊಂಡು ಹಾಸಿಗೆಯಿಂದೆದ್ದನು. ಪ್ರಾತಃಕೃತ್ಯಗಳನ್ನು ತೀರಿಸಿ ಮುಂದಿನ ಕೆಲಸಕ್ಕೆ ತೊಡಗಿದನು.

ರಂಗರಾಯನು ಪ್ರಿನ್ಸಿಪಾಲನಿಗೆ ಹೇಳಿಕೊಂಡು ಏಳು ದಿ
ರಜೆ ತಕ್ಕೊಂಡನು. ಮುಂಬಯಿಯಲ್ಲಿ ರಂಗರಾಯನ ಲಂಗೆ
ಗೆಳೆಯನೊಬ್ಬನಿದ್ದನು. ತಾನು ಬರುವೆನೆಂದು ರಂಗರಾಯನು ಅ
ತಾರ ಕಳುಹಿಸಿದನು; ಹಾಗು ತಂಗಿಯಾದ ಸುಭದ್ರೆಗೆ ಒಂದು
ವನ್ನು ಬರೆದು ಕಳುಹಿದನು. ಅದರಲ್ಲಿ ನಾನು ಇಂದೇ ಮುಂಬ
ಹೊರಡುವೆನೆಂದೂ, ಹೊರಡುವ ಮೊದಲು ಭಾಮಿನಿಯನ್ನು ಕ
ತರಲಿಕ್ಕೆ ಜನರನ್ನು ಕಳುಹುವೆನೆಂದೂ, ಅವಳು ಬಂದಳೆಂದರೆ ನ
ರಾಮನನ್ನು ಕರಕೊಂಡು ಹೋಗೆಂದೂ, ನಾನು ಇನ್ನು ಎಂಟು
ಗಳಿಗೆ ತಿರುಗಿ ಬರುವೆನೆಂದೂ ಬರೆದಿದ್ಧನು.

ರಂಗರಾಯನ ದೂರದ ಸಂಬಂಧಿಕನಾದ ತಮ್ಮನೊಬ್ಬನಿದ್ದ
ಅವನು ವಕೀಲರ ಕಾರಕೂನನಾಗಿದ್ದನು. ಅವನು ರಂಗರಾಯನ ಮ
ಯಲ್ಲಿರದೆ, ಸ್ವಂತದ ಮನೆಯಲ್ಲಿದ್ದನು. ಪ್ರಸಂಗ ವಿಶೇಷವಲ್ಲಿ ರಂ
ರಾಯನ ಹತ್ತಿರ ಬರುತ್ತಿದ್ದನು. ರಂಗರಾಯನು ಅವನನ್ನು ಕರೆಕಳು
ಕೊಂಡು, "ತಮ್ಮಾ, ನೀನು ನಾಳೆ ರಾಮಪುರಕ್ಕೆ ಹೋಗಿ ನ
ಅತ್ತಿಗೆಯನ್ನು ಕರೆತರಬೇಕು." ಎಂದು ಹೇಳಿದನು.

"ಅತ್ತಿಗೆಯೆ?-ಅವಳಾರು?" ತಮ್ಮನು ವಿಸ್ಮಯದಿಂದಂಡನ

"ನಿನಗೆ ಗೊತ್ತಿಲ್ಲವೆ? ರಾಮಪುರಕ್ಕೆ ನನ್ನೊಡನೆ ನೀನೂ ಲಗ್ನ
ಬಂದಿದ್ದೆಯಲ್ಲ! ವೇಣುಗೋಪಾಲಾಚಾರ್ಯರನ್ನು ಪೂರಾ ಮರೆ
ಬಿಟ್ಟಿರುವೆಯೇನು?" ರಂಗರಾಯನು ಕೇಳಿದನು.

"ಓಹೋ! ಪೂರಾ ನೆನಪಿದೆ; ಆದರೆ ಅವರಲ್ಲಿಯ ಯಾರೂ ನ
ನ್ನು ಗುರುತಿಸಲಾರರು. ಅವರು ಅತ್ತಿಗೆಯನ್ನು ನನ್ನ ಸಂಗಡ ಕ
ಹುವುದೆಂತು?" ತಮ್ಮನು ಕೇಳಿದನು.

"ಕಳುಹದಿದ್ದರಿಲ್ಲ! ನೀನೇನೂ ಆಗ್ರಹ ಮಾಡುವ ಕಾರಣವಿಲ್ಲ
ನೀನು ಅಲ್ಲಿಗೆ ಹೋಗಿ ನನ್ನ ಆದೇಶವನ್ನು ತಿಳುಹು. ಬಂದರೆ ಬರ
ಒಲ್ಲದಿದ್ದರೆ ಬಿಡಲಿ! ಮೋಟಾರ ತಕ್ಕೊಂಡು ಹೋಗು. ಸೇವಕರನ್ನು
ಪರಿಚಾರಿಕೆಯನ್ನೂ ಸಂಗಡ ಕರಕೊಂಡು ಹೊರಡು. ಅವಳು ಬರು

ಲ್ಲೆಂದು ಹೇಳಿದ ಕೂಡಲೆ ಬೇರೆ ಮಾತಾಡದೆ ಹೊರಟು ಬಾ.” ಂಗರಾಯನು ಹೇಳಿದನು.

ತಮ್ಮನು ಆಶ್ಚರ್ಯಾನ್ವಿತನಾಗಿ ಅಣ್ಣನ ಮೋರೆಯನ್ನು ನೋ-ಡುತ್ತ ನಿಂತನು. ಕೆಲ ಕಾಲದ ಮೇಲೆ: “ಆಗಲಿ, ನೀನು ಹೇಳಿದಂ ತೆಯೆ ಮಾಡುವೆನು” ಎಂದು ನುಡಿದು ಸುಮ್ಮನಾದನು.

ರಂಗರಾಯನು ಅವನ ಕೈಯಲ್ಲಿ ರೂಪಾಯಿಗಳನ್ನೂ, ಕೀಲಿಯ ಕೈಯನ್ನೂ ಕೊಟ್ಟು, ಇಂತು ಹೇಳಿದನು: “ನಾನು ಇಂದಿನ ರಾತ್ರಿಯ ಗಾಡಿಯಿಂದ ಮುಂಬಯಿಗೆ ಹೋಗುವೆನು. ಎಂಟು ದಿನಗಳ ತರು ವಾಯ ಮರಳಿ ಬರುವೆನು. ಅವಳು ಬಂದರೆ, ಅವಳ ಕೈಯಲ್ಲಿ ಈ ಬೀಗದ ಕೈಯನ್ನು ಕೊಡು. ನನ್ನ ಕೋಣೆಯಲ್ಲಿಯ ಸಂದುಕವನ್ನು ತೋರಿಸು. ಅದರಲ್ಲಿ ರೂಪಾಯಿಗಳಿವೆ. ಅವಳಿಗೆ ಆ ರೂಪಾಯಿ ಗಳನ್ನು ತಕ್ಕೊಂಡು ಸಂಸಾರವನ್ನು ಸಾಗಿಸಬೇಕೆಂದು ಸೂಚಿಸು. ನ್ನೆ ಪಗಾರ ತಕ್ಕೊಂಡಿದ್ದೇನೆ. ಅವು ಒಂದು ತಿಂಗಳು ಸಾಲಬೇಕು.”

“ಅಣ್ಣಾ ಒಮ್ಮೆಲೆ ನಿನಗೆ ಹೀಗೆ ಲಹರಿಯೆದ್ದದ್ದೇಕೆ? ಸ್ವೇಚ್ಛೆ ಯಿಂದ ನೀರಲ್ಲಿ ಸಂಚರಿಸುತ್ತಿರುವ ಮೀನವನ್ನು ಬಿಸಿಲಿನಲ್ಲಿ ತಂದು ಬಿಸುಡುವದರಿಂದ ಪ್ರಯೋಜನವೇನು?” ತಮ್ಮನು ಕೇಳಿದನು.

ರಂಗರಾಯನು ಕ್ಷಣಕಾಲ ನೀರವವಾಗಿದ್ದು ಆಲೋಚಿಸಿದನು. ಅಳಿಕ ನಿಟ್ಟುಸಿರಬಿಟ್ಟು ಹೇಳಹತ್ತಿದನು: “ತಮ್ಮಾ, ಅವಳು ಇಲ್ಲಿಗೆ ಬರುವುದಿಲ್ಲೆಂಬುದು ನಿಶ್ಚಿತವಾದದ್ದು. ಆದರೂ ನಾವು ಲೋಕತಃ ಧರ್ಮತಃ ನಮ್ಮ ಕರ್ತವ್ಯವನ್ನು ಮಾಡಲೇಬೇಕಷ್ಟೆ? ಅವಳು ಬರ ದಿದ್ದರೆ, ಜನಾಪವಾದವನ್ನು ನಾವು ಸಹಜವಾಗಿ ಹೋಗಲಾಡಿಸಿ ದಂತಾಗುವದಿಲ್ಲವೆ? ಇರಲಿ. ನಾನು ಹೇಳಿದಂತೆ ಮಾಡು. ಅವಳು ಬಂದರೆ, ಸುಭದ್ರೆಗೆ ಸುದ್ದಿಯನ್ನು ತಿಳುಹು. ಸುಭದ್ರೆಯು ರಾಮು ವನ್ನು ತನ್ನ ಮನೆಗೆ ಕರೆದುಕೊಂಡು ಹೋಗಲಿ.”

ರಂಗರಾಯನು ಅಂದೇ ರಾತ್ರಿಯ ಪ್ಯಾಸೆಂಜರ ಬಂಡಿಯನ್ನೇರಿ ಮುಂಬಯಿಯ ಕಡೆಗೆ ನಡೆದನು.

ಅಭಿಮಾನ ತೋರಲಾರೆ.

ಇಳಿಹೊತ್ತಿನ ಸಮಯದಲ್ಲಿ ಮೋಟರಬಂಡಿಯೊಂದು ಬಂದು ರಂಗರಾಯನ ಮನೆಯ ಮುಂದೆ ನಿಂತಿತು; ಹಾಗು ಒಂದೆರಡು ಮಿನೀಟುಗಳಲ್ಲಿ ಇಪ್ಪತ್ತೆರಡು ವರುಷಗಳ ವಯಸ್ಸಿನ ತರುಣಿಯೊಬ್ಬಳು ಹೊರಬಿದ್ದು, ರಂಗರಾಯನ ಮನೆಯನ್ನು ಹೊಕ್ಕಳು. ಭಾಮಿನಿಯು ದಿವಾಣಖಾನೆಯಲ್ಲಿಯ ಕುರ್ಚಿಯ ಮೇಲೆ ಕುಳಿತಿದ್ದಳು. ರಾಮನು ಭಾಮಿನಿಯ ತೊಡೆಯ ಮೇಲೆ ಕುಳಿತು ಪುಸ್ತಕದೊಳಗಿನ ಚಿತ್ರಗಳನ್ನು ನೋಡುತ್ತಿದ್ದನು; ಹಾಗು ತನಗೆ ಚಂದ ಕಂಡ ಚಿತ್ರಗಳನ್ನು ಭಾಮಿನಿಗೆ ತೋರಿಸುತ್ತಿದ್ದನು.

ಆಗಂತುಕ ತರುಣಿಯು ಕಾಲಸಪ್ಪಳದಿಂದ ಮೊದಲು ರಾಮನು ಮುಖವೆತ್ತಿ ನೋಡಿದನು. ಅತ್ತೆಯೆಂದು ಕಂಡುಕೊಂಡು ಆನಂದದಿಂದ: "ಅಪ್ಪಾ, ಇಲ್ಲಿ ನೋಡು. ಅತ್ತೆಯು ಬಂದಿದ್ದಾಳೆ." ಎಂದು ಹೇಳಿದನು. ಭಾಮಿನಿಯು ಎದ್ದು ನಿಂತು ಆ ಕಡೆಗೆ ನೋಡಿದಳು. ಭಾಮಿನಿಯು ಉಟ್ಟಿದ್ದುದು ಸಾದಾ ಸೀರೆ. ಕುಪ್ಪುಸವೂ ಹೆಚ್ಚು ಬೆಲೆಯದಲ್ಲ. ಮೈ ಮೇಲೆ ಸಾಮಾನ್ಯ ಅಲಂಕಾರಗಳಿದ್ದವು. ಹೀಗೆ ಸಾಮಾನ್ಯ ವಸನ-ಭೂಷಣಗಳಲ್ಲೂ ಒಪೆನು ಕಾಣುತ್ತಿರುವ ಭಾಮಿನಿಯ ಚಲುವಿಕೆಯನ್ನು ನೋಡಿ, ಸುಭದ್ರೆಯು ದಂಗಾದಳು.

ಭಾಮಿನಿಯೇ ಮಾತಾಡಲಾರಂಭಿಸಿದಳು. ಮುಗುಳು ನಗೆಯಿಂದ "ರಾಮು, ಅತ್ತೆಗೆ ನಮಸ್ಕಾರ ಮಾಡಲಿಲ್ಲವಲ್ಲಪ್ಪಾ?" ಎಂದು ಕೇಳಿದಳು.

ರಾಮನಿಗೆ ಈ ಶಿಕ್ಷಣವು ಹೊಸದು. ಇವನು ಮಲತಾಯಿಯ ಮಾತನ್ನು ಮೀರಲಾರದೆ ಅತ್ತೆಯ ಹತ್ತರ ಬಂದನು. ಬೂಟುಗಳಿಂದಾಚ್ಛಾದಿತವಾದ ಅತ್ತೆಯ ಪಾದಪದ್ಮಗಳ ಮೇಲೆ ಹಣೆಯಿರಿಸಿ, ಮತ್ತೆ ಎದ್ದು ನಿಂತವನೇ. ತಾಯಿಯ ಹತ್ತರ ಹೋದನು. "ತಂಗೀ, ಹೀಗ ಬಾ; ಇಲ್ಲಿ ಕುಳಿತುಕೋ" ಭಾಮಿನಿಯು ನುಡಿದಳು.

"ನೀನು ಯಾವಾಗ ಬಂದೆ?" ಸುಭದ್ರೆಯು ಕೇಳಿದಳು.

"ಸೋಮವಾರ ಬಂದೆನು. ಇಂದು ಬುದವಾರ. ಮೂರು ದಿನಗಳಾದವು. ತಂಗೀ, ಹೀಗೆ ನಿಂತೇ ಎಷ್ಟು ಹೊತ್ತು ಮಾತಾಡುವೆ? ಇಲ್ಲಿ ಕುಳ್ಳಿರ ಬಾ." ಭಾಮಿನಿಯು ನುಡಿದಳು.

ಸುಭದ್ರೆಯು ಸ್ನೇಹಬಳೆಸುವುದಕ್ಕೆ ಬಂದವಳಲ್ಲ; ಕೋಪದಿಂದ ಮನೆ ಬಿಟ್ಟು ಹೊರಟಿದ್ದಳು. ಕಾರಣ ಅವಳು: 'ಇಲ್ಲ, ನಾನು ಕುಳ್ಳಿರುವಂತಿಲ್ಲ. ನನಗೆ ಇನ್ನೂ ಬಹಳ ಕೆಲಸಗಳಿವೆ. ಈಗ ನಾನು ರಾಮನನ್ನು ಕರೆದೊಯ್ಯಲಿಕ್ಕೆ ಬಂದಿದ್ದೇನೆ," ಎಂದು ಹೇಳಿದಳು.

ಭಾಮಿನಿಯು ಕೋಪಗೊಳ್ಳಲಿಲ್ಲ. ಸುಭದ್ರೆಯ ರುಕ್ಷಮಾತುಗಳ ಉತ್ತರವನ್ನು ನಗೆಮೊಗದಿಂದಲೆ ಹೇಳಿದಳು: "ತಂಗೀ. ರಾಮನು ಹೋದರೆ, ನಾನೊಬ್ಬಳೇ ಇಲ್ಲಿ ಹೇಗೆ ಇರಲಿ? ನನ್ನ ಅಣ್ಣಂದಿರ ಸಂಸಾರದಲ್ಲಿ ಬಹಳ ಹುಡುಗರಿದ್ದರು. ಇದುವರೆಗೆ ನಾನು ಆ ಹುಡುಗರ ಸಾನ್ನಿಧ್ಯದಲ್ಲಿ ಕಾಲಕಳೆದವಳು. ಹತ್ತಿರ ಹುಡುಗರಿರದಿದ್ದರೆ, ನನಗೆ ಹೊತ್ತೇ ಹೋಗದ ಹಾಗಾಗುತ್ತದೆ."

ಸುಭದ್ರೆಯು ಅತ್ತಿಗೆಯ ಮಾತಿಗೆ ಉತ್ತರ ಕೊಡಬಯಿಸಲಿಲ್ಲ. ರಾಮನ ಕಡೆಗೆ ಹೊರಳಿ:—"ಮಗು, ನಿಮ್ಮಪ್ಪನು ನಿನ್ನನ್ನು ನನ್ನ ಮನೆಗೆ ಕರೆದೊಯ್ಯೆಂದು ಹೇಳಿದ್ದಾನೆ. ನಾನು ಈಗ ನಿನ್ನನ್ನು ಕರೆದುಕೊಂಡು ಹೋಗುವೆನು. ಏಳು, ಅಂಗಿ-ಟೊಪ್ಪಿಗೆಗಳನ್ನು ಹಾಕಿಕೊಂಡು ಸಿದ್ಧನಾಗು. ನನಗೆ ಬಹಳ ಅವಸರವಿದೆ. ನಾನಿನ್ನು ಮೇಲೆ ಮಾರ್ಕೆಟಿಗೆ ಹೋಗಿ, ಸಾಮಾನುಗಳನ್ನು ಖರೀದಿ ಮಾಡಿಕೊಂಡು ಮನೆಗೆ ಹೋಗಬೇಕಾಗಿದೆ." ಎಂದು ನುಡಿದಳು.

ರಾಮನು ಗೊಂದಲಕ್ಕೊಳಗಾದನು. ಇವನು ಭಯಗೊಂಡವನಾಗಿ ಸಣ್ಣಮೋರೆ ಮಾಡಿ:-' ಅತ್ತೆ, ಅಪ್ಪನು ಹೋಗಬೇಡೆಂದು ಹೇಳಿದ್ದಾಳೆ," ಎಂದು ನುಡಿದು ಸುಮ್ಮನಾದನು. ರಾಮನ ಮನಃಸ್ಥಿತಿಯನ್ನು ತಿಳಿದು ಭಾಮಿನಿಯು ಮಾತಾಡಲಾರಂಭಿಸಿದಳು:—"ಮಗು ನಾನು ನಿನಗೆ ಹೋಗಬೇಡವೆಂದು ಯಾವಾಗ ಹೇಳಿದೆನಪ್ಪಾ? ಹೋಗೆಂದು

ಹೇಳಿದವಳಲ್ಲ; ಬೇಡೆಂದೂ ಅಂದವಳಲ್ಲ. ನೀನು ಇಲ್ಲಿಂದ ನಿನ್ನ ಅತ್ತೆಯ ಮನೆಗೆ ಹೋದರೆ. ನನಗೆ ಇಲ್ಲಿರುವದು ಬೇಜಾರವಾಗುವದೆಂದು ನುಡಿದದ್ದು ಮಾತ್ರ ನಿಜವು.''

ರಾಮನು ಯಾವ ಮಾತನ್ನೂ ಆಡಲಿಲ್ಲ. ಮಲತಾಯಿಯ ಶೀರಸನಿಯಕ್ಕೆ ಬಂದು, ಅವಳ ಸೆರಗನ್ನು ಹಿಡಕೊಂಡು ನಿಂತುಬಿಟ್ಟನು. ಭಾಮಿನಿಯು ಅವನ ತಲೆಯ ಮೇಲೆ ಕೈಯಾಡಿಸುತ್ತ ನಗೆಮೊಗದಿಂದ ''ತಂಗಿ; ಇವನು ನಿನ್ನೊಡನೆ ಬರಲಿಕ್ಕೆ ಮನಸ್ಸಿಲ್ಲದವನಾಗಿದ್ದಾನೆ-'' ಎಂದು ಹೇಳಿದಳು.


ಲಜ್ಜೆಯಿಂದಲೂ ಕೋಪದಿಂದಲೂ ಸುಭದ್ರೆಯ ಮುಖವು ಕಪ್ಪಿಟ್ಟಿತು. ಈ ನಾಗರಿಕ ರಮಣಿಯು ಎಷ್ಟೇ ಓದು-ಬರೆಹ ಕಲಿತಿದ್ದರೂ ತನ್ನ ಆ ವಿಕಾರಗಳನ್ನು ಹತ್ತಿಕ್ಕಿಕೊಳ್ಳಲಸಮರ್ಥಳಾಗಿ ಇಂತು ನುಡಿದಳು:—''ರಾಮನು ನನ್ನೊಡನೆ ಹೊರಡುವದು ಉಚಿತವಾದದ್ದು. ನೀನು ಅವನಿಗೆ ಅನ್ಯಾಯರೀತಿಯಿಂದ ಸಲುಗೆಯನ್ನು ಕೊಡದಿದ್ದರೆ, ಅವನು ತನ್ನ ತಂದೆಯ ಮಾತನ್ನು ಮೀರುತ್ತಿರಲಿಲ್ಲವೆಂದೇ ನಾನು ಭಾವಿಸಿರುವೆನು.''

ಭಾಮಿನಿಗೆ ಕೋಪವುಂಟಾಯಿತು. ಇವಳ ತುಟಿಗಳು ಕೊಂಚ ನಡುಗಿದವು; ಆದರೆ ಮುತ್ತೆ ಯಾವ ಪರಿವರ್ತನೆಯೂ ಕಂಡುಬರಲಿಲ್ಲ. ಇವಳು ಸೌಮ್ಯ ರೀತಿಯಿಂದಲೆ ಹೀಗೆ ಹೇಳಹತ್ತಿದಳು:—''ತಂಗಿ, ಮುದುಕರಾಗ ಬಂದಿದ್ದ ನಮ್ಮಂಥವರೂ ಉಚಿತವನ್ನು ಆಚರಿಸಲಾರದವರಾಗಿರುವೆವು. ರಾಮನಿನ್ನೂ ಹಸುಗೂಸು. ಇವನಿಗೆ ಉಚಿತಾನುಚಿತಗಳ ತಿಳುವಳಿಕೆಯೆಲ್ಲಿಯದು? ತಂಗಿ, ನಾನು ಇವನಿಗೆ ಅಚ್ಚೆಗಲಿಸಿರುವೆನೆಂದು ಅಂದೆಯಲ್ಲವೆ? ಆದರೆ ಅದಕ್ಕಾಗಿ ನೀನು ಚಿಂತಿಸುವ ಕಾರಣವಿಲ್ಲ. ಅಣ್ಣಂದಿರ ಹಲವು ಎಳೆಮಕ್ಕಳನ್ನು ನಾನು ದೊಡ್ಡವರನ್ನಾಗಿ ಮಾಡಿದ್ದೇನೆ. ಹುಡುಗರಿಗೆ ಯಾವುದು ಹಿತಕರವು, ಯಾವುದು ಅಹಿತಕರವು? ಎಂಬುದು ನಿನಗಿಂತಲೂ ನನಗೆ ಚನ್ನಾಗಿ ತೊಳೆಯುತ್ತಿದೆ.''

“ನಾನು ಅಣ್ಣನಿಗೆ ಪತ್ರ ಬರೆಯುವೆನು” ಸುಭದ್ರೆಯು ಕಠೋರ ಸ್ವರದಿಂದಲೆ ನುಡಿದಳು.

“ಬರೆ, ನಾನು ಬೇಡೆನ್ನುವದಿಲ್ಲ. ಅವರು ಅಲಹಾಬಾದದಲ್ಲಿ ಕುಳಿತು ಕೊಡುವ ಅಪ್ಪಣೆಗಳನ್ನು ಪಾಲಿಸುವದಕ್ಕಿಂತ ಇಲ್ಲಿಯ ನನ್ನ ಕರ್ತವ್ಯವನ್ನು ಪಾಲಿಸುವದು ಶ್ರೇಯಸ್ಕರವೆಂದು ನಾನು ಭಾವಿಸುತ್ತೇನೆ. ಏನೇ ಇರಲಿ, ತಂಗೀ, ಈ ಪ್ರಸಂಗದಲ್ಲಿ ನಾನೊಂದು ಮಾತು ನಿನಗೆ ಹೇಳಿಡುತ್ತೇನೆ. ಇದನ್ನು ಚನ್ನಾಗಿ ನೆನಪಿನಲ್ಲಿಟ್ಟುಕೋ. ನಾನು ವಯಸ್ಸಿನಿಂದ ನಿನಗಿಂತ ಹಿರಿಯಳು; ಸಂಬಂಧದಿಂದಲೂ ಹಿರಿಯಳು. ಕಾರಣ ನೀನು ನನ್ನ ಮೇಲೆ ನಿನ್ನ ಅಭಿಮಾನವನ್ನು ತೋರಿಸಲಾರೆ.” ಭಾಮಿನಿಯು ತುಸ ನಕ್ಕು, ಮತ್ತೆ ಹೇಳಹತ್ತಿದಳು: “ತಂಗೀ, ಇಂದು ನಾನು ನಿನ್ನನ್ನು ಬಹಳವಾಗಿ ಕರೆದೆನು; ಆದರೆ ಸಿಟ್ಟಿನ ಭರದಲ್ಲಿರುವ ನೀನು ನನ್ನ ಸಮೀಪಕ್ಕೆ ಕೂಡ ಬರಲಿಲ್ಲ; ಕುಳ್ಳಿರಲಿಲ್ಲ; ಆದರೆ ಮುಂದೆ ಒಂದು ದಿನ ನೀನೇ ನಿನ್ನ ಅಂತಃಪ್ರೇರಣೆಯಿಂದ ಈ ನಿನ್ನ ಅತ್ತಿಗೆಯನ್ನು ಹುಡುಕಿಕೊಂಡು ಈ ಮನೆಗೆ ಬರುವೆ; ಈ ಅತ್ತಿಗೆಯ ಹತ್ತಿರ ಕುಳಿತು ಸ್ನೇಹ ಸಂಭಾಷಣೆ ಮಾಡುವೆ.

ಸುಭದ್ರೆಯು ಈ ಮಾತಿನ ಉತ್ತರ ಕೊಡಲಿಚ್ಛಿಸಲಿಲ್ಲ. ಅವಳು “ಇಂದು ನನಗೆ ಅವಕಾಶವಿಲ್ಲದಾಗಿದೆ. ಹೋಗಿ ಬರುವೆನು. ನಮಸ್ಕಾರ” ಎಂದಂದು, ಭರದಿಂದ ಹೊರಬಿದ್ದಳು. ಮೊಟರಿನಲ್ಲಿ ಕುಳಿತ ಬಳಿಕ ಮೋರೆಯೆತ್ತಿ ಮತ್ತೆ ಅಣ್ಣನ ಮನೆಯ ಕಡೆಗೆ ನೋಡಿದಳು. ಭಾಮಿನಿಯೂ ರಾಮನೂ ಚಂದ್ರಶಾಲೆಯಲ್ಲಿಯ ಗಜಗಳನ್ನು ಹಿಡಕೊಂಡು ನಿಂತು, ತನ್ನನ್ನೇ ನೋಡುತ್ತಿರುವುದನ್ನು ಕಂಡಳು.



ಋಣಮುಕ್ತ ಮಾಡುವೆಯಾ?

ರಂಗರಾಯನು ಏಳು ದಿನಗಳ ರಜೆಯನ್ನು ತಕ್ಕೊಂಡಿದ್ದನು; ಆದರೆ ಹದಿನೈದು ದಿನಗಳನ್ನು ಮುಂಬಯಿಯಲ್ಲೇ ಕಳೆದನು. ಬಳಿಕ ಒಂದು ದಿನ ಸಾಯಂಕಾಲವಲ್ಲಿ ಮತ್ತೆ ತನ್ನ ಮನೆಗೆ ಬಂದನು. ರಾಮನು ಬಾಗಿಲ ಹತ್ತಿರ ಕುಳಿತಿದ್ದನು. ಅವನ ಸಮೀಪದಲ್ಲಿ ಅತ್ತಿತ್ತ ಕಾಗದ ಅಂಟು, ದಾರ ಮುಂತಾದವು ಬಿದ್ದಿದ್ದವು. ರಾಮನು ಈ ಒಡವೆಗಳನ್ನು ಪಯೋಗಿಸಿ ಯಾವುದೋ ಒಂದು ಕೆಲಸ ಮಾಡುವುದರಲ್ಲಿ ತಲ್ಲೀನನಾಗಿದ್ದನು. ಕಾರಣ ಅವನು ಕೆಲ ಕಾಲ ತಂದೆ ಬಂದುದನ್ನು ನೋಡಲಿಲ್ಲ. ರಂಗರಾಯನಾದರೂ ಮಗನ ಆಟವನ್ನು ನೋಡುತ್ತ ನಿಂತುಬಿಟ್ಟನು. ಮುಂದೆ ತುಸ ಹೊತ್ತಿನ ಮೇಲೆ ರಾಮನು ಮುಖವೆತ್ತಿ ನೋಡಿದನು. ತಂದೆಯನ್ನು ಕಂಡನು. ಎದ್ದು ಬಂದನು. ಸಾಷ್ಟಾಂಗ ನಮಸ್ಕಾರ ಮಾಡಿದನು. ಹಿರಿಯರನ್ನು ಕಂಡೊಡನೆ ನಮಸ್ಕಾರ ಮಾಡಬೇಕೆಂಬ ಶಿಕ್ಷಣದಲ್ಲಿ ರಾಮನು ಇನ್ನೂ ಪೂರಾ ನುರಿತಿರಲಿಲ್ಲವೆಂಬುದು ಅವನ ಮುಖಮುದ್ರೆಯಿಂದ ಕಂಡುಬರುವಂತಿತ್ತು. ರಂಗರಾಯನಿಗೆ ಈ ನಮಸ್ಕಾರದ ಪದ್ಧತಿಯು ಪ್ರೀತಿಯನ್ನುಂಟು ಮಾಡದಿದ್ದರೂ, ವಿಸ್ಮಯಕರವಾಗಿ ಕಂಡಿತು. ಅವನು ಅತ್ತಿತ್ತ ಅವ್ಯವಸ್ಥೆಯಿಂದ ಬಿದ್ದುಕೊಂಡಿದ್ದ ಕಾಗದ-ಸಿಬಿಕೆ-ದಾರಗಳ ಕಡೆಗೆ ನೋಡಿ: "ರಾಮೂ, ಇವೇನು? ಇಲ್ಲಿ ಹೀಗೇಕೆ ಬಿದ್ದಿವೆ?" ಎಂದು ಕೇಳಿದನು.

ರಾಮನು ಒಮ್ಮೆಲೆ ರಹಸ್ಯಭೇದವನ್ನು ಮಾಡಬಯಸಲಿಲ್ಲ. "ಅಪ್ಪಾ, ನಾನೇನು ಮಾಡುತ್ತಿದ್ದೇನೆಂಬದನ್ನು ನೀನೇ ಹೇಳಿಕೊಡು, ನೋಡೋಣ" ಎಂದು ಅಂದನು.

"ನನಗೆ ಹೇಗೆ ಗೊತ್ತಾಗಬೇಕಪ್ಪಾ? ನೀನೇ ಹೇಳಿ ಬಿಡು" ರಂಗರಾಯನಂದನು.

ರಾಮನು ಚಪ್ಪಾಳೆ ಬಾರಿಸಿ ಮಹದಾನಂದದಿಂದ "ಅಪ್ಪಾ, ನಿನಗೆ ಗೊತ್ತಾಗಲಿಲ್ಲವೆ? ನಾನು ಆಕಾಶದೀಪವನ್ನು ಮಾಡುತ್ತಿದ್ದೆನು," ಎಂದು ನುಡಿದನು.

“ಆಕಾಶದೀಪ ಅಂದರೇನು? ಅದನ್ನೇಕೆ ಮಾಡುತ್ತಿದ್ದೆ?” ರಂಗರಾಯನು ಕೇಳಿದನು.

ರಾಮನು ಆಕಾಶದೀಪದ ಅದ್ಭುತ ವಿವರಣೆಯನ್ನು ಇಂದು ಮುಂಜಾವಿನಲ್ಲಿ ತಾಯಿಯಿಂದ ಕೇಳಿಕೊಂಡಿದ್ದನ್ನೇ ಹೇಳಹತ್ತಿದನು: “ಇನ್ನು ಬರುವುದು ಕಾರ್ತಿಕಮಾಸ. ಆ ಮಾಸದಲ್ಲಿ ದೀಪಕ್ಕೆ ಬಹಳ ಮಹತ್ವವಿರುವದಂತೆ. ಮನೆಯ ಮುಂದೆ ಉದ್ದನ್ನ ಬಿದಿರ ನಿಲ್ಲಿಸಿ, ಅದಕ್ಕೆ ಆಕಾಶ ದೀಪವನ್ನು ಕಟ್ಟಬೇಕು. ಸ್ವರ್ಗದಲ್ಲಿರುವ ನಮ್ಮ ಅಜ್ಜ-ಮುತ್ತಜ್ಜರು ಈ ಬೆಳಕನ್ನು ನೋಡಿ ಸಂತೋಷಬಟ್ಟು ನಮ್ಮನ್ನು ಆಶೀರ್ವದಿಸುವರು.”

ರಂಗರಾಯನ ಮನಸ್ಸು ಶಾಂತವಿರಲಿಲ್ಲ. ಮಗನ ಭಾವಿಕತನದ ಮಾತುಗಳನ್ನು ಕೇಳಿ ಇವನಿಗೆ ತುಂಬ ಕೋಪವುಂಟಾಯಿತು. “ಪಿತೃಪುರುಷರು ಸ್ವರ್ಗದಲ್ಲಿರುವರೇ? ಅವರು ನಿನ್ನ ಈ ದೀಪವನ್ನು ನೋಡುವರೇ? ನಿನಗೆ ಆಶೀರ್ವಾದ ಮಾಡುವರೇ? ಮೂರ್ಖನೆ, ನಡೆಯತ್ತ!” ಎಂದಂದು, ಸಿದ್ಧವಾಗುತಲಿದ್ದ ಆಕಾಶದೀಪವನ್ನು ಒದ್ದುಬಿಟ್ಟನು! ಆಕಾಶದೀಪವು ಮುರಿದು ಹೋಗಿ ಅತ್ತಿತ್ತ ಹರಡಿ ಹೋಯಿತು.

ತನ್ನ ಪ್ರೀತಿಯ ಆಕಾಶದೀಪವು ಮುರಿದು ಹೋಗಿ ಅತ್ತಿತ್ತ ಹೊರಳಾಡುತ್ತಿರುವದನ್ನು ಕಂಡು ರಾಮನಿಗೆ ಬಹಳ ದುಃಖವಾಯಿತು. ಕಣ್ಣುಗಳಿಂದ ಅಶ್ರುಗಳುದುರಹತ್ತಿದವು. ಇನ್ನು ಇವನು ದೊಡ್ಡ ದನಿಯಿಂದ ಅಳುವುದರಲ್ಲಿದ್ದನು. ಅಂತಸ್ತಿನ ಮೇಲಿದ್ದು ಇದನ್ನೆಲ್ಲ ನೋಡಿದ ಭಾಮಿನಿಯು ಕೋಮಲ ಸ್ವರದಿಂದ: “ಅಪ್ಪಾ ರಾಮು, ಅಳಬೇಡ ಸುಮ್ಮನಾಗು. ಇಲ್ಲಿ ಬಾ. ನಾನು ನಾಳಿನ ದಿನ ನಿನಗೆ ಅದಕ್ಕೂ ಚಂದವಾದ ಆಕಾಶದೀಪವನ್ನು ಪೇಟೆಯಿಂದ ತರಿಸಿ ಕೊಡುವೆನು.” ಎಂದು ಉಚ್ಚರಿಸಿದಳು. ರಾಮನು ಕಣ್ಣು ಒರಸಿಕೊಳ್ಳುತ್ತ ತಾಯಿಯ ಬಳಿಗೆ ನಡೆದನು. ರಂಗರಾಯನು ಅತ್ತಿತ್ತ ನೋಡದೆ, ರಭಸದಿಂದ ಹೊರಟು, ತನ್ನ ಕೋಣೆಯನ್ನು ಪ್ರವೇಶಿಸಿದನು. ಕೊಂಚಹೊತ್ತಿನ ಮೇಲೆ ಆ ಕೋಣೆಯಲ್ಲಿ ಟುನ್ ಟುನ್ ಟುನ್ ಎಂಬ ಗಂಟೆಯ

ಸಪ್ಪಳವಾಯಿತು; ಆದರೆ ಆ ಗಂಟೆಯ ಸಪ್ಪಳದ ಇಂಗಿತದಂತೆ ಸೇವಕರಾರೂ ಆ ಕೋಣೆಯನ್ನು ಪ್ರವೇಶಿಸಲಿಲ್ಲ.

'ಖಾದೀರ' ಎಂದು ರಂಗರಾಯನು ಕೂಗಿದನು; ಆದರೆ ಖಾದೀರನು ಬರಲಿಲ್ಲ. ಕೆಲ ಹೊತ್ತಿನ ಮೇಲೆ ರಂಗರಾಯನು ಮತ್ತೆ 'ಲಚೀಮ' ಎಂದು ಕೂಗಿದನು. ಲಚೀಮನೂ ಬರಲಿಲ್ಲ; ಆದರೆ ತುಸ ಹೊತ್ತಿನ ತರುವಾಯ ಅಡುಗೆಯ ಆಚಾರಿಯಾಗಿದ್ದ ಶೇಷನು ಕೋಣೆಯನ್ನು ಪ್ರವೇಶಿಸಿ, ರಂಗರಾಯನ ಹತ್ತರ ಹೋಗಿ, ವಿನಯದಿಂದ ನಿಂತುಕೊಂಡನು.

"ಮೂರ್ಖರೆ, ಒದರಿ-ಒದರಿ ಸಾಕಾಗಿ ಹೋಯಿತು! ಎಲ್ಲಿಗೆ ಹೋಗಿದ್ದಿರಿ? ಜೀವದಿಂದಾದರೂ ಇದ್ದೀರೊ-ಇಲ್ಲವೊ?" ರಂಗರಾಯನು ಹೆಚ್ಚುತ್ತಲಿರುವ ಕೋಪದಿಂದ ನುಡಿದನು.

"ಮನೆಯಲ್ಲಿಯೇ ಇದ್ದೆನು. ಕೆಲಸದಲ್ಲಿ ತೊಡಗಿದ್ದೆನು. ಕಾರಣ ಬರಲಿಕ್ಕೆ ತುಸ ತಡವಾಯಿತು." ಶೇಷನು ನಮ್ರತೆಯಿಂದ ನುಡಿದನು.

"ಖಾದೀರನೆಲ್ಲಿ?" ರಂಗರಾಯನು ಕೇಳಿದನು.

'ಖಾದಿರನು ತನ್ನಊರಿಗೆ ಹೋಗಿದ್ದಾನೆ.' ಶೇಷನು ಹೇಳಿದನು.

"ಅವನನ್ನು ಕಳುಹಿಕೊಟ್ಟವರಾರು? ಅವನು ನನ್ನನ್ನು ವಿಚಾರಿಸದೆ ಊರಿಗೆ ಹೋದದ್ದೇಕೆ?"

'ಬಾಯಿಸಾಹೇಬರು ಅವನಿಗೆ ಅಪ್ಪಣೆ ಕೊಟ್ಟು ಕಳುಹಿದ್ದಾರೆ.' ಶೇಷನು ಹೇಳಿದನು.

'ಲಚಿಮನೆಲ್ಲಿ?' ರಂಗರಾಯನು ಮತ್ತೆ ಕೇಳಿದನು.

'ಅವನೂ ತನ್ನ ಊರಿಗೆ ಹೋದನು. ಬಾಯಿಸಾಹೇಬರು ಅಪ್ಪಣೆ ಕೊಟ್ಟು ಕಳಿಸಿದರು.'

ರಂಗರಾಯನು ಸ್ತಂಭಿತನಾಗಿ "ಈಗ ಈ ಮನೆಯಲ್ಲಿ ದಾಸ-ದಾಸಿಯರಾರೂ ಇಲ್ಲವೇನು?" ಎಂದು ಕೇಳಿದನು.

'ಅವರಿಬ್ಬರ ಹೊರತು ಎಲ್ಲರೂ ಇದ್ದೇವೆ.' ಶೇಷನು ನುಡಿದನು.

'ನೀವಾದರೂ ಯಾಕೆ ಇರುವಿರಿ? ದೂರ ಹಾಳಾಗಿ ಹೋಗಿರಿ!..' ಶೇಷನು ರಂಗರಾಯನ ಮುಂದಿನ ಮಾತನ್ನು ಕೇಳಲಿಕ್ಕೆ ಅಲ್ಲಿ ನಿಲ್ಲದೆ, ಭಯದಿಂದ ಪಲಾಯನ ಮಾಡಿದನು.

ರಂಗರಾಯನು ತಾನೇ ತನ್ನ ಬೂಟುಗಳನ್ನು ಬಿಚ್ಚಿಕೊಂಡನು. ಕೋಟನ್ನು ಕಳೆದು ಮೇಜಿನಮೇಲೆ ಚಲ್ಲಿಕೊಟ್ಟನು. ಚಣ್ಣವನ್ನು ತೆಗೆದು ಕುರ್ಚಿಯ ಮೇಲೆ ಬೀಳುವಂತೆ ಬಿಸುಟಿದನು; ಆದರೆ ಅದು ಕುರ್ಚಿಯ ಮೇಲೆ ಬೀಳದೆ, ನೆಲದ ಮೇಲೆ ಬಿದ್ದು ಹೊರಳಾಡಹತ್ತಿತು. ಕಾಲರ-ನೆಕ್ಟಾಯಿಗಳನ್ನು ತೆಗೆದು ಮೇಜಿನ ಮೇಲೆ ಒಗೆದು, ಬಳಿಕ ಕುರ್ಚಿಯ ಮೇಲೆ ಕುಳಿತುಕೊಂಡನು. ಅತ್ತಿತ್ತ ನೋಡಿದನು. ಅವನ ದೃಷ್ಟಿಯು ಹತ್ತಿರದ ಮೇಜಿನ ಮೇಲಿದ್ದ ಒಂದು ಸಣ್ಣ ಪುಸ್ತಕದ ಕಡೆಗೆ ಹರಿಯಿತು. ರಂಗರಾಯನು ಕುತೂಹಲತೆಯಿಂದ ಅದನ್ನು ಕೈಯಲ್ಲಿ ತಕ್ಕೊಂಡು ನೋಡಿದನು. ಮೇಲೆ 'ಸಂಸಾರದ ಜಮಾಖರ್ಚಿನ ವಹಿ' ಎಂದು ಬರೆದಿತ್ತು. ಸ್ಪಷ್ಟವಾದ ಬರೆಹ. ಸುಂದರವಾದ ಅಕ್ಷರಗಳು. ರಂಗರಾಯನ ಕುತೂಹಲತೆಯು ಬೆಳೆಯುತ್ತ ಹೋಯಿತು. ಮೇಲಿನ ಪಾನನ್ನು ತೆಗೆದು ನೋಡಿದನು. ನಿಜವಾಗಿಯೂ ಅದು ತನ್ನ ಸಂಸಾರದ ಜಮಾಖರ್ಚಿನ ಪುಸ್ತಕವಾಗಿತ್ತು. ಜಮೆಯ ಹಾಗು ಖರ್ಚಿನ ರಕಮುಗಳೂ ಅವುಗಳ ವಿವರಣೆಗಳೂ ಸ್ಪಷ್ಟವಾಗಿ ಬರೆಯಲ್ಪಟ್ಟಿದ್ದವು. ರಂಗರಾಯನು ಅದನ್ನು ಒದಿಕೊಳ್ಳುತ್ತಿರುವಾಗ ತರುಣಿಯೊಬ್ಬಳು ಆ ಕೋಣೆಯಲ್ಲಿ ಕಾಲಿಟ್ಟಳು. ರಂಗರಾಯನು ತೀರ ಅಲ್ಪ ಕಾಲದ ಮಟ್ಟಿಗೆ ಮಾತ್ರ ದೃಷ್ಟಿಯನ್ನು ಹೊರಳಿಸಿ. ಆ ಯುವತಿಯನ್ನು ನೋಡಿಕೊಂಡನು; ಮತ್ತೆ ಪುಸ್ತಕದ ಮೇಲೆ ನೋಟವನ್ನಿರಿಸಿದನು.

ಆಗಂತುಕ ರಮಣಿಯು ಹತ್ತಿರ ಬಂದು ರಂಗರಾಯನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಎದ್ದು ನಿಂತಳು. ಆದರೂ ರಂಗರಾಯನು ನೋಟವನ್ನು ಹೊರಳಿಸಲಿಲ್ಲ. ಆಗಂತುಕ ರಮಣಿಯು "ಇಂದು ನಿಮ್ಮ ಊಟವಾಗಿರಲಿಕ್ಕಿಲ್ಲ. ಹೊಟ್ಟೆ ಹಸಿದಿರಬಹುದು. ಉಪಾಹಾರ ಮಾಡುವಿರೋ? ಇಲ್ಲವೆ ಇನ್ನು ತುಸ ಹೊತ್ತಿನಮೇಲೆ ಊಟ ಮಾಡು

ವಿರೊ? ಈಗ ಜಹಾ ತಕ್ಕೊಂಡರೆ, ರಾತ್ರಿಯ ಊಟವು ನೆಟ್ಟಗಾಗುವದಿಲ್ಲ." ಎಂದು ಹೇಳಿದಳು.

"ನಾನು ಊಟ ಮಾಡುವದಿಲ್ಲ."

"ಊಟ ಬೇಡವಾಗಿದ್ದರೆ ಬಿಡಿರಿ; ಏಳಿರಿ. ಕೈಕಾಲು ತೊಳೆದು ಕೊಳ್ಳಿರಿ. ಉಪಾಹಾರದ ಸಾಮಾನುಗಳು ಸಿದ್ಧವಾಗಿವೆ. ನೀವು ಅವುಗಳನ್ನು ತಿನ್ನುವಷ್ಟರಲ್ಲಿಯೇ ನಾನು ಸರಬತ್ತನ್ನು ಮಾಡಿ ತಂದು ಕೊಡುವೆನು; ನಡೆಯಿರಿ."

"ಈಗ ನನಗೆ ಏನೂ ಬೇಡ." ರಂಗರಾಯನು ಹೇಳಿದನು.

"ಹೀಗೇಕೆ ಮಾಡುವಿರಿ? ನಾನು ಪರಕೀಯಳಲ್ಲ. ನಾನು ನಿಮ್ಮ ಹೆಂಡತಿಯಾದ ಭಾಮಿನಿಯು. ನನ್ನ ಕಡೆಗೆ ಕಣ್ಣೆತ್ತಿ ನೋಡಿದರೆ, ಜನರು ನಿಮಗೆ ಛೀ-ಥೂ ಅನ್ನುವಂತಿಲ್ಲ!" ಆ ರಮಣಿಯು ನುಡಿದಳು.

"ನೀನು ನನ್ನ ಹೆಂಡತಿಯಲ್ಲವೆಂದು ಅಂದವರಾರು? ನಾನೇನು ನಿನಗೆ ಹುಲಿ, ಕರಡಿ ಎಂದು ಸಂಬೋಧಿಸಿವೆನೆ?" ರಂಗರಾಯನು ಕೇಳಿದನು.

"ಸಂಬೋಧಿಸದಿದ್ದರೇನಾಯಿತು? ನಿಮ್ಮ ವೃತ್ತಿಯನ್ನು ನೋಡುತ್ತಿರಲು, ನೀವು ಹುಲಿ-ಕರಡಿಗಳನ್ನು ನೋಡಲಿಕ್ಕೆ ಭಯಗೊಳ್ಳುವಂತೆ ನನ್ನನ್ನು ನೋಡಲಿಕ್ಕೂ ಭಯಗೊಂಡಿರುವಿರೆಂಬಂತೆ ತೋರುತ್ತಿದೆ! ಇಲ್ಲವಾದರೆ, ಮನೆಬಿಟ್ಟು ಹೋಗಿ ಹಾಗೆ ಓಡಾಡುತ್ತಿದ್ದಿರಾ?" ಭಾಮಿನಿಯು ಕೇಳಿದಳು.

"ಬಿದರಿಕೆಯಿಂದ ಮನೆಬಿಟ್ಟು ಹೋದೆನೆಂದು ನಿನಗೆ ಹೇಳಿದವರಾರು? ಒಂದು ಕೆಲಸದ ಮೂಲಕ ಮುಂಬಯಿಗೆ ಹೋಗಬೇಕಾಗಿತ್ತು; ಹೋಗಿದ್ದೆನು. ಅದಿರಲಿ. ನೀನು ಸುಭದ್ರೆಯ ಸಂಗಡ ಜಗಳಾಡಿದೆಯೇಕೆ?" ರಂಗರಾಯನು ಕೇಳಿದನು.

"ಇದು ನಿಮ್ಮಲ್ಲಿಯೇ ಸಿದ್ಧವಾದ ಮಾತು. ಅವಳೆಂದೂ ಹೀಗೆ ಬರೆದಿರುವ ಸಂಭವವಿಲ್ಲ!"

"ನೀನು ಮಾವೀರನನ್ನು ಮನೆಬಿಡಿಸಿ ಹೊರಗೆ ಹಾಕಿದೆಯೇಕೆ?"

“ನಿಮಗೆ ಹೀಗೆ ಯಾರು ಹೇಳಿವರು? ನೀವು ಅವನಿಗೆ ಒಂದು ವರ್ಷದಿಂದಲೂ ಸಂಬಳ ಕೊಟ್ಟಿದ್ದಿಲ್ಲವಂತೆ. ಅವನು ತನ್ನ ಊರಿಗೆ ಹೋಗಬೇಕೆಂದು ಚಡಪಡಿಸುತ್ತಿದ್ದನು. ನಾನು ಅವನಿಗೆ ಕೊಡತಕ್ಕದ್ದೆಲ್ಲವನ್ನು ಕೊಟ್ಟು ಕಳುಹಿರುವೆನು.”

ರಂಗರಾಯನು ವಿಸ್ಮಿತನಾಗಿ ಕೇಳಿದನು:—“ಎಲ್ಲವನ್ನೂ ಕೊಟ್ಟೆಯಾ? ಹಾಗಾದರೆ ಇನ್ನು ಅವನು ಇಲ್ಲಿಗೆ ಬರುವದಿಲ್ಲ. ಲಚಿಮನು ಎಲ್ಲಿಗೆ ಹೋದನು?”

“ಸೇವಕರಿಗೆ ಸಕಾಲಕ್ಕೆ ಸಂಬಳವನ್ನು ಸಲ್ಲಿಸದೆ, ಅವರಿಂದ ಒತ್ತಾಯದಿಂದ ಕೆಲಸ ಮಾಡಿಸಿಕೊಳ್ಳುವದು ನ್ಯಾಯವಲ್ಲ! ಅವರಿಗೂ ನಿಮ್ಮಂತೆಯೇ ಮನೆ-ಹೆಂಡತಿ-ಮಕ್ಕಳು ಇರುವ ಸಂಭವವಿದೆ. ಲಚಿಮನು ಹೆಂಡತಿ-ಮಕ್ಕಳನ್ನು ನೋಡಿಬರಲಿಕ್ಕೆಂದು ಸ್ವಗ್ರಾಮಕ್ಕೆ ಹೋಗಿದ್ದಾನೆ.”

“ಒಳಿತು ಮಾಡಿರುವೆ! ಇನ್ನು ಈ ಮನೆಯನ್ನು ವಸಿಷ್ಠಮುನಿಯ ಆಶ್ರಮದಲ್ಲಿ ರೂಪಾಂತರಗೊಳಿಸಿಬಿಡು!” ರಂಗರಾಯನು ಜಮಾಖರ್ಚಿನ ಪಟ್ಟಿಯನ್ನು ನೋಡುತ್ತ ಮಾತಾಡುತ್ತಿದ್ದನು. ಅಕಸ್ಮಾತ್ತಾಗಿ ಜಮಾಖರ್ಚಿನ ಪುಸ್ತಕದಲ್ಲಿಯ ಒಂದು ದೊಡ್ಡ ಅಂಕಿಯ ಕಡೆಗೆ ಅವನ ದೃಷ್ಟಿಯು ಹರಿಯಿತು. ಅವನು ಚಕಿತನಾಗಿ “ಇದೇನು ನಾನೂರಾ ಆರು ರೂಪಾಯಿ!........” ಎಂದು ಕೇಳಿದನು.

“ಅದು ಕಿರಾಣಿ ಅಂಗಡಿಕಾರನ ಬಾಕಿಯು. ಇನ್ನೂ ಇನ್ನೂರು ರೂಪಾಯಿಗಳನ್ನು ಕೊಡಬೇಕಾಗಿದೆ. ಮುಂದಿನ ತಿಂಗಳಲ್ಲಿ ಕೊಡುವೆನೆಂದು ಹೇಳಿ ಕಳುಹಿದ್ದೇನೆ.”

ರಂಗರಾಯನು ವಿಸ್ಮಯದಿಂದ ನುಡಿದನು:—“ಕಿರಾಣಿ ಅಂಗಡಿಯ ಬಾಕಿ ಆರುನೂರು ರೂಪಾಯಿಗಳೇ!”

ಭಾಮಿನಿಯು ನಗುತ್ತ ಹೇಳಹತ್ತಿದಳು:–ಆಗದೇನು ಮಾಡೀತು? ಮೇಲಿಂದ ಮೇಲೆ ಬಾಕಿಯನ್ನು ತೀರಿಸುವಂತಿಲ್ಲ. ಜಮಾಖರ್ಚಿನ

ಪುಸ್ತಕವನ್ನು ನೋಡುವಂತಿಲ್ಲ. ಹೀಗೆ ನೀವು ಎರಡು ವರ್ಷ ದುರ್ಲಕ್ಷ್ಯ ಮಾಡಿದ್ದರಿಂದ ಬಾಕಿಯು ಬೆಳೆದು ದೊಡ್ಡದಾಗಿದೆ."

"ನೀನು ಅಂಗಡಿಕಾರನ ಬಾಕಿಯ ಪಟ್ಟಿಯನ್ನು ನೋಡಿದೆಯಾ?" ರಂಗರಾಯನು ಮುಖವೆತ್ತಿ ಕೇಳಿದನು.

"ನೋಡದೆ ರೂಪಾಯಿಗಳನ್ನೇಕೆ ಕೊಡಲಿ?"

ರಂಗರಾಯನು ಪ್ರತಿಮಾತನಾಡಲಿಲ್ಲ. ತಾನಿದುವರೆಗೆ ಸಂಸಾರದ ವೆಚ್ಚದ ವಿಷಯದಲ್ಲಿ ಅನಾಸ್ಥೆಯಿಂದಿದ್ದುದು ಅನುಚಿತವಾಯಿತೆಂದು ಅವನಿಗೆ ಹೊಳೆಯಿತು. ಭಾಮಿನಿಗೆ ಪತಿಯ ಈ ಮನಃಸ್ಥಿತಿಯು ಹೊಳೆಯಿತು. ಆಗ ಅವಳು:-"ಸುಮ್ಮನಾದಿರಲ್ಲ; ಯಾವ ವಿಚಾರ ಮಾಡುತ್ತಿರುವಿರಿ?" ಎಂದು ಕೇಳಿದಳು.

ರಂಗರಾಯನು ಕೊಂಚ ನಗುವನ್ನು ತಂದುಕೊಂಡು ಹೇಳಹತ್ತಿದನು:—"ನಾನು ಸಂಬಳವನ್ನು ತಕ್ಕೊಂಡು ಹದಿನೈದು ದಿನಗಳಾದವು. ಇನ್ನು ಹದಿನೈದು ದಿನಗಳ ವರೆಗೆ ಸಂಬಳದ ರೂಪಾಯಿಗಳು ಕೈಸೇರುವಂತಿಲ್ಲ. ನೀನಾದರೊ ಸಂಬಳದ ಎಲ್ಲ ರೂಪಾಯಿಗಳನ್ನು ಹೀಗೆ ವೆಚ್ಚ ಮಾಡಿಬಿಟ್ಟಿರುವೆ. ಇನ್ನು ರೂಪಾಯಿಗಳು ಬೇಕಾದರೆ ಹೇಗೆ ಮಾಡಬೇಕೆಂಬ ಚಿಂತೆಯು ನನ್ನನ್ನು ಬಾಧಿಸಹತ್ತಿದೆ."

ಭಾಮಿನಿಯು ತಲೆಯಲ್ಲಾಡಿಸಿ ನುಡಿಯತೊಡಗಿದಳು:-"ನೀವು ಈ ವಿಷಯದಲ್ಲಿ ಕೊಂಚವೂ ಚಿಂತಿಸುವ ಕಾರಣವಿಲ್ಲ. ನಾನೇನು ಸಣ್ಣ ಹುಡುಗಿಯೆ? ಮುಂದಿನ ಆಲೋಚನೆಯಿಲ್ಲದೆ ವೆಚ್ಚ ಮಾಡತಕ್ಕವಳು ನಾನಲ್ಲ. ಇನ್ನು ಹದಿನೈದೇ ದಿನಗಳೇಕೆ, ಒಂದು ತಿಂಗಳವರೆಗೆ ನೀವು ರೂಪಾಯಿಗಳನ್ನು ತಂದು ಕೊಡದಿದ್ದರೂ ನಾನು ಬಾಳುವೆಯನ್ನು ಸುಸೂತ್ರವಾಗಿ ಸಾಗಿಸಬಲ್ಲೆನು; ಆದರೆ ಇದುವರೆಗೆ ನೀವು ನಡೆಸಿರುವ ಈ ಕೊಡ-ಕೊಳ್ಳುವ ವ್ಯವಹಾರವು ಸರಿಯಾದುದಲ್ಲ! ನಿಮ್ಮ ದುರ್ಲಕ್ಷ್ಯದಿಂದ ಜನರಿಗೆ ಕೊಡಬೇಕಾದ ಹಣವು ಮಿತಿಮೀರಿ ಹೋಗಿದೆ. ಗೌಳಿಗನು ತನಗೆ ನೂರೈವತ್ತು ರೂಪಾಯಿಗಳು ದೊರೆಯಬೇಕೆಂದು ಹೇಳಿದನು. ಅಗಸನು ತನಗೆ ಐವತ್ತು ರೂಪಾಯಿ ಬರ

ತಕ್ಕದ್ದಿದೆಯೆಂದನು. ಇವರಂತೆಯೇ ಇನ್ನೂ ಹಲವರು ಬೇಡತಕ್ಕವರಿದ್ದಾರೆ. ನಾನು ಇವರೆಲ್ಲರ ಬಾಕಿಯನ್ನು ಮುಂದಿನ ತಿಂಗಳಲ್ಲಿ ತೀರಿಸುವ ಸಂಕಲ್ಪ ಮಾಡಿಕೊಂಡಿದ್ದೇನೆ.''

''ಅವರೇನು ಮನಬಂದಂತೆ ಕೇಳುವರು! ಅವರು ಕೇಳಿದಂತೆ ರೂಪಾಯಿ ಕೊಡಲಿಕ್ಕಾದೀತೇ?'' ರಂಗರಾಯನು ಭಯಗೊಂಡವನಾಗಿ ಕೇಳಿದನು.

''ಒಮ್ಮೆಲೆ ಕೊಡುವದು ಸಾಧ್ಯವಿಲ್ಲವೆಂಬದನ್ನು ನಾನೂ ಬಲ್ಲೆನು. ನಾನು ಈ ಬಾಕಿಯ ಹಣವನ್ನು ಕ್ರಮವಾಗಿ ಕಡಿಮೆಮಾಡುತ್ತ ಹೋಗಿ, ನಾಲ್ಕಾರು ತಿಂಗಳುಗಳಲ್ಲಿ ತೀರಿಸಬೇಕೆಂದಿರುವೆನು. ನೀವು ಮತ್ತೆಲ್ಲಿಯೂ ಸಾಲ ಮಾಡಿಲ್ಲವಷ್ಟೇ? ಮರೆಮಾಜದೆ ಹೇಳಿರಿ. ಯಾವ ಸಂಗತಿಯನ್ನೂ ಮುಚ್ಚಿಟ್ಟುಕೊಳ್ಳಬೇಡಿರಿ.''

ರಂಗರಾಯನು ಹೆಂಡತಿಯ ಮೋರೆಯ ಮೇಲೆ ದೃಷ್ಟಿಯಿರಿಸಿ ಹೇಳಹತ್ತಿದನು:—'ಹೋದ ವರುಷದ ಬೇಸಿಗೆಯ ಬಿಡುವಿನಲ್ಲಿ ಮಹಾಬಳೇಶ್ವರಕ್ಕೆ ಹೋಗಿದ್ದೆನು. ಸಾವಿರ ರೂಪಾಯಿಗಳು ವೆಚ್ಚವಾದವು. ಈ ಹಣವನ್ನು ಪ್ರಾಮಿಸರಿ ನೋಟ ಬರಕೊಟ್ಟು ಸಾಲವಾಗಿ ತಕ್ಕೊಂಡಿದ್ದೆನು. ಅದನ್ನು ಇದು ವರೆಗೆ ತೀರಿಸಲಿಕ್ಕಾಗಿಲ್ಲ.''

ಭಾಮಿನಿಯು ಗಲ್ಲದ ಮೇಲೆ ಬೆರಳನ್ನಿಟ್ಟುಕೊಂಡು:-'ಅವ್ವಯ್ಯಾ, ಎಂಥ ಸಾಲಗುಳಿಕರು ನೀವು!' ಎಂದು ನುಡಿದಳು. ಕೆಲಹೊತ್ತು ಹಾಗೆಯೇ ನಿಂತಿದ್ದು, ಮತ್ತೆ ಮೋರೆಯ ಮೇಲೆ ನಗುವನ್ನು ತಂದುಕೊಂಡು ಹೇಳಹತ್ತಿದಳು:—'ನಿಮ್ಮ ಈ ಎಲ್ಲ ಸಾಲವನ್ನು ತೀರಿಸಲಿಕ್ಕೆ ನನಗೆ ಕನಿಷ್ಟ ಪಕ್ಷಕ್ಕೆ ಒಂದು ವರ್ಷದ ಅವಧಿಯು ಬೇಕು; ಮತ್ತೆಲ್ಲಿಯೂ ಸಾಲ ಮಾಡಿಲ್ಲವಷ್ಟೇ?''

''ಇಲ್ಲ, ಚಿಲ್ಲರೆ ಕೊಡಕೊಳ್ಳುವದು ಕೊಂಚ ಇದ್ದರೂ ಇರಬಹುದು; ಆದರೆ ಪ್ರಿಯೆ, ಇಹಜನ್ಮದಲ್ಲಿ ಋಣಮುಕ್ತನಾಗಬೇಕೆಂದು ನಾನೆಂದೂ ಆಶಿಸಿದವನಲ್ಲ. ಯಾಕಂದರೆ, ತಿಂಗಳ ಸಂಬಳ ತಿಂಗಳಿಗೆ ಸಾಲದಿರುವಾಗ, ಹಿಂದಿನ ಸಾಲವನ್ನು ತೀರಿಸುವದೆಂತು?''

“ಹೀಗೆಂದರೆ ಹೇಗೆ? ಸಾಲ ಮಾಡಿದ ಬಳಿಕ ಅದನ್ನು ತೀರಿಸಲೇಬೇಕು. ಋಣಗ್ರಸ್ತರಾಗಿ ಬಾಳುವೆ ಮಾಡುವದು ಬಹಳ ತಾಪದಾಯಕವು. ಸಾಲ ಕೊಟ್ಟವರ ಉಪಟಳವನ್ನು ತಡೆಯಲಾಗಸಲ್ಲ. ನಿಮಗೆ ಈ ವಿಷಯವಲ್ಲಿ ಏಂದೂ ಕೆಡಕೆನಿಸಿಲ್ಲವೆ?”

“ಕೆಡಕೆನಿಸದೇನು? ಆದರೆ ಉಪಾಯವೇ ಇಲ್ಲದಾಗಿದೆ. ಈ ಚಿಂತೆಯಿಂದ ಒಂದೊಂದು ದಿನ ನನಗೆ ಬೆಳತನಕ ನಿದ್ದೆ ಕೂಡ ಹತ್ತುವದಿಲ್ಲ. ಪ್ರಿಯೇ, ವಿಚಾರಿಸಿ ಹೇಳು. ನೀನು ನಿಜವಾಗಿಯೂ ನನ್ನನ್ನು ಋಣಮುಕ್ತನನ್ನಾಗಿ ಮಾಡುವೆಯಾ?”

ಭಾಮಿನಿಯ ಕಣ್ಣುಗಳು ಸಜಲವಾದವು. ಯಾವಳು ಅರ್ಧತಾಸಿನ ಮೊದಲು ಪತಿಯನ್ನು ಅರಿಯದಿದ್ದಳೋ, ಅವಳು ಈ ಅಲ್ಪಾವಕಾಶದಲ್ಲಿ ಪತಿಯ ನಿಜಸ್ಥಿತಿಯ ಪರಿಚಯ ಹೊಂದಿ ಸಹಾನುಭೂತಿಯುಳ್ಳವಳಾದಳು. ಪತಿಯ ಮನೋವ್ಯಥೆಯನ್ನು ತಿಳಿದು ತಾನೂ ವ್ಯಥೆಗೊಂಡಳು. ಕ್ಷಣಕಾಲ ನೀರವವಾಗಿ ನಿಂತುಕೊಂಡಳು. ಬಳಿಕ ಮೋರೆಯ ಮೇಲೆ ನಗುವನ್ನು ತಂದುಕೊಂಡು:—“ನೀವು ನಿರ್ಧಾಸ್ತರಾಗಿರಿ. ಅಲ್ಪಾವಧಿಯಲ್ಲಿ ನಾನು ನಿಮ್ಮನ್ನು ಋಣಮುಕ್ತರನ್ನಾಗಿ ಮಾಡುವೆನು.” ಎಂದು ಹೇಳಿದಳು.

“ಹೀಗೆ ಮಾಡಹೋದರೆ ನಾವೆಲ್ಲರೂ ಅಡಚಣಿಗಳನ್ನು ಅನುಭವಿಸಬೇಕಾಗಲಿಕ್ಕಿಲ್ಲವೆ?”

ಭಾಮಿನಿಯು ತಲೆಯಲ್ಲಾಡಿಸಿ ನಿರ್ಧಾರದಿಂದ ಮಾತಾಡಹತ್ತಿದಳು:—“ಇಲ್ಲ, ನಾನೆಂದೂ ಹಾಗೆ ಮಾಡಗೊಡುವದಿಲ್ಲ. ಸಂಸಾರದ ಈಗಳಿನ ಸ್ಥಿತಿಯಲ್ಲಿ ಯಾವ ಪರಿವರ್ತನೆಯನ್ನೂ ಮಾಡದೆ ಸಾಲತೀರಿಸುವೆನು. ನಿಮಗೆ ಸ್ವಲ್ಪ ಸಹ ಅಡಚಣಿಯಾಗದಂತೆ ಎಚ್ಚರದಿಂದಿರುವೆನು. ಮುಂದೆ ನೀವು ನಾನು ಹೇಗೆ ಸಾಲತೀರಿಸಿದೆನೆಂಬದನ್ನು ಭಾವಿಸದವರಾಗಿ ಬೆರಗಾಗುವಂತೆ ಕುಶಲತೆಯಿಂದ ವರ್ತಿಸುವೆನು.”

ರಂಗರಾಯನು ಮುಂದೆ ಮಾತಾಡದಾದನು. ಸುಮ್ಮನೆ ಕುಳಿತುಬಿಟ್ಟನು.

ಚನ್ನಾಗಿ ಊಟಮಾಡಿರಿ.

ಬಹು ದಿವಸ ಮೇಘಾಚ್ಛಾದಿತ ಆಕಾಶದ ವಾತಾವರಣದಲ್ಲಿ ವಾಸಿಸಿದ ತನ್ನ ಮೇಲೆ, ಇಂದು ಆ ಆಗಸದ ಒಂದು ಮೂಲೆಯಲ್ಲಿ ಬಾಲಸೂರ್ಯನುದಯಿಸಿ ಹೂಬಿಸಿಲ ಹರಡಿರುವನೆಂಬಂತೆ ರಂಗರಾಯನಿಗೆ ಭಾಸವಾಗಹತ್ತಿತು.

ಕಳೆದ ಹದಿನೈದು ದಿನಗಳ ಟಪಾಲಿನಿಂದ ಬಂದ ಕಾಗದ-ಪತ್ರಗಳು ಒಂದೇ ಸ್ಥಳದಲ್ಲಿ ಬಿದ್ದಿದ್ದುವು. ರಂಗರಾಯನು ಆ ಪತ್ರಗಳನ್ನು ಓದಿಕೊಂಡನು. ಅವಶ್ಯವಿದ್ದ ಪತ್ರಗಳಿಗೆ ಉತ್ತರಗಳನ್ನು ಬರೆದನು. ವರ್ತಮಾನಪತ್ರಗಳನ್ನು ಅವಲೋಕಿಸಿದನು. ಈ ಕೆಲಸವು ತೀರುವಷ್ಟರಲ್ಲಿ ಸಾಯಂಕಾಲವು ಕಳೆದುಹೋಯಿತು. ಏಕಾಗ್ರಮನಸ್ಸಿನಿಂದ ಕರ್ಮನಿರತನಾಗಿದ್ದ ರಂಗರಾಯನ ಮುಖಮುದ್ರೆಯನ್ನು ಈ ಸಮಯದಲ್ಲಿ ಯಾರಾದರೂ ದೂರದಿಂದ ನೋಡಿದ್ದರೆ, ಅವನ ಕರ್ತವ್ಯನಿಷ್ಠೆಯನ್ನೂ ಕಾರ್ಯತತ್ಪರತೆಯನ್ನೂ ಭಾವಿಸಿ ಶ್ರದ್ಧಾನ್ವಿತರಾಗದಿರುತ್ತಿರಲಿಲ್ಲ; ಆದರೆ ಇದು ರಂಗರಾಯನ ನಿಜವಾದ ಸ್ವಭಾವವಾಗಿರಲಿಲ್ಲ. ಆ ಅಧ್ಯಾಪಕನ ವಿಷಯದಲ್ಲಿ ಜನಮತವನ್ನು ಕಲುಷಿತಗೊಳಿಸುವದು ಈ ಕತೆಯ ಪ್ರಯೋಜನೀಯ ಸಂಗತಿಯಲ್ಲ. ಆದರೂ ಒಂದು ಮಾತನ್ನು ಇಲ್ಲಿ ಹೇಳಿಡುವದು ಅವಶ್ಯವಾಗಿದೆ. ಅದಾವುದೆಂದರೆ, ಅಧ್ಯಾಪಕನೆಂಬ ಕಾರಣದಿಂದ ನಟನೆಯಲ್ಲಿ ಹಿಂದೂಡುವೆನೆಂಬ ಹೆಮ್ಮೆಗಾರನು ನಿಷ್ಫಲ ಮನೋರಥನಾಗಿ ಕೊನೆಯಲ್ಲಿ ಹಿಂಜರಿಯಬೇಕಾಗುತ್ತಿತ್ತು.

ಕತ್ತಲೆಯಾಗುತ್ತಲೆ ರಂಗರಾಯನು ವಿದ್ಯುದ್ದೀಪದ ಬೆಣೆಯನ್ನೊತ್ತಿ ಬೆಳಕು ಮಾಡಿಕೊಂಡನು; ಹಾಗು ತಾನು ಒಂದು ಮಿನೀಟನ್ನು ಸಹ ನಿರುದ್ಯೋಗದಲ್ಲಿ ಕಳೆಯತಕ್ಕವನಲ್ಲವೆಂಬುದನ್ನು ತೋರುವದಕ್ಕಾಗಿ ತತ್ವಜ್ಞಾನದ ದೊಡ್ಡ ಹೊತ್ತಿಗೆಯೊಂದನ್ನು ತಕ್ಕೊಂಡು ಓದುತ್ತ ಕುಳಿತನು. ಸಾಯಂಕಾಲದ ತರುವಾಯದಲ್ಲಿ ರಂಗರಾಯನು ಹೀಗೆ ಕಾರ್ಯಾಸಕ್ತನಾಗಿರುವದನ್ನು ಪರಿಚಯಸ್ಥರಾರೂ ಕಂಡಿರಲಿಲ್ಲ.

ರಂಗರಾಯನು ಹೀಗೆ ಅಧ್ಯಯನದಲ್ಲಿ ನಿಮಗ್ನನಾಗಿರುವಾಗ ಪರಿಚಾರಿಕೆಯು ಬಂದು:—"ರಾಯರೆ, ಬಾಯಿಸಾಹೇಬರು ನಿಮ್ಮನ್ನು ಊಟಕ್ಕೆ ಕರೆಯುತ್ತಿದ್ದಾರೆ; ಬರಬೇಕು." ಎಂದು ಹೇಳಿದನು.

ರಂಗರಾಯನು ಗಡಿಯಾರದ ಕಡೆಗೆ ನೋಡಿ:—"ಇದು ನನ್ನ ಊಟದ ಸಮಯವಲ್ಲ; ಇನ್ನು ಐವತ್ತು ಮಿನೀಟುಗಳ ಅವಕಾಶವಿದೆ," ಎಂದು ನುಡಿದನು.

"ಬಾಯಿಸಾಹೇಬರು ತಾಟಿನಲ್ಲಿ ಬಡಿಸಹತ್ತಿದ್ದರು. ತೆಗೆದಿರಿಸಲಿಕ್ಕೆ ಹೇಳಲಿಯಾ?" ಪರಿಚಾರಿಕೆ ಕೇಳಿದಳು.

"ತೆಗೆದಿಡುವದೇ ಯೋಗ್ಯವಾದದ್ದು. ಅಡಿಗೆಯ ಆಚಾರಿಯು ಅಲ್ಲಿ ಇಲ್ಲವಾಗಿ ತೋರುತ್ತಿದೆ. ಅಂತೆಯೇ ಹೀಗೆ ವೇಳೆಯ ಗೊಂದಲವಾಗಿದೆ." ರಂಗರಾಯನಂದನು. ಪರಿಚಾರಿಕೆಯು ಬೇರೆ ಮಾತಾಡದೆ ಹೊರಟಳು. ತುಸ ಹೊತ್ತಿನ ಮೇಲೆ ರಂಗರಾಯನು ಅವಳನ್ನು ಕೂಗಿ: "ಬಡಿಸಿದ್ದನ್ನು ಎತ್ತಿ ತೆಗೆದಿರಿಸುವದು ತ್ರಾಸದಾಯಕವು. ನಾನು ಬರುವೆನೆಂದು ಹೇಳು," ಎಂದು ಹೇಳಿದನು.

ರಂಗರಾಯನು ಬಚ್ಚಲ ಮನೆಗೆ ಹೋದನು- ಆಚಾರಿಯು ಕಾಯ್ದ ನೀರಿನ ಚಂಬುವನ್ನೂ ಪಂಜೆಯನ್ನೂ ಹಿಡಕೊಂಡು ನಿಂತಿದ್ದನು. ರಂಗರಾಯನು ಕೈಕಾಲು ತೊಳೆದು ಒರಸಿಕೊಂಡು ಅಡುಗೆಯ ಮನೆಯನ್ನು ಹೊಕ್ಕನು. ಭೋಜನಶಾಲೆಯು ಬಹು ಸ್ವಚ್ಛವಾಗಿತ್ತು. ದಿನದ ಅವ್ಯವಸ್ಥೆಯಿರಲಿಲ್ಲ. ಸಾಮಾನುಗಳು ಅಲ್ಲಲ್ಲಿ ವ್ಯವಸ್ಥೆಯಿಂದ ಇರಿಸಲ್ಪಟ್ಟಿದ್ದುವು. ಒಂದೆಡೆಯಲ್ಲಿ ಮಣೆಯು ಇತ್ತು. ಅದರ ಮುಂದೆ ಬೆಳ್ಳಿಯ ದೊಡ್ಡ ತಾಟಿನಲ್ಲಿ ಅಡುಗೆಯ ಪದಾರ್ಥಗಳು ಅಚ್ಚುಕಟ್ಟುತನದಿಂದ ಬಡಿಸಲ್ಪಟ್ಟಿದ್ದವು. ಮಣೆಯ ಒಂದು ಬದಿಯಲ್ಲಿ ಲಕಲಕನೆ ಹೊಳೆಯುವ ತಂಬಿಗೆ-ಥಾಲಿಗಳಿದ್ದವು. ತಾಟಿನ ಪಕ್ಕದಲ್ಲಿ ಬೆಳ್ಳಿಯ ಬಟ್ಟಲುಗಳಿದ್ದವು. ಕೊಂಚ ದೂರದಲ್ಲಿ ಭಾಮಿನಿಯು ನೆಲದ ಮೇಲೆ ಕುಳಿತಿದ್ದಳು. ಹತ್ತಿರ ರಾಮನಿದ್ದನು.

ರಂಗರಾಯನು ಮಣೆಯ ಮೇಲೆ ಕುಳಿತು ಇಂತೆಂದೆನು:—“ನೀನು ನನ್ನೊಡನೆ ಊಟಮಾಡೆಯೆಂಬುದು ನನಗೆ ಗೊತ್ತುಂಟು; ಆದರೆ ರಾಮನೂ ನನ್ನ ಸಂಗಡ ಉಣ್ಣಲಾಗದೇನು?”

ಇದರ ಉತ್ತರವನ್ನು ರಾಮನೇ ಕೊಟ್ಟನು:-‘ಅಪ್ಪಾ, ಈಗ ನಾನೊಲ್ಲೆ. ನಾನು ದಿನಾಲು ಅವ್ವನ ಸಂಗಡ ಊಟ ಮಾಡುತ್ತೇನೆ.’

ರಂಗರಾಯನು ಬಡಿಸಿದ್ದ ವಿಪುಲ ಪದಾರ್ಥಗಳನ್ನು ನೋಡಿ ಇಂತು ವಿಚಾರಿಸಿದನು:—‘ಇಷ್ಟೆಲ್ಲ ಪದಾರ್ಥಗಳನ್ನು ಅಟ್ಟವರಾರು? ಬಹುತರ ನೀನೇ ಅಡುಗೆಯ ಮಾಡಿರುವಂತೆ ತೋರುತ್ತಿದೆ.”

“ಅಹುದು.”

“ಅಡುಗೆಯವನು ಎಲ್ಲಿ ಹೋದನು? ಅವನನ್ನು ಮನೆ ಬಿಡಿಸಿ ಹೊರಗೆ ಕಳುಹಿದೆಯೇನು? ನಾನು ಅವನ ಸಂಬಳವನ್ನು ಹಿಡಿದಿಟ್ಟು ಕೊಂಡವನಲ್ಲ. ಅವನ ಸಂಬಳವೇನೂ ನನ್ನ ಬಳಿಯಲ್ಲಿ ಸಿಲುಕಿರಲಿಲ್ಲ. ನೀನು ಒಂದು ವರ್ಷದ ಸಂಬಳವನ್ನು ಮುಂಗಡ ಕೊಟ್ಟು ಅವನನ್ನು ಹೊರದೂಡಿರಬಹುದು!” ರಂಗರಾಯನು ವಿನೋದ ಮಾಡಿದನು.

ಭಾಮಿನಿಯು ಮೋರೆಯ ಮೇಲಿನ ನಗುವನ್ನು ತೋರ್ಪಡಿಸದೆ “ಒಮ್ಮೊಮ್ಮೆ ಪ್ರಸಂಗ ವಿಶೇಷದಲ್ಲಿ ಚಾಕರರಿಗೆ ಮುಂಗಡ ಸಂಬಳ ಕೊಡುವದೂ ಅಗತ್ಯವಾಗುವದು. ಅವರ ಸಂಬಳದ ಹಣವನ್ನು ತಡೆ ದಿಟ್ಟುಕೊಳ್ಳುವದೇ ಸದಾ ಸಯುಕ್ತಿಕವೆಂದು ಹೇಳಲಿಕ್ಕಾದೀತೆ? ಅದು ಏನೇ ಇರಲಿ, ಅಡುಗೆಯ ಆಚಾರಿಯು ಮನೆಬಿಟ್ಟು ಹೋಗಿಲ್ಲ. ಕೈ ಕಾಲು ತೊಳಕೊಳ್ಳಲಿಕ್ಕೆ ನೀರ ಕೊಟ್ಟವನನ್ನು ನೀವು ಚನ್ನಾಗಿ ನೋಡ ಲಿಲ್ಲವೇನು? ಈಗ ಮತ್ತೊಮ್ಮೆ ಅವನ ಮೋರೆಯ ನೋಡುವ ಮನ ಸ್ಸಾಗಿದೆಯೆ? ಕರೆಯಲೇನು?” ಎಂದು ಕೇಳಿದಳು.

ರಂಗರಾಯನು ಅವಸರದಿಂದ ತಲೆಯಲ್ಲಾಡಿಸಿ:-“ಬೇಡ. ಅವ ನನ್ನು ಕರೆಯುವ ಕಾರಣವಿಲ್ಲ. ನಾನೀಗ ಅವನನ್ನು ನೋಡಲಿಕ್ಕೆ ವ್ಯಗ್ರನಾಗಿಲ್ಲ; ಆದರೆ ಆ ಪ್ರಾಣಿಯನ್ನು ಯಾವಾಗಲೂ ಅಡಿಗೆಯ ಮನೆ ಯಿಂದ ದೂರಿರಿಸುತ್ತ ಹೋಗಬೇಡ. ಆಗಾಗ್ಗೆ ಅವನೂ ಅಡಿಗೆಯ

ಪಾಡುತ್ತಿರಲಿ; ಇಲ್ಲವಾದರೆ ಅವನು ಕಲಿತುದುದನ್ನೆಲ್ಲ ಮರೆತು ನಿರುಪಯುಕ್ತನಾದಾನು! ನೀನು ಅವನ ಹೊಟ್ಟೆಯ ಮೇಲೆ ಕಾಲುಕೊಟ್ಟ ಪಾಪಕ್ಕೆ ಗುರಿಯಾದೀ!" ಎಂದು ನುಡಿದನು.

ರಂಗರಾಯನು ಊಟ ಮಾಡಲಾರಂಭಿಸಿದನು. ಒಂದೊಂದೇ ಸಾಮಾನಿನ ರುಚಿ ನೋಡಿ ಪರಮ ಸಂತುಷ್ಟನಾದನು. ಈ ಊಟದಿಂದ ರಂಗರಾಯನಿಗೆ ತನ್ನ ಜನನಿಯು ಜೀವಿಸಿರುವಾಗಳಿನ ದಿನಗಳ ಸ್ಮರಣೆಯಾಯಿತು. ಅವನು ಕೆಲಹೊತ್ತು ಮಾತಾಡದಿದ್ದು ಭೋಜನ ಮಾಡಿದನು. ಬಳಿಕ:—"ಅಡುಗೆಯು ಸರ್ವೋತ್ಕೃಷ್ಟವಾಗಿದೆ. ಹೀಗೆ ಅಡಿಗೆ ಮಾಡಲಿಕ್ಕೆ ನೀನೆಲ್ಲಿ ಕಲಿತೆ?" ಎಂದು ಕೇಳಿದನು.

ಭಾಮಿನಿಗೆ ಪರಮಾನಂದವಾಯಿತು; ಆದರೂ ಅವಳು ಸಂತೋಷವನ್ನು ತೋರ್ಪಡಿಸದೆ:—"ನಿಮ್ಮ ಅಡುಗೆಯ ಆಚಾರಿಯೇ ಶ್ರೇಷ್ಠತಮ ಪಾಚಕನೆಂದು ನಿಮ್ಮ ಭಾವನೆಯಿತ್ತೇನು? ಅವನಿಗಿಂತಲೂ ಚೆನ್ನಾಗಿ ಅಡುಗೆ ಮಾಡುವದು ಯಾರಿಗೂ ಸಾಧ್ಯವಿಲ್ಲವೆಂದೇ ನಿಮ್ಮ ಅಭಿಪ್ರಾಯವಿತ್ತೇನು?" ಎಂದು ಕೇಳಿದಳು.

"ಹೀಗೇನೂ ನನ್ನ ಅಭಿಪ್ರಾಯವಿರಲಿಲ್ಲ. ನೀನು ಅಡುಗೆಯನ್ನು ಬಹು ಚನ್ನಾಗಿ ಮಾಡಿದ್ದುದರಿಂದ ಹಾಗೆ ಕೇಳಿದೆನು. ಇರಲಿ. ಇದೇ ತರದ ಊಟವು ನನಗೆ ದಿನಾಲು ದೊರೆಯಬಹುದಷ್ಟೆ?"

"ಯಾಕೆ ದೊರೆಯಲಾಗದು? ಇದಕ್ಕೂ ಉತ್ತಮವಾದ ಅಡಿಗೆಯನ್ನು ಉಣ್ಣುತ್ತ ಹೋಗುವಿರಲ್ಲದೆ, ಹೀನವಾದ ಪದಾರ್ಥವನ್ನು ನಾನೆಂದಿಗೂ ನಿಮಗೆ ಉಣಬಡಿಸೆನು!"

'ಪಾಚಕ ಆಚಾರಿಯ ಅಡಿಗೆಯನ್ನು ನಾನಿಂದೇ ಮರೆಯಲು ಸಿದ್ಧನಾಗಿರುವೆನು; ಆದರೆ ನೀನು ಸಾಲವನ್ನು ತೀರಿಸುವ ಭರದಲ್ಲಿ..' ಭಾಮಿನಿಯು ಕೃತ್ರಿಮ ಕೋಪದಿಂದ ಇಂತೆಂದಳು:—"ಪತಿ-ಪುತ್ರರಿಗೆ ಹೊಟ್ಟೆ ತುಂಬ ಹಾಕದೆ, ಸಾಲ ತೀರಿಸಲಿಕ್ಕೆ ತೊಡಗುವೆನೆಂದು ನಾನು ನಿಮ್ಮ ಮುಂದೆ ಹೇಳಿರುವೆನೆ? ಎಂತಹ ಮಾತಿದು! ನೀವಿನ್ನು ಆ ಸಾಲದ ಸುದ್ದಿಯನ್ನು ಕನಸಿನಲ್ಲಿ ಸಹ ಎತ್ತಬೇಡಿರಿ!"

“ಸಾಲದ ಸುದ್ದಿಯನ್ನು ಸ್ಮರಿಸಿಕೊಂಡು ಸವೆಯುವದು ನನ್ನ ಸ್ವಭಾವವೇ ಅಲ್ಲ. ನೀನು ಮೇಲಿಂದ ಮೇಲೆ ನನಗೆ ಎಚ್ಚರಿಕೆ ಕೊಡುವ ಕಾರಣವಿಲ್ಲ. ಅದನ್ನು ಮರೆದು ನಿಶ್ಚಿಂತನಾಗಿರುವೆನು; ಆದರೆ........”

“ಮತ್ತೆ ಕೊನೆಯಲ್ಲಿ ಆದರೆ........ಯಾಕೆ? ನೀವು ಕೊಂಚವೂ ಸಂದೇಹಿಸಬೇಡಿರಿ. ಊಟಕ್ಕಾಗಿ ಆ ಸಾಲವಾದುದಲ್ಲ.”

“ಪ್ರಿಯೆ, ಏತಕ್ಕಾಗಿ ಆ ಸಾಲವಾಯಿತೆಂಬುದು ನನಗೆ ಹೊಳೆಯದಾಗಿದೆ........”

“ಹೊಳೆಯದಿರುವದೇ ಒಳಿತಾದದ್ದು. ಅದನ್ನು ತಿಳಿಯುವದರಿಂದ ನಿಮಗೆ ಪ್ರಯೋಜನವಿಲ್ಲ; ಆದರೆ ಈ ಪ್ರಸಂಗದಲ್ಲಿ ನಾನೊಂದು ಬೇಡಿಕೆಯ ಬೇಡಿಕೊಳ್ಳುವೆನು ಅದಾವುದೆಂದರೆ:—“ಮೂರ್ಖಳೆಂದು ನಿರ್ಧರಿಸಿ, ಮತ್ತೆ ನನ್ನನ್ನು ಗಡಿಪಾರಿನ ಶಿಕ್ಷೆಗೆ ಗುರಿಮಾಡಬೇಡಿರಿ!”

ರಂಗರಾಯನು ಮತ್ತೆ ಮಾತಾಡದೆ, ಕೆಳ ಮೋರೆ ಮಾಡಿ ಉಣ್ಣಹತ್ತಿದನು. “ಅವ್ವಾ, ಏಳು. ಅಪ್ಪನ ಊಟವಾಗುತ್ತಲೆ, ನಾವು ಲಗುಬಗನೆ ಊಟ ಮಾಡೋಣ. ನೀನು ನಿನ್ನಿನ ಜಟಾಯುವಿನ ಕಥೆಯನ್ನು ಇಂದು ಮುಂದೆ ಸಾಗಿಸಿ ಮುಗಿಸಬೇಕಾಗಿದೆ. ಅವ್ವಾ, ಜಟಾಯುವಿನ ಮಗನು ಮುಂದೆ ಏನು ಮಾಡಿದನು?” ರಾಮನು ಕೇಳಿದನು.

ರಂಗರಾಯನು ಮುಖವೆತ್ತಿ ಇಂತೆಂದನು:—“ಜಟಾಯುವಿನ ಮಗನು ಏನೇ ಮಾಡಲೊಲ್ಲನೇಕೆ; ಈ ಹುಡುಗನು ಮಾತ್ರ ನಿನ್ನನ್ನು ಚನ್ನಾಗಿ ಅಂಟಿಕೊಂಡಿದ್ದಾನೆ” ಭಾಮಿನಿಯು ಮಾತಾಡಲಿಲ್ಲ. ರಾಮನ ಮೈಮೇಲೆ ಕೈಯಾಡಿಸುತ್ತ ಸುಮ್ಮನಿದ್ದಳು.

“ಇದರ ಕಾರಣವೇನೆಂಬುದನ್ನು ಬಲ್ಲೆಯಾ?” ರಂಗರಾಯನು ಕೇಳಿದನು.

“ಕಾರಣವೇನಿರಬೇಕು? ಮಾತೆಯಿಲ್ಲದ ಮಗು. ಸಣ್ಣ ಹುಡುಗ! ಮನೆಯಲ್ಲಿ ಓರಿಗೆಯ ಬೇರೆ ಬಾಲಕರಿಲ್ಲ........”

“ಇರಬಹುದು; ಆದರೆ ಹಡೆದವಳಿರುವಾಗಲೂ ಇವನು ಇಷ್ಟು ಸಲುಗೆಯಿಂದ ಅವಳೊಡನೆ ವರ್ತಿಸಿದವನಲ್ಲ.”

ಭಾಮಿನಿಯ ಮುಖವು ಲಜ್ಜೆಯಿಂದ ಆರಕ್ತವಾಯಿತು. ಇಂತೆಂದಳು:—“ನೀವು ಏನಾದರೊಂದು ಮಾತಾಡಿಬಿಡುವಿರಿ!” ಕೊಂಚ ಹೊತ್ತು ಸುಮ್ಮನಿದ್ದು, ಮತ್ತೆ ಹೇಳಹತ್ತಿದಳು:—“ಚನ್ನಾಗಿ ಊಟ ಮಾಡಿರಿ. ಮುಂಜಾವಿನಿಂದ ಇದು ವರೆಗೆ ಊಟ ಮಾಡಿದವರಲ್ಲ. ಅವಸರದಿಂದ ಊಟ ಮಾಡಿದರೆ ಹೊಟ್ಟೆ ತುಂಬುವದಿಲ್ಲ. ಆ ಚಪಾತಿಯನ್ನು ಚಲ್ಲಬೇಡಿರಿ. ನನ್ನಾಣೆಯಿದೆ. ನೀವದನ್ನು ತಿನ್ನಲೇಬೇಕು. ಇನ್ನಿಷ್ಟು ಅನ್ನವನ್ನು ತಂದು ಹಾಕುವೆನು....”

ರಂಗರಾಯನು ಚಮಕಿತನಾಗಿ ಭಾಮಿನಿಯ ಮುಖದ ಕಡೆಗೆ ನೋಡಹತ್ತಿದನು. ಹೆಚ್ಚು ಊಟ ಮಾಡುವದಕ್ಕಾಗಿ ಪೀಡಿಸೋಣ, ಹೊಟ್ಟೆತುಂಬ ಊಟ ಮಾಡಲಿಯೆಂದು ಮನಃಪೂರ್ವಕ ಆಗ್ರಹ ಮಾಡೋಣ, ಆಣೆಯಿಟ್ಟುಕೊಳ್ಳೋಣ ಮೊದಲಾದ ಸಂಗತಿಗಳು ರಂಗರಾಯನಿಗೆ ಬಹು ದಿನಗಳಿಂದ ಅಪರಿಚಿತಗಳಾಗಿದ್ದುವು. ಇಂದು ಪುನಃ ಆ ಮುನ್ನಿನ ಸಂಗತಿಯು ಬಾಲ್ಯಕಾಲದಲ್ಲಿ ಕೇಳಿದ ಪದದ ಪಲ್ಲವಿಯಂತೆ ಸ್ಮರಣೆಯಲ್ಲಿ ಬರಹತ್ತಿತು. ರಂಗರಾಯನು ತನ್ನ ಮಾತೆಯ ಏಕಮಾತ್ರ ಪುತ್ರನಾಗಿದ್ದನು. ಆ ಮಮತೆಯ ಮಾತೆಯು ಮಗನ ಊಟಕ್ಕೋಸುಗ ಎಷ್ಟು ದಕ್ಷತೆ ವಹಿಸುತ್ತಿದ್ದಳು! ಎಷ್ಟು ಆಗ್ರಹವನ್ನು ತೋರುತ್ತಿದ್ದಳು! ರಂಗರಾಯನು ಮಾತೆಯ ವಿರಹದ ಈ ದೀರ್ಘಕಾಲದಲ್ಲಿ ಆ ಮೊದಲಿನ ಸಂಗತಿಯನ್ನು ಮರೆದಿದ್ದನು. ಇಂದಿನ ಭಾಮಿನಿಯ ವ್ಯವಹಾರದಿಂದ ರಂಗರಾಯನಿಗೆ ಬಹು ದಿನಗಳ ಹಿಂದಿನ ಆ ಸಂಗತಿಯು ನೆನಪಾಗಹತ್ತಿತು. ಅವನು ಭಾಮಿನಿಯ ಆಗ್ರಹವನ್ನು ಮೀರದಾದನು. ಅವಳ ಹೇಳಿಕೆಯಂತೆ ಎಲ್ಲವನ್ನೂ ಊಟ ಮಾಡಿದನು. “ಪ್ರಿಯೆ, ನಾನಿನ್ನು ಸಂಸಾರದ ಯಾವ ಸಂಗತಿಯನ್ನೂ ಲಕ್ಷ್ಯಿಸುವುದಿಲ್ಲ. ಎಲ್ಲ ಭಾರವನ್ನೂ ನಿನ್ನ ಮೇಲೆ ಹೇರಿ ನಿಶ್ಚಿಂತನಾಗುವೆನು.” ಎಂದು ಹೇಳಿ, ಎದ್ದು ಹೋದನು.

೦ ೦ ೦ ೦

ದುರಭಿಪ್ರಾಯ.

ಎರಡು ವಾರಗಳು ಸದ್ದಿಲ್ಲದೆ ಕ್ರಮಿಸಿದುವು. ಈ ದೀರ್ಘಸಮಯವು ಇಷ್ಟು ಬೇಗನೆ ಹೇಗೆ ಗತಿಸಿತೆಂಬುದನ್ನು ರಂಗರಾಯ ಊಹಿಸದಾದನು. ಇಂದು ರವಿವಾರ. ರಂಗರಾಯನು ಮುಂಜಾವಿನಲ್ಲಿ ಚಹಾಪಾನ ಮಾಡುತ್ತ ಕುಳಿತಿದ್ದನು. ಭಾಮಿನಿಯು ಬಂದು ಮಾತಾಡಹತ್ತಿದಳು:—"ಒಮ್ಮೆ ಸುಭದ್ರೆಯ ಮನೆಗೆ ಹೋಗಿ, ಅವಳನ್ನು ಮಾತಾಡಿಸಿ ಬನ್ನಿರೆಂದು ನಾನು ನಿಮಗೆ ದಿನಾಲು ಹೇಳುತ್ತಿರುವೆನು. ನೀವು ನನ್ನ ಮಾತನ್ನು ಕೇಳದವರಾಗಿರುವಿರಿ. ಇಂದು ನೀವು ಅವಳ ಮನೆಗೆ ಹೋಗಲೇ ಬೇಕು; ಇಲ್ಲವಾದರೆ ಅವಳು ಏನೆಂದು ಭಾವಿಸಬಹುದೆಂಬುದನ್ನು ನೀವೇ ವಿಚಾರಿಸಿ ನೋಡಿರಿ. ಇನ್ನು ಕೆಲವು ದಿವಸ ನೀವು ಅವಳ ಮನೆಗೆ ಹೋಗದಿದ್ದರೆ, ಅವಳು ನಿಜವಾಗಿಯೂ ನನ್ನೊಡನೆ ಜಗಳವಾಡದೆ ಬಿಡಳು."

ರಂಗರಾಯನು ಮನಸ್ಸಿನಲ್ಲಿ ನಾಚಿಕೊಂಡವನಾಗಿ ಹೇಳಿದನು: "ಏನು ಮಾಡಲಿ? ಈಗ ಕಾಲೇಜದಲ್ಲಿ ಕೆಲಸವು ಬಹಳವಾಗಿದೆ. ಸುಭದ್ರೆಯ ಮನೆಗೆ ಹೋಗಲಿಕ್ಕೆ ಅವಕಾಶವೇ ಇಲ್ಲದಾಗಿದೆ.....!'

"ನಿಮ್ಮ ಕೆಲಸವು ಬೆಳೆದುದು ನನಗೆ ಗೊತ್ತುಂಟು! ಆದರೆ ಕಾಲೇಜು ಬಿಟ್ಟು ಮನೆಗೆ ಹೊರಟಾಗ ಒಮ್ಮೆ ಅವಳ ಮನೆಗೆ ಹೋಗಿ ಬರಲಿಕ್ಕೆ ಅಡ್ಡಿಯೇನು? ಇದೇನು ಅಂಥ ಜಡವಾದ ಹೋರೆಯೆ?"

"ನಿನಗೆ ಅಧ್ಯಾಪನ ಕಾರ್ಯವನ್ನು ಮಾಡಿದ ಅನುಭವವಿಲ್ಲ. ಅಂತೆಯೇ ಹೀಗೆ ಮಾತಾಡುತ್ತಿರುವೆ! ಶಿಕ್ಷಣದ ಕೆಲಸವು ಎಷ್ಟು ತ್ರಾಸದಾಯಕವೆಂಬದನ್ನು ನೀನೇನು ಬಲ್ಲೆ? ಕಾಲೇಜದ ವೇಳೆಯನ್ನು ಕಳೆಯಬೇಕಾದರೆ ನನಗೆ ಸಾಕು ಸಾಕಾಗಿ ಹೋಗುತ್ತಿದೆ! ಹೀಗೆ ಬೇಜಾರಗೊಂಡ ನನಗೆ ಅತ್ತಿತ್ತ ಅಲೆಯುವದಕ್ಕೆ ಹುರುಪು ಹೇಗಾಗಬೇಕು? ಕಾರಣ ಬೇರೆ ಕಡೆಗೆ ಹೋಗದೆ, ನೆಟ್ಟಗೆ ಮನೆಗೇ ಬರುವೆನು."

ಭಾಮಿನಿಯು ನಕ್ಕು ಮಾತಾಡಹತ್ತಿದಳು:—"ಹೀಗೆ ನೆವ ಹೇಳುವುದು ನೆಟ್ಟಗಲ್ಲ. ಇಂದು ನೀವು ಒಲ್ಲೆನೆಂದರೆ, ನಾನು ಕೇಳು ವವಳಲ್ಲ. ರವಿವಾರವೂ ಹುಡುಗರಿಗೆ ಕಲಿಸುವ ನೆವವನ್ನು ತೋರಿ ಸುಭ ದ್ರೆಯ ಮನೆಗೆ ಹೋಗದಿದ್ದರೆ, ಇನ್ನು ನೀವು ಅವಳಿಗೆ ಮುಖವನ್ನು ಕೂಡ, ತೋರಿಸಲಾರದವರಾಗಿ ಹೋದೀರಿ." ಬಳಿಕ ಭಾಮಿನಿಯು ಡ್ರಾಯವ್ಹರನನ್ನು ಕರೆದು "ಗಾಡಿಯನ್ನು ಸಿದ್ಧಗೊಳಿಸಿ, ಇವರನ್ನು ಕರೆದುಕೊಂಡು ಹೋಗಿ, ಸಪ್ತಾಪುರದಲ್ಲಿರುವ ಇವರ ತಂಗಿಯ ಮನೆಗೆ ಕಳುಹಿ, ಬೇಗನೆ ತಿರುಗಿ ಬಾ. ನಾನು ಬೇರೆ ಕಡೆಗೆ ಹೋಗಬೇಕಾ ಗಿದೆ." ಎಂದು ಹೇಳಿದಳು.

ರಂಗರಾಯನು ಹೊರಡುವ ಮೊದಲು ರಾಮನನ್ನು ಕರೆದನು; ಆದರೆ ರಾಮನಿಗೆ ಅತ್ತೆಯ ಮನೆಗೆ ಹೋಗುವ ಮನಸ್ಸಿರಲಿಲ್ಲ. ಅವನು ಸಣ್ಣಮೋರೆ ಮಾಡಿಕೊಂಡು ಮಲತಾಯಿಯನ್ನು ಅಂಟಿಕೊಂಡು ನಿಂ- ತುಬಿಟ್ಟನು. ಭಾಮಿನಿಯು ಅವನನ್ನು ಮುಂದೆ ಎಳೆದುಕೊಂಡು ಮೈಮೇಲೆ ಕೈಯಾಡಿಸಿ:—"ಇಂದು ಇವನನ್ನು ಕರೆದುಕೊಂಡು ಹೋ ಗುವುದು ಬೇಡ. ಮತ್ತೆ ಎಂದಾದರೂ ಕರೆದೊಯ್ಯುವಿರಂತೆ" ಎಂದು ಹೇಳಿದಳು.

"ಅವನು ಅತ್ತೆಯ ಮನೆಗೆ ಹೋಗಲಿಕ್ಕೆ ಮನಸ್ಸಿಲ್ಲದವನಾಗಿ ರುವಂತೆ ತೋರುತ್ತಿದೆ."

ಭಾಮಿನಿಯು ಮುಗುಳು ನಗೆಯಿಂದ:—"ಇವನೊಬ್ಬನೇ ಏಕೆ, ನೀವೂ ಮನಸ್ಸಿಲ್ಲದವರಾಗಿರುವಿರಿ" ಎಂದು ನುಡಿದು, ರಾಮನನ್ನು ಕರೆದುಕೊಂಡು ಬೇರೆ ಕಡೆಗೆ ಹೋದಳು. ರಂಗರಾಯನೊಬ್ಬನೇ ಹೊರಟು ಮೋಟರ ಬಂಡಿಯಲ್ಲಿ ಕುಳಿತನು. ಡ್ರಾಯವ್ಹರನು ಗಾಡಿ ಯನ್ನು ಮುಂದೆ ಸಾಗಿಸಿದನು.

ಸುಭದ್ರೆಯ ಗಂಡನಾದ ಭೀಮರಾಯನು ಪದವೀಧರನಾದ ವಕೀಲನು. ತನ್ನ ಹೋರೆಯಲ್ಲಿ ಹೆಸರಾದವನು. ರಂಗರಾಯನ ಸಮ ವಯಸ್ಕನು. ಈ ಇಬ್ಬರು ಚಿಕ್ಕಂದಿನಿಂದ ಸಹಪಾಠಿಗಳಾದ ಗೆಳೆಯ

ರಾಗಿದ್ದು, ಈಗ ಬೀಗರಾಗಿದ್ದರು. ಕಾರಣ ರಂಗರಾಯನು ತನಗೆ ಬೇಕಾದಾಗ ನಿಸ್ಸಂಕೋಚವೃತ್ತಿಯಿಂದ ಭೀಮರಾಯನ ಮನೆಗೆ ಹೋಗುತ್ತಿದ್ದನು; ಭೀಮರಾಯನು ರಂಗರಾಯನ ಮನೆಗೆ ಬರುತ್ತಿದ್ದನು.

ಸುಭದ್ರೆಯ ಮನಸ್ಸು ಭಾಮಿನಿಯ ವಿಷಯದಲ್ಲಿ ಸರಿಯಾಗಿರಲಿಲ್ಲ. ಅದು ಹಲವು ಕಾರಣಗಳಿಂದ ಕಲುಷಿತವಾಗಿತ್ತು. ಸುಭದ್ರೆಯು ಬಹು ದಿನಗಳ ತರುವಾಯ ಮನೆಗೆ ಬಂದ ಅಣ್ಣನನ್ನು ಕಂಡು ತನ್ನ ದೂರುಗಳನ್ನು ತೂರಿಕೊಳ್ಳಹತ್ತಿದಳು:-" ಒಮ್ಮೆ ತಿರಸ್ಕರಿಸಿ ಬಿಟ್ಟವ್ದ ಭಾಮಿನಿಯನ್ನು ಇಷ್ಟು ದಿವಸಗಳ ಮೇಲೆ ಮತ್ತೆ ಕರೆತಂದು ಮನೆಯಲ್ಲಿಟ್ಟುಕೊಂಡಿರುವುದು ಸರಿಯಾದ ಕೆಲಸವಾಗಲಿಲ್ಲ. ಅಪ್ಪನು ಬುದ್ಧಿಪೂರ್ವಕವಾಗಿ ಭಾಮಿನಿಯನ್ನು ಮನೆಯಿಂದ ಹೊರಗೆ ತಳ್ಳಿದ್ದನು. ಇಂಥವಳನ್ನು ನೀನಾಗಿಯೇ ಕರೆಸಿಕೊಂಡಿರುವದೇಕೆ? ನಿನಗೇನು ಮತ್ತೆ ಮದುವೆಯಾಗುತ್ತಿದ್ದಿಲ್ಲವೆ? ಇವಳಿಗಿಂತ ಸಾವಿರಾರು ಪಾಲು ಚಲುವೆಯೂ, ಗುಣವತಿಯೂ, ವಿದ್ಯಾಮಂಡಿತೆಯೂ ಆದ ಹೆಂಡತಿಯು ದೊರೆಯುತ್ತಿದ್ದಳಲ್ಲ! ಅಂಥವಳನ್ನು ಉಪೇಕ್ಷಿಸಿ, ಈ ಹಳೇ ಹೆಂಡತಿಯ ಬೆನ್ನ ಹತ್ತುವುದರಲ್ಲಿ ಪುರುಷಾರ್ಥವೇನು? ಸತ್ತು ಸ್ವರ್ಗದಲ್ಲಿರುವ ತಂದೆಯು ನಿನ್ನ ಈ ಕೃತಿಯನ್ನು ನೋಡಿ ಏನೆಂದು ಭಾವಿಸಬಹುದು? ಅವನೇನು ಬುದ್ಧಿಹೀನನಾಗಿದ್ದನೆ? ಕಾರಣವಿಲ್ಲದೆ ಭಾಮಿನಿಯನ್ನು ತವರು ಮನಗೆ ಕಳುಹಿದ್ದನೆ? ಈಗಳಿನ ನಿನ್ನ ಈ ಕೃತಿಯನ್ನು ನೋಡಿ, ಸ್ವರ್ಗದಲ್ಲಿರುವ ಅವನು ಮಗನಿಂದಾದ ತನ್ನ ಅಪಮಾನವನ್ನು ಭಾವಿಸಿ, ಚಡಪಡಿಸದಿರನು! ನೀನು ಅಪ್ಪನ ಆಜ್ಞೆಯನ್ನು ಪಾಲಿಸುವದಕ್ಕಾಗಿ-ತಂದೆಯ ಕೃತಿಗೆ ಮಾನ ಕೊಡುವದಕ್ಕಾಗಿ-ಈ ಕೆಲಸವನ್ನು ಮಾಡತಕ್ಕದ್ದಿದ್ದಿಲ್ಲ! ತಂದೆಯ ಆದೇಶವನ್ನು ಮೀರಿ, ಭಾಮಿನಿಯನ್ನು ಕರೆತಂದು ನೀನು ಸುಖವನ್ನು ಸುರಿದುಕೊಳ್ಳುವುದಾದರೂ ಏನು? ನಮ್ಮ ಸುಧಾರಿಸಿದ ಸಮಾಜದಲ್ಲಿ-ಬಂಧು-ಬಾಂಧವರ ಸಮ್ಮುಖದಲ್ಲಿ-ಇವಳು ನಮ್ಮ ಆತ್ಮೀಯಳೆಂದು ಹೇಳಲಿಕ್ಕೆ ಸಹ ಸಂಕೋಚಗೊಳ್ಳಬೇಕಾಗುತ್ತಿದೆ. ಕಾರಣ ನಮ್ಮ ಸುಧಾರಿಸಿದ ಸಮಾಜದ ಉತ್ಸವಾದಿಗಳಲ್ಲಿ

ಇವಳನ್ನು ಕರೆದೊಯ್ಯುವಂತಿಲ್ಲ. ಅಣ್ಣಾ, ಬಹಳ ಹೇಳಲೇನು? ಭಾಮಿನಿಯನ್ನು ನನ್ನ ಅತ್ತಿಗೆಯೆಂದು ಹೇಳಿಕೊಳ್ಳಲಿಕ್ಕೆ ಕೂಡ ನನಗೆ ತುಂಬ ನಾಚಿಗೆಯುಂಟಾಗುತ್ತಿದೆ. ನಾನಿನ್ನು ಸಮಾಜದಲ್ಲಿ ಮೋರೆ ತೋರದವಳಾಗುವೆನು!........"

ಭೀಮರಾಯನು ಬಳಿಯಲ್ಲಿಯೇ ಇದ್ದನು. ಇವನು ಅಪರಿಚಿತನಾಗಿದ್ದ ಭಾಮಿನಿಯ ಪಕ್ಷವನ್ನು ವಹಿಸಿ ಮಾತನಾಡಬೇಕೆಂದಿದ್ದನು; ಆದರೆ ಹೆಂಡತಿಯ ಕೋಪದೃಷ್ಟಿಯನ್ನು ನೋಡಿ, ಮಾತಾಡದೆ ಸುಮ್ಮನಾದನು. ರಂಗರಾಯನು ಯಾವ ಮಾತನ್ನೂ ಆಡದೆ ಸುಮ್ಮನಿದ್ದನು. ಸುಭದ್ರೆಯು ಮತ್ತಷ್ಟು ಕೋಪದಿಂದ ಮಾತಾಡಹತ್ತಿದಳು:-"ಅಣ್ಣಾ, ನಾನೇನೂ ಅರಿಯೆನೆಂದು ನೀನು ತಿಳಿದಿರುವೆಯಾದೀತು; ಆದರೆ ನಿಜಸ್ಥಿತಿಯು ಹೀಗಿಲ್ಲ. ನಾನು ನಿನ್ನ ಸಂಸಾರದ ಯಾವತ್ತು ಸಂಗತಿಗಳನ್ನು ತಿಳಿದುಕೊಂಡಿರುವೆನು. ಭಾಮಿನಿಯು ಮನೆಯಲ್ಲಿ ಕಾಲಿಡುತ್ತಲೆ ಖಾದೀರನನ್ನು ಮುಸಲ್ಮಾನನೆಂಬ ಕಾರಣದಿಂದ ಹೊರಗೆ ಹಾಕಿದಳು. ಲಚಿಮನು ಕೀಳುಜಾತಿಯವನೆಂದು ಮನೆಬಿಡಿಸಿ ಕಳುಹಿದಳು. ಯಾವಳು ಜಾತಿಭೇದದ ವಿಷಯದಲ್ಲಿ ಇಷ್ಟೊಂದು ಸಂಕುಚಿತ ವಿಚಾರವುಳ್ಳವಳಾಗಿರುವಳೋ, ಅವಳೊಡನೆ ಬಾಳುವೆ ಮಾಡುವುದು ಹೇಗೆ? ನನ್ನ ಮಾತುಗಳಿಂದ ಯಾರು ಎಷ್ಟೇ ಕೋಪಗೊಳ್ಳಲಿ, ನಾನದನ್ನು ಲಕ್ಷಿಸುವುದಿಲ್ಲ. ಈ ಹೆಂಡತಿಯು ನಿನಗೆ ತೀರ ಅನುಪಯುಕ್ತಳೆಂದೂ, ಅಯೋಗ್ಯಳೆಂದೂ ನಾನು ಸಾರಿ ಸಾರಿ ಹೇಳುತ್ತೇನೆ!"

ರಂಗರಾಯನು ಮೆಲ್ಲಮೆಲ್ಲನೆ ಮಾತಾಡಹತ್ತಿದನು:—"ತಂಗಿ, ನೀನು ಹಲವು ಸಂಗತಿಗಳನ್ನು ಅರಿತಿರುವೆಯಾದರೂ, ಅವುಗಳ ಬಗ್ಗೆ ಚನ್ನಾಗಿ ವಿಚಾರ ಮಾಡಿರುವಂತೆ ಕಾಣುವದಿಲ್ಲ. ಅವಳು ಖಾದೀರ ಹಾಗು ಲಚಿಮರನ್ನು ಬುದ್ಧಿಪೂರ್ವಕ ಕೆಲಸ ಬಿಡಿಸಿ ಕಳುಹಿದವಳಲ್ಲ. ಅವರು ಹೆಂಡಿರು-ಮಕ್ಕಳನ್ನು ನೋಡುವುದಕ್ಕೆ ಆತುರರಾಗಿದ್ದರಂತೆ. ಅವಳು ಅವರ ಎಲ್ಲ ಬಾಕಿಯನ್ನು ತೀರಿಸಿ, ಕಳುಹಿಕೊಟ್ಟಿರುವಳು. ಅವರು ಸಂತೋಷದಿಂದ ತಮ್ಮ ಊರಿಗೆ ಹೋಗಿರುವರು........"

“ರಮೆಯು ಇರುವಾಗ ಅವರಿಗೆ ಹೆಂಡತಿ-ಮಕ್ಕಳನ್ನು ನೋಡುವ ಕುತೂಹಲತೆಯೇಕಾಗಲಿಲ್ಲ? ಭಾಮಿನಿಯು ಮನೆಯಲ್ಲಿ ಕಾಲಿಕ್ಕುತ್ತಲೆ, ಅವರು ಆತುರರಾಗಿ ಓಡಿಹೋದದ್ದೇಕೆ? ಅಣ್ಣಾ, ನಾನಷ್ಟು ಬುದ್ಧಿಹೀನೆಯಲ್ಲ! ನನಗೆ ಎಲ್ಲವೂ ತಿಳಿಯುತ್ತಿದೆ!”

ರಂಗರಾಯನು ಮಾತಾಡದೆ ಸುಮ್ಮನಾದನು. ಸುಭದ್ರೆಯು-: “ಅಣ್ಣಾ, ದಾಸ-ದಾಸಿಯರೆಲ್ಲ ಮನೆಬಿಟ್ಟು ಹೋಗಿದ್ದಾರೆ. ಈಗ ನಿನ್ನ ಕೆಲಸವು ಹೇಗೆ ಸಾಗುತ್ತಿದೆ?” ಎಂದು ಕೇಳಿದಳು.

“ಒಂದು ವಿಧವಾಗಿ ಸಾಗಿದೆ. ತೊಂದರೆಯೇನೂ ಇಲ್ಲ.” ರಂಗರಾಯನು ನುಡಿದನು.

“ಮನೆಬಿಟ್ಟು ಹೋಗಿದ್ದ ಸೇವಕರು ತಿರುಗಿ ಬರರೆಂಬುದನ್ನು ನಾನು ಬಲ್ಲೆನು. ನೀನು ಹೊಸ ಚಾಕರರನ್ನಿಟ್ಟುಕೊಂಡು ಮೊದಲಿನಂತೆ ಕೆಲಸ ಸಾಗಿಸು. ಸಮಾಜವಿದೆ, ಬಂಧು-ಬಾಂಧವರಿದ್ದಾರೆ. ಆಚಾರ್ಯರ ಮನೆಯಂತೆ ನಿನ್ನ ಮನೆಯಾದರೆ, ನಡೆಯದು. ಸಮಾಜದಲ್ಲಿ ಹೆಸರು ಕೆಡಿಸಿಕೊಳ್ಳುವದು ಬಹು ಘಾತುಕವು.”

“ತಂಗೀ, ಈಗೇನೂ ಅಂಥ ಪ್ರಸಂಗ ಬಂದಿಲ್ಲ. ಹೆಚ್ಚು ಸೇವಕರನ್ನಿಟ್ಟುಕೊಳ್ಳುವುದು ಅಗತ್ಯವಾಗಿ ತೋರಿದರೆ, ಆಗ್ಗೆ ಹಾಗೆಯೇ ಮಾಡಬಹುದಾಗಿದೆ.”

ಈಗ ಚಾಕರರ ಅವಶ್ಯಕತೆಯಿಲ್ಲವೆ? ಅಣ್ಣಾ, ನೀನೇನನ್ನುವಿಯೊ ನನಗೆ ತಿಳಿಯದಾಗಿದೆ! ಒಮ್ಮೆ ನಿನ್ನೊಡನೆ ನಿನ್ನ ಮನೆಗೆ ಬಂದು ಈಗಳಿನ ಸ್ಥಿತಿಯನ್ನು ಅವಲೋಕಿಸಬೇಕಾಗಿದೆ; ಆದರೆ ನಿನ್ನ ಮನೆಗೆ ಬರಲಿಕ್ಕೆ ನನ್ನ ಮನಸ್ಸೇ ಒಪ್ಪದಾಗಿದೆ. ತವರು ಮನೆ; ಹೋಗದಿದ್ದರೆ ನಿರ್ವಾಹವಿಲ್ಲ. ಹೋದರೆ ಮನ್ನಣೆಯಿಲ್ಲ. ಅಣ್ಣಾ, ಈ ಭಾವನೆಯಿಂದ ನನಗೆ ಎಷ್ಟು ವ್ಯಥೆಯಾಗುತ್ತಿರಬಹುದೆಂಬದನ್ನು ನೀನೇ ಊಹಿಸು. ಬಹಳವೇನು? ನಿನ್ನ ಮನೆಗೆ ಬಂದರೆ, ನನಗೆ ಒಂದು ಕಪ್ಪು ಚಹ ಸಹ ಸಿಗುವಂತಿಲ್ಲ!”

ಭೀಮರಾಯನು ಇದುವರೆಗೆ ಪಿಟ್ಟೆಂದು ಮಾತಾಡಿರಲಿಲ್ಲ. ಅಣ್ಣ-

ತಂಗಿಯರ ಮಾತು-ಕಥೆಗಳನ್ನು ಕೇಳುತ್ತ ಸುಮ್ಮನಿದ್ದನು. ಇನ್ನು ತಡೆಯದವನಾಗಿ ಹೇಳಹತ್ತಿದನು.:—“ಮೊದಲು ಒಮ್ಮೆ ಹೋಗಿ ನೋಡು. ಚಹವು ಸಿಗುವದೋ-ಇಲ್ಲವೊ? ಎಂಬುದನ್ನು ಪರೀಕ್ಷಿಸು. ಬಳಿಕ ಮಾತಾಡು. ಮೊದಲೇ ತರ್ಕದಿಂದ ಮಾತಾಡಿ, ಮಂದಿಯ ಮನಸ್ಸನ್ನು ನೋಯಿಸುವದು ಸರಿಯಲ್ಲ!”

“ನಾನು ಕೇವಲ ಊಹೆಯಿಂದ ಮಾತಾಡಿದವಳಲ್ಲ. ಹೋಗಿ ದರ್ಶನ ತಕ್ಕೊಂಡು, ಪರೀಕ್ಷೆ ಮಾಡಿಕೊಂಡು ಬಂದು ಮಾತಾಡಿರು ವೆನು.” ಎಂದು ನುಡಿದು, ಸುಭದ್ರೆಯು ಬೇರೆ ಕಡೆಗೆ ಹೋದಳು. ಭೀಮರಾಯನು ಮಾತಾಡಹತ್ತಿದನು:—“ನನಗಾವುದೂ ಗೊತ್ತಿಲ್ಲ. ನಿಜ ಸಂಗತಿಯೇನು? ಚಾಕರರನ್ನೆಲ್ಲ ಮನೆಯಿಂದ ಹೊರಗೆ ಹಾಕಿ, ಏನು ಮಾಡಬೇಕೆಂದಿರುವೆ? ಸಾಧು ಮಾರ್ಗವನ್ನವಲಂಬಿಸಬೇಕೆಂಬ ಆಲೋಚನೆಯಲ್ಲಿರುವೆಯಾ?”

“ಹೀಗೇನೂ ನನ್ನ ಆಲೋಚನೆಯಿಲ್ಲ. ಸಂಸಾರವು ಮೊದಲಿ ನಂತೆಯೇ ಸಾಗಿದೆ. ಇಬ್ಬರು ಸೇವಕರು ಮಾತ್ರ ಕಡಿಮೆಯಾಗಿದ್ದಾರೆ; ಆದರೆ ಆ ಸೇವಕರು ಇಲ್ಲದಾಗಿರುವದರಿಂದ ನನಗೇನೂ ತೊಂದರೆ ಯಾಗಿಲ್ಲವಿಷ್ಟೇ ಅಲ್ಲ; ಸಂಸಾರ ರಥವು ಮೊದಲಿಗಿಂತಲೂ ವ್ಯವಸ್ಥಿತ ರೀತಿಯಿಂದ ಸಾಗಿದೆ. ನೋಡುವವರಿಗೆ ಹೆಚ್ಚು ಚಂದ ಕಾಣುವಂತೆ **ನಡೆದಿದೆ.”**

“ಸೇವಕರ ಕೊರತೆಯಲ್ಲೂ ಹೆಚ್ಚು ವ್ಯವಸ್ಥೆಯಿಂದ ನಡೆದಿದೆ ಯೇ! ಆಹಾರದ ವ್ಯವಸ್ಥೆಯು ಹೇಗೆ ಸಾಗಿದೆ?”

“ಅಡುಗೆಯ ಆಚಾರಿಯು ಇದ್ದಾನೆ. ಅದರೂ ಆವಳೇ ಅಡು ಗೆಯ ಮಾಡುವಳು. ಇದರಿಂದ ಪದಾರ್ಥಗಳು ಹೆಚ್ಚು ಸ್ವಚ್ಛವಿರು ವವು. ರುಚಿಕರವಾಗಿರುವವು. ಊಟದ ವ್ಯವಸ್ಥೆಯು ಉತ್ಕೃಷ್ಟ ವಾಗಿದೆ.” ರಂಗರಾಯನಂದನು.

“ಆಚಾರಿಯ ಅಡಿಗೆಗಿಂತಲೂ ಗೃಹಿಣಿಯರ ಅಡಿಗೆಯು ಉ- ತ್ತಮವೆಂಬುದನ್ನು ನಾನೂ ಒಪ್ಪುತ್ತೇನೆ. ಗೃಹಿಣಿಯರು ಮನೆಯವರ

ಊಟ-ಉಡಿಗೆಗಳ ವಿಷಯದಲ್ಲಿ ಸ್ವತಃ ಕಾರ್ಯ ಮಾಡಹತ್ತಿದರೆ, ಪ್ರಪಂಚಕ್ಕೆ ಬಹಳ ಹಿತವಾಗುತ್ತದೆ; ಆದರೆ ಈ ಮಾತನ್ನು ನಾನು ಒತ್ತಿ ಉಚ್ಚರಿಸಲಾರದವನಾಗಿರುವೆನು; ಆಗ್ರಹದಿಂದ ಬಳಿಕೆಯಲ್ಲಿ ತರಲಾರದವನಾಗಿರುವೆನು. ಇರಲಿ. ನೀನು ನಿನ್ನ ಸಂಸಾರ ರಥವನ್ನು ಮುಂದೆಯೂ ಹೀಗೆಯೆ ಸಾಗಿಸಬೇಕೆಂದಿರುವೆಯಾ?" ಭೀಮರಾಯನು ಕೇಳಿದನು.

ರಂಗರಾಯನು ಕ್ಷಣಕಾಲ ಸುಮ್ಮನಿದ್ದು ಬಳಿಕ ಹೇಳಹತ್ತಿದನು: "ನಿಜವಾಗಿ ಹೇಳಬೇಕಾದರೆ, ಸಂಸಾರದ ಎಲ್ಲ ಹೋರೆಯನ್ನು ಅವಳ ಮೇಲೆ ಹೊರಿಸಿ, ನಾನು ಹೊರಗಿರುವೆನು. ಅವಳು ತನ್ನ ಇಷ್ಟವಿರುವಂತೆ ವ್ಯವಸ್ಥೆ ಮಾಡಿಕೊಳ್ಳಲಿ. ನಾನು ಅವಳ ಇಚ್ಛೆಯ ವಿರುದ್ಧವಾಗಿ ಸಂಸಾರದ ವ್ಯವಸ್ಥೆಯಲ್ಲಿ ಕೈಹಾಕ ಬಯಸುವದಿಲ್ಲ."

ಭೀಮರಾಯನು ಬಾಗಿಲ ಕಡೆಗೆ ನೋಡಿ, "ಇನ್ನು ಹೆಚ್ಚಿಗೆ ಮಾತಾಡಬೇಡ, ಸುಮ್ಮನಿರು. ಈ ಮಾತುಗಳು ನಿನ್ನ ಸಹೋದರಿಯ ಕಿವಿಗೆ ಬಿದ್ದರೆ, ಮಹಾ ಅನರ್ಥವಾಗದಿರದು!" ಎಂದು ನುಡಿದನು. ರಂಗರಾಯನು ಈ ಮಾತಿನ ಕಡೆಗೆ ಲಕ್ಷ್ಯವಿರಿಸದೆ, ತನ್ನ ಮಾತನ್ನು ಮುಂದೆ ಸಾಗಿಸಿದನು:—"ಹೀಗೆ ಮಾಡುವುದರಿಂದ ನನ್ನದೊಂದು ದೊಡ್ಡ ಚಿಂತೆಯು ಪರಿಹಾರವಾಗುವದರಲ್ಲಿದೆ. ತಿಂಗಳ ಸಂಬಳ ತಿಂಗಳ ವೆಚ್ಚಕ್ಕೆ ಸಾಲುತ್ತಿದ್ದಿಲ್ಲ. ಕಾರಣ ನಾನು ಹಲವು ಸ್ಥಳಗಳಲ್ಲಿ ಸಾಲ--ಕೈಗಡಗಳನ್ನು ಮಾಡಬೇಕಾಗುತ್ತಿತ್ತು. ಉದ್ದರಿಯಿಂದ ಸಾಮಾನು ಕೊಟ್ಟ ಅಂಗಡಿಕಾರರ ಉಪದ್ರವವಂತೂ ಬಹು ತಾಪದಾಯಕವಾಗಿತ್ತು. ಆ ಮಹನೀಯರ ಪೀಡೆಗೆ ಗುರಿಯಾಗಿದ್ದ ನನಗೆ, ಎಷ್ಟೋ ಸಲ ಊಟವು ಕೂಡ ರುಚಿ ಹತ್ತುತ್ತಿರಲಿಲ್ಲ. ಇನ್ನು ಆ ಭಾವನೆಗೆ ಅವಕಾಶವಿಲ್ಲ. ಅವಳು ಹೊಸದಾಗಿ ಸಾಲವಾಗದಂತೆ ಎಚ್ಚರದಿಂದ ವೆಚ್ಚ ಮಾಡುವಳಷ್ಟೇ ಅಲ್ಲ; ಒಂದೆರಡು ವರ್ಷಗಳಲ್ಲಿ ಹಳೆಯ ಸಾಲವನ್ನೆಲ್ಲ ತೀರಿಸಿ, ನನ್ನನ್ನು ಋಣಮುಕ್ತನನ್ನಾಗಿ ಮಾಡುವೆನೆಂದು ವಚನಕೊಟ್ಟಿದ್ದಾಳೆ."

“ನೀನು ಸುದೈವಿಯೆ ಸರಿ! ದೇವರು ನಿನ್ನ ಮೊರೆ ಕೇಳಿದನೆನ್ನ ಬೇಕು! ನಿನ್ನಂತೆಯೆ ನಾನೂ ಆರ್ಥಿಕ ಅಡಚಣಿಯಲ್ಲಿ ಬಳಲುತ್ತಿದ್ದೇನೆ; ಆದರೆ ನನ್ನನ್ನು ಈ ಸಂಕಟದಿಂದ ಮುಕ್ತನನ್ನಾಗಿ ಮಾಡುವವರಾರೂ ದೊರೆಯದಿದ್ದಾರೆ!”

ರಂಗರಾಯನು ಪತ್ನಿಯ ಪ್ರಥಮ ದರ್ಶನ ಸಮಯದಲ್ಲಿ ಆದ ಮಾತು-ಕತೆಗಳನ್ನು ವಿವರಿಸಿ ಹೇಳಿ:-“ಈ ವರೆಗಿನ ರಾಡಿಯು ತೊಳೆ-ದು ಹೋಗುವ ವರೆಗೆ ಅವಳು ತನ್ನ ಇಚ್ಛೆಯ ಮೇರೆಗೆ ವ್ಯವಸ್ಥೆಯನ್ನಿಟ್ಟುಕೊಳ್ಳಲಿ. ಕಳೆದ ಹದಿನೈದು ದಿನಗಳ ಸ್ಥಿತಿಯನ್ನು ನೋಡುತ್ತಿರಲು, ಅವಳ ಹಿಡತದ ವೆಚ್ಚದಿಂದ ನನಗೇನೂ ತೊಂದರೆಯಾಗಿಲ್ಲ. ಇಂದಬಳಿಕ ನಿಷ್ಕಾರಣವಾಗಿ ಅವಳ ವ್ಯವಸ್ಥೆಯಲ್ಲಿ ಕೈ ಹಾಕಿ, ಮನೆಯಲ್ಲಿ ಅಶಾಂತತೆಯನ್ನುಂಟು ಮಾಡಿಕೊಳ್ಳುವುದರಲ್ಲಿ ಪ್ರಯೋಜನವೇನು? ದಿನಗಳು ಮೊದಲಿಗಿಂತಲೂ ಸೊಗಸಿನಿಂದ ಕಳೆಯುತ್ತಲಿವೆ. ಇನ್ನು ಕೆಲವು ದಿನಗಳನ್ನು ಹೀಗೆಯೇ ಕಳೆದು ಋಣಮುಕ್ತನಾಗಿ, ಸಮಾಧಾನದ ಉಸಿರ್ಗರೆಯಬೇಕೆಂದಿದ್ದೇನೆ” ಎಂದು ನುಡಿದನು.

ಭೀಮರಾಯನು ಏನೋ ಮಾತಾಡಬೇಕೆಂದಿದ್ದನು; ಆದರೆ ಹೆಂಡತಿಯು ಬಂದುದನ್ನು ನೋಡಿ ಬಾಯಿಯ ಮುಚ್ಚಿದನು.

ರಂಗರಾಯನ ಮನಸ್ಸಿನಲ್ಲಿ ಸುಭದ್ರೆಯನ್ನು ತನ್ನ ಮನೆಗೆ ಕರೆದೊಯ್ಯುವದಿರಲಿಲ್ಲ; ಆದರೆ ಸುಭದ್ರೆಯು ಬರುವೆನೆಂದು ಎರಡು-ಮೂರು ಸಲ ಹೇಳಿದಳು. ರಂಗರಾಯನು ನಿರುಪಾಯನಾದನು. ಸುಭದ್ರೆಯು ಈ ವರೆಗೆ ಅಣ್ಣನ ಮುಂದೆ ಭಾಮಿನಿಯ ವಿಷಯವಾಗಿ ದುರಭಿಪ್ರಾಯವನ್ನು ಪ್ರಕಟಿಸಿ ತಣಿದಿರಲಿಲ್ಲ. ಇವಳು ಈ ವಿಷಯದಲ್ಲಿ ಇನ್ನೂ ಹೆಚ್ಚಾಗಿ ಮಾತಾಡಬೇಕೆಂದಿದ್ದಳು. ಇದಕ್ಕಾಗಿ ತನ್ನ ಮನೆಗಿಂತಲೂ ಅಣ್ಣನ ಮನೆಯೇ ಹೆಚ್ಚು ಉಪಯುಕ್ತ ಕ್ಷೇತ್ರವೆಂದು ಬಗೆದಿದ್ದಳು. ಯಾಕಂದರೆ, ಅಲ್ಲಿ ಭಾಮಿನಿಯೊಡನೆಯೂ ವಾದ-ವಿವಾದ ಮಾಡುವ ಸುಯೋಗವು ದೊರೆಯುವಂತಿತ್ತು. ‘ಹಳ್ಳಿಯ ಹೆಂಗುಸವಳು. ವಿದ್ಯೆಗಲಿತವಳಲ್ಲ. ಅವಳನ್ನು ಪತಿಯ ಸಮಕ್ಷಮ ವಾದ-ವಿವಾದದಲ್ಲಿ

ತೊಡಕಿಸಿದರೆ ತೀರಿತು. ಅಲ್ಪಾವಕಾಶದಲ್ಲಿಯೆ ಉತ್ತರ ಕೊಡಲಾರದವಳಾಗಿ ಪರಾಜಯವನ್ನೊಪ್ಪಿಕೊಳ್ಳುವಳು. ಆ ಮೇಲೆ ಅವಳನ್ನು ಹೀನಳೆಂದು ನಿರ್ಣಯಿಸಲಿಕ್ಕೆ ಅವಕಾಶವಾಗದು.' ಎಂದು ಯೋಚಿಸಿದ್ದ ಸುಭದ್ರೆಯು ಇಂದಿನ ಸುಯೋಗವನ್ನು ವ್ಯರ್ಥಹೋಗಗೊಡಲಿಲ್ಲ.

ಊಟ-ಉಡಿಗೆಗಳ ತರುವಾಯ ರಂಗರಾಯನೂ, ಭೀಮರಾಯನೂ, ಸುಭದ್ರೆಯೂ, ಭೀಮರಾಯನ ತಂಗಿಯಾದ ಸುಶೀಲೆಯೂ ಮೋಟರ ಬಂಡಿಯನ್ನೇರಿ ಮಾಳಮಡ್ಡಿಗೆ ಹೊರಟರು. ರಂಗರಾಯನ ಬಂಗಲೆಗೆ ಬಂದರು.

ಅನ್ಯರ ಅಂತರಂಗ ಚನ್ನಾಗಿ ತಿಳಿಯಬಲ್ಲೆ.

ಸುಮಾರು ಎರಡೂವರೆ ಗಂಟೆಯಾಗಿರಬಹುದು. ರಾಮನು ಮನೆಯ ಹೊರಬಾಗಿಲದ ಹೊಸ್ತಿಲ ಮೇಲೆ ಕುಳಿತಿದ್ದನು. ಅತ್ತಿತ್ತ ಹಲವು ಸಾಮಾನುಗಳು ಬಿದ್ದಿದ್ದುವು. ರಾಮನು ತನ್ನ ಮುರಿದ ಮೋಟರ ಬಂಡಿಯನ್ನು ಸರಿಪಡಿಸುವುದರಲ್ಲಿ ವ್ಯಸ್ತನಾಗಿದ್ದನು.

ರಾಮನು ಬರಿಮೈಯಿಂದಿದ್ದನು. ಹಣೆಯ ಮೇಲೆ ಸ್ಪಷ್ಟವಾದ ಗಂಧದ ಗುರತಿತ್ತು. ಮೈಯಲ್ಲೆಲ್ಲ ಗೋಪೀ ಚಂದನದ ಮುದ್ರೆಗಳಿದ್ದುವು. ಮೋಟರ ಬಂಡಿಯಿಂದಿಳಿದು ಮನೆಯನ್ನು ಪ್ರವೇಶಿಸಬೇಕೆಂದಿರುವ ರಂಗರಾಯನೂ, ಇವನ ಸಂಗಡಿಗರೂ ರಾಮನನ್ನು ನೋಡಿದರು. ಸುಭದ್ರೆಯು ನಸು ನಗೆಯಿಂದ:-“ಮಗು, ಒಳ್ಳೆ ಚಂದಕಾಣುತ್ತಿರುವೆ! ಸುಖದಿಂದ ಬಹು ಕಾಲ ಬಾಳು!” ಎಂದು ನುಡಿದು ಉಪಹಾಸ ಮಾಡಿದಳು. ರಂಗರಾಯನು ಬಹಳ ಲಜ್ಜಿತನಾದನು. ಮೃದುಸ್ವಭಾವದ ಇವನು ಯಾವ ಕಾರಣದಿಂದಲೂ ಗೊಂದಲವೆಬ್ಬಿಸಲಿಕ್ಕೆ ಮನಸ್ಸು ಮಾಡದವನಾಗಿದ್ದನು; ಆದರೆ ತಂಗಿಯ ಉಪಹಾಸವು ಅವನಿಗೆ ಅಸಹ್ಯವಾಯಿತು. ಇವನು ಕಡು ಕೋಪದಿಂದ ಹುಡುಗನ ಕೆನ್ನೆಗೆ ಹೊಡೆದು:-“ಮೂರ್ಖನೆ, ಇದೇನು? ಎಲ್ಲಿ ಹೋಗಿದ್ದೆ? ಇದ

ನ್ನಾರು ಹಚ್ಚಿದರು?" ಎಂದು ಎಂದು ಕೇಳಿದನು. ರಾಮನು ಅಳುತ್ತ ಳುತ್ತ ಅಸ್ಪಷ್ಟವಾಗಿ ಮಾತಾಡಿದನು. ಅದರ ತಾತ್ಪರ್ಯವಿಂತು:—‟ಇಂದು ಮುಂಜಾವಿನಲ್ಲಿ ಅವ್ವನ ಸಂಗಡ ಸೋಮೇಶ್ವರಕ್ಕೆ ಹೋಗಿದ್ದೆನು." ರಂಗರಾಯನು ಮಗನನ್ನು ದಬ್ಬಿಕೊಟ್ಟು:-‟ಹೋಗು, ಬೇಗ ಹೋಗು. ಸಬಕಾರವನ್ನು ಹಚ್ಚಿಕೊಂಡು ಚನ್ನಾಗಿ ಮೈ ತೊಳೆದುಕೊ!" ಎಂದು ನುಡಿದು ಮುಂದೆ ನಡೆದನು. ಎಲ್ಲರೂ ಮುಂದೆ ಸಾಗಿ, ರಂಗರಾಯನು ಓದುತ್ತಕುಳ್ಳಿರುವ ಕೋಣೆಯನ್ನು ಪ್ರವೇಶಿಸಿ ಕುಳಿತರು. ಕ್ಷಣಕಾಲ ಯಾರ ಬಾಯಿಂದಲೂ ಮಾತು ಹೊರಡಲಿಲ್ಲ. ರಂಗರಾಯ-ಸುಭದ್ರೆಯರ ಮುಖಗಳಂತೂ ಬಹು ಗಂಭೀರವಾಗಿದ್ದುವು. ರಂಗರಾಯನ ಮುಖಮುದ್ರೆಯಿಂದ ಇಷ್ಟೊಂದು ಭಾವಿಕತನವು ತೀರ ಅನುಚಿತವು, ಎಂಬ ಭಾವನೆಯು ವ್ಯಕ್ತವಾಗುತ್ತಿತ್ತು. ಸುಭದ್ರೆಯ ಮೋರೆಯ ಲಕ್ಷಣದಿಂದ ನಾನು ಹೀಗಾಗುವುದೆಂದು ಮೊದಲೇ ತರ್ಕಿಸಿದ್ದೆನು, ಎಂಬ ಅಭಿಪ್ರಾಯವು ಸೂಚಿತವಾಗುವಂತಿತ್ತು.

ಮೊದಲು ಭೀಮರಾಯನೇ ಮಾತಾಡಲಿಕ್ಕೆ ಮುಂದರಿದನು. ಇವನು ತುಸನಕ್ಕು ಇಂತು ನುಡಿದನು:-‟ರಂಗ, ನೀನಿದೇನು ಮಾಡಿದೆ? ಒಮ್ಮೆಲೆ ಚಹಾಪಾನ ಸಮಾರಂಭಕ್ಕೆ ಸುದರ್ಶನ ಚಕ್ರವನ್ನು ಹಿಡಿದು ಬಿಟ್ಟೆ! ರಾಮನಿಗೆ ಹೊಡೆದೆಯೇಕೆ? ನಿನ್ನ ಬೆನ್ನ ಹತ್ತಿ ಬಂದುದು ನನ್ನಿಂದ ಅನುಚಿತವಾಯಿತು!"

ಸುಭದ್ರೆಯು ಪತಿಯ ಮಾತುಗಳನ್ನು ಕೇಳಿ ವಿಸ್ಮಯಗೊಂಡಳು. ಇವಳು ಗಂಡನ ಮೋರೆಯ ಕಡೆಗೆ ನೋಡುತ್ತ:-‟ಇದಕ್ಕೂ, ಚಹಾಪಾನಕ್ಕೂ ಸಂಬಂಧವೇನು? ಚಹಾಪಾನ ಸಮಾರಂಭಕ್ಕೆ ಸುದರ್ಶನಚಕ್ರ ಹಿಡಿಯುವದೆಂದರೇನು? ನೀವು ಅದನ್ನು ಹುಡುಗಾಟಿಕೆಯೆಂದು ತಿಳಿದಿರಾ?" ಎಂದು ಕೇಳಿದಳು.

‟ಹುಡುಗಾಟವಾಗಲಿ-ಆಗದಿರಲಿ, ಭಯಾನಕ ಆಟ ಮಾತ್ರವಲ್ಲ! ಅಷ್ಟಕ್ಕಾಗಿ ಹೀಗೆ ರಂಪಾಟವೆಬ್ಬಿಸುವ ಕಾರಣವಿದ್ದಿಲ್ಲ!" ಭೀಮರಾಯನೆಂದನು.

“ಇದರರ್ಥವೇನು?” ಸುಭದ್ರೆಯು ಕೇಳಿದಳು.

“ಅರ್ಥವು ಸಹಜವಾಗಿಯೆ ಆಗುವಂತಿದೆ. ನಾನೇನೂ ಗೂಢವಾಗಿ ಮಾತಾಡಿದವನಲ್ಲ. ಇಂದು ಕಾರ್ತಿಕ ಮಾಸದ ಏಕಾದಶಿಯು. ಪರ್ವಣಿಯ ದಿವಸ. ರಾಮನು ತಾಯಿಯ ಸಂಗಡ ಸೋಮೇಶ್ವರಕ್ಕೆ ಹೋಗಿದ್ದನು. ಅಲ್ಲಿ ಹೊಂಡದಲ್ಲಿ ಸ್ನಾನ ಮಾಡಿದನು. ಒಂದು ದಿನ ನಳದ ನೀರಿನಿಂದ ಜಳಕ ಮಾಡದೆ, ತೀರ್ಥಸ್ಥಳದಲ್ಲಿ ಸ್ನಾನ ಮಾಡಿದರೆ ಮಹಾ ಪಾತಕ ಮಾಡಿದಂತಾಯಿತೆ? ನನಗಂತೂ ಹಾಗೆ ಅನಿಸುವದಿಲ್ಲ!”

ಸುಭದ್ರೆಯು ಗಂಡನ ವಿಷಯದಲ್ಲಿ ಅತಿಶಯ ಕೋಪಗೊಂಡವಳಾಗಿ ಕೇಳಿದಳು: ‘ಮುಂದೆ?’

“ಮುಂದಿನ ಸಂಗತಿಯೂ ಸಾಹಜಿಕವಾದದ್ದು. ಅಲ್ಲಿ ಓರಿಗೆಯ ಗೆಳೆಯರಾಗಲಿ, ವೈದಿಕ ಬ್ರಾಹ್ಮಣರಾಗಲಿ ಕಲೆತಿರಬಹುದು. ಅವರು ಹುಡುಗಾಟಿಕೆಗಾಗಲಿ, ದಕ್ಷಿಣೆಯ ಆಶೆಯಿಂದಾಗಲಿ ರಾಮನಿಗೆ ಗಂಧ ಹಚ್ಚಿರಬಹುದು; ಗೋಪೀಚಂದನದ ಮುದ್ರೆಗಳನ್ನೊತ್ತಿರಬಹುದು. ಇದರಲ್ಲಿ ಮಹಾಪರಾಧದ ಕಾರ್ಯವಾವುದು?”

“ಇದರ ಪರಿಣಾಮವೇನೆಂಬುದನ್ನು ಬಲ್ಲಿರಾ?” ಸುಭದ್ರೆಯು ಕೋಪದಿಂದಲೆ ಕೇಳಿದಳು.

“ಸಾಯಂಕಾಲದಲ್ಲಿ ಕೈ-ಕಾಲು ಮೋರೆಗಳನ್ನು ತೊಳೆದುಕೊಂಡ ಕೂಡಲೆ ಕಾಣದಾಗಿ ಹೋಗುವದು—ಇದೇ ಅವರ ಕೊನೆಯ ಪರಿಣಾಮವು!”

“ಇಷ್ಟು ಮಾತ್ರವೆ! ಮತ್ತೇನೂ ಇಲ್ಲವೆ? ನಿಮ್ಮ ಮಕ್ಕಳಿದ್ದರೆ, ನೀವು ಹೀಗೆ ಮಾಡಗೊಡುತ್ತಿದ್ದಿರಾ?” ಸುಭದ್ರೆಯು ಕೇಳಿದಳು.

“ನನಗೆ ಮಕ್ಕಳೇ ಇಲ್ಲ. ಅಂದಬಳಿಕ ಇಲ್ಲದ್ದನ್ನು ಇದೆಯೆಂದು ಭಾವಿಸಿ ವಾದ-ವಿವಾದ ಮಾಡುವದರಲ್ಲಿ ಪ್ರಯೋಜನವೇನು?”

ಈ ವಾಗ್ಬಾಣವು ಸುಭದ್ರೆಯ ಹೃದಯಕ್ಕೆ ಬಲವಾಗಿ ತಾಗಿತು. ಅವಳು ಆಹತಳಾಗಿ ಮಾತಾಡಹತ್ತಿದಳು:—“ವಾದ-ವಿವಾದ ಮಾಡು

ವದು ವ್ಯರ್ಥವಾಗಬಹುದು; ತೊಳೆದುಕೊಂಡರೆ ಚಂದನದ ಕಲೆಯು ಅಳುಕಿಸಿ ಹೋಗಬಹುದು, ಎಂಬುದು ನನಗೆ ಹೊಳೆಯುವದಿಲ್ಲೆಂದಲ್ಲ; ಆದರೆ ಅದರಿಂದ ಮನಸ್ಸಿನ ಮೇಲೆ ಉಂಟಾದ ಪರಿಣಾಮವು ಮಾತ್ರ ಸಹಜವಾಗಿ ನಾಶವಾಗದು! ನೀವೆಲ್ಲರು ಏನೇ ಅನ್ನಲೊಲ್ಲರೇಕೆ, ನಾನು ಮಾತ್ರ ಅದು ತೀರ ಅನುಚಿತವಾದದ್ದೆಂದು ಸ್ಪಷ್ಟವಾಗಿ ಹೇಳದಿರಲಾರೆನು!"

"ನಾವೆಲ್ಲರು ಅಲ್ಲ—ನಾನೊಬ್ಬನು ಮಾತ್ರ ವಿರುದ್ಧಮತದವನಿರುವೆನು. ರಂಗನು ಕೆನ್ನೆಗೆ ಕೊಟ್ಟು, ನುಗಿಸಿಬಿಟ್ಟ ಪ್ರಾಯಶ್ಚಿತ್ತವನ್ನು ವಿಧಿಸಿದ್ದಾನೆ; ಆದರೆ ಇವನು ಹಾಗೆ ಗೊಂದಲವೆಬ್ಬಿಸುವ ಮೊದಲು ವೇಣುಗೋಪಾಲಾಚಾರ್ಯರ ಮಗಳು ಪತಿಮಂದಿರವನ್ನು ಸೇರಿದ ನಾಲ್ಕೆಂಟು ದಿನಗಳಲ್ಲಿಯೆ ಮೇಮಸಾಹೇಬಳಾಗಿ ಪರಿಣಮಿಸುವದು ಸಾಧ್ಯವೆ? ಎಂಬುದನ್ನು ವಿಚಾರಿಸಬೇಕಾಗಿತ್ತು. ಏನೇ ಆಗಲಿ, ನಾನೀಗ ಕೊಂಚ ಅಡ್ಡಾಡಿ ಬರುವೆನು. ಅಣ್ಣ-ತಂಗಿಯರು ನಡೆಸಿದ್ದ ಅನರ್ಥದ ಪರಿಣಾಮವನ್ನು ವಿಚಾರಿಸುತ್ತ ಕುಳಿತುಕೊಳ್ಳಿರಿ."

ಇದು ವರೆಗೆ ಪಿಟ್ಟೆಂದು ಮಾತಾಡದೆ ಕುಳಿತಿದ್ದ ರಂಗರಾಯನು ಮೋರೆಯೆತ್ತಿ ಭೀಮರಾಯನ ಕಡೆಗೆ ನೋಡಿ:-"ಎಲ್ಲಿಗೆ ಹೋಗುವೆ?" ಎಂದು ಕೇಳಿದನು.

"ನಿನ್ನ ಹೆಂಡತಿಯು ನನಗೆ ತೀರ ಹೊಸಬಳು. ಆವಳ ಪರಿಚಯವನ್ನು ಮಾಡಿಕೊಳ್ಳಬೇಕಾಗಿದೆ. ಪುರಾಣಮತಾಭಿಮಾನಿಯಾದ ಅವಳು ನನ್ನೊಡನೆ ಮಾತಾಡುವಳೊ-ಇಲ್ಲವೊ ಪರೀಕ್ಷಿಸುವೆನು. ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿ ಪರಿಚಯ ಮಾಡಿಕೊಳ್ಳುವೆನು." ಎಂದು ಭೀಮರಾಯನು ಹೊರಟನು. ಭಾಮಿನಿಯಿದ್ದ ಕೋಣೆಯ ಬಾಗಿಲ ಬಳಿಯಲ್ಲಿ ನಿಂತು:-"ತಂಗೀ, ಎಂದು ಬಂದೆ? ಎಲ್ಲವೂ ಕ್ಷೇಮಕರವಷ್ಟೆ?" ಎಂದು ಕೇಳಿದನು. ಭಾಮಿನಿಯು ಕೆಲಸದಲ್ಲಿ ತೊಡಗಿದ್ದಳು. ರಾಮನು ಹತ್ತಿರಿದ್ದು, ತಾಯಿಯ ಕೆಲಸ ಬೆಳೆಯುವಂತೆ ಮಾಡುತಲಿದ್ದನು. ಭಾಮಿನಿಯು ಮೋರೆದಿರುವಿ ನೋಡಿದಳು. ಅಪ

ರಿಚಿತ ಮನುಷ್ಯನು ಒಮ್ಮೆಲೆ ಹೀಗೆ ಮಾತಿಗೆ ಪ್ರವೃತ್ತನಾಗಿರುವದನ್ನು ನೋಡಿ ಕೊಂಚ ವಿಸ್ಮಯ ಹೊಂದಿದಳು. ಮಾಡುತ್ತಿರುವ ಕೆಲಸ ವನ್ನು ತಡೆದಿರಿಸಿ ಎದ್ದು ನಿಂತಳು. ರಾಮನು:-"ಅವ್ವಾ, ಮಾವನು" ಎಂದು ಹೇಳಿದನು. ಭಾಮಿನಿಯು ಆಗಂತುಕನು ಯಾರಾಗಿರಬೇಕೆಂ ಬುದನ್ನು ಊಹಿಸಿದಳು. "ಒಳಗೆ ಬರ್ರಿ, ಅಲ್ಲಿ ಮಣೆಯಿದೆ. ಕುಳಿತು ಕೊಳ್ಳಿರಿ" ಎಂದು ಹೇಳಿದಳು. ಆ ಕೋಣೆಯಲ್ಲಿ ಎರಡು ಪೆಟ್ಟಿಗೆ ಗಳಿದ್ದುವು. ಅವುಗಳ ಬಾಗಿಲುಗಳು ತೆರೆದಿದ್ದವು; ಒಳಗೆ ಏನೂ ಇರ ಲಿಲ್ಲ. ಮುಂಭಾಗದಲ್ಲಿ ಕೋಟು-ಜಾಕೀಟು-ಶರ್ಟು-ಕಾಲಚೀಲ-ಕಾಲರ ಮೊದಲಾದವುಗಳ ರಾಶಿಯು ಬಿದ್ದಿತ್ತು. ಭೀಮರಾಯನು ಭಾಮಿ ನಿಯು ತೋರಿದ ಮಣೆಯ ಮೇಲೆ ಕುಳಿತು:-"ನೀನಿದೇನು ಮಾಡು ತ್ತಿರುವೆ?" ಎಂದು ಕೇಳಿದನು.

ರಾಮನು ಬಟ್ಟೆಯ ರಾಶಿಯಲ್ಲಿಯ ಒಂದು ಜೋಡು ಕಾಲ ಚೀಲವನ್ನು ಹೊರದೆಗೆದು:-"ಅವ್ವಾ. ಇಲ್ಲಿ ನೋಡು; ಮತ್ತೊಂದು ಜೋಡು ಕಾಲಚೀಲವು ಸಿಕ್ಕಿದೆ. ಬಹಳ ಹರಿದಿಲ್ಲ. ಇಲ್ಲಿ ಒತ್ತಟ್ಟಿಗೆ ತುಸ ಹರಿದಿದೆ." ಎಂದು ಹೇಳಿ, ಆ ಕಾಲಚೀಲಗಳನ್ನು ಭಾಮಿನಿಯ ಕೈಯಲ್ಲಿ ಕೊಟ್ಟನು. ಭಾಮಿನಿಯು ಅವುಗಳನ್ನು ತಕ್ಕೊಂಡು ಬೇರೊಂ ದು ಕಡೆಯಲ್ಲಿರಿಸಿದಳು. ಭೀಮರಾಯನು ಭಾಮಿನಿಯ ಕಾರ್ಯ ಪದ್ಧತಿಯನ್ನು ಲಕ್ಷ್ಯವಿರಿಸಿ ನೋಡಿ ಆಶ್ಚರ್ಯಾನ್ವಿತನಾಗಿ:-"ಈ ಬಟ್ಟೆ ಗಳನ್ನೇಕೆ ಹೊರದೆಗೆದಿರುವೆ? ಬಡಬಗ್ಗರಿಗೆ ದಾನಮಾಡಬೇಕೆಂದಿರು ವೆಯಾ? ಇಲ್ಲವೆ ಹೊಲಸು ಹೋದೂಡುವ ಉದ್ದೇಶದಿಂದ ಹೀಗೀ ಕೆಲಸ ನಡೆಸಿರುವೆಯಾ?" ಎಂದು ಕೇಳಿದನು. 'ವಿದ್ಯೆಗಲಿಯದ ಗಾವಿಲ ಹೆಂಗುಸಾಗಿದ್ದ ಭಾಮಿನಿಯು ತನ್ನನ್ನು ನೋಡುತ್ತಲೆ ಲಜ್ಜೆ ಯಿಂದ ಮಾತಾಡದಿರುವಳು' ಎಂದು ಭೀಮರಾಯನು ಮೊದಲೇ ತರ್ಕಿಸಿಟ್ಟಿದ್ದನು; ಆದರೆ ಭಾಮಿನಿಯ ಆಚರಣೆಯಿಂದ ಭೀಮರಾಯನ ತರ್ಕವು ಹುಸಿಯಾಯಿತು. ಭಾಮಿನಿಯು ಮೋರೆಯನ್ನು ಎತ್ತದೆ ಸಹಜ ದನಿಯಿಂದ:-"ನಾನು ಇವುಗಳನ್ನು ದುರಸ್ತಿಗೆ ಕಳುಹಬೇಕೆಂ

ದಿದ್ದೇನೆ. ಇಲ್ಲಿ ನೋಡಿರಿ; ಕಾಲಚೀಲಗಳು ಬಹಳವಾಗಿ ಬಿದ್ದುಕೊಂಡಿವೆ. ಇವುಗಳ ರಿಪೇರಿಯನ್ನು ಮಾಡಿಸಿ ತರಿಸಿ ವ್ಯವಸ್ಥೆಯಿಂದಿಟ್ಟುಕೊಂಡರೆ, ಇನ್ನು ಹತ್ತುವರ್ಷಗಳ ವರೆಗೆ ಕಾಲಚೀಲಗಳನ್ನು ಕೊಳ್ಳದಿದ್ದರೂ ನಡೆಯುವಂತಿದೆ." ಎಂದು ನುಡಿದಳು.

ಭೀಮರಾಯನು ಕ್ಷಣಕಾಲ ನೀರವವಾಗಿದ್ದು, ಬಳಿಕ ಮಾತಾಡಹತ್ತಿದನು:-"ತಂಗೀ, ಈಗ ಇಲ್ಲಿ ಮತ್ತೆ ಯಾರೂ ಇಲ್ಲ. ನಾನು ಈ ಏಕಾಂತಸಮಯದಲ್ಲಿ ಅವಸರದಿಂದ ಒಂದೆರಡು ಮಾತುಗಳನ್ನು ಹೇಳಿಡಬೇಕಾಗಿದೆ. ನೀನು ನಿನ್ನ ನಾದಿನಿಯನ್ನು ನೋಡಿ ನನ್ನ ಸ್ವಭಾವದ ಊಹೆಮಾಡಬಯಸಬೇಡ; ಹಾಗು ಬಹಿರಂಗದ ಉಡಿಗೆ-ತೊಡಿಗೆಗಳನ್ನೂ ಆಚಾರ--ವ್ಯವಹಾರಗಳನ್ನೂ ನೋಡಿ, ನನ್ನನ್ನು ಫಿರಂಗಿಯೆಂದು ನಿಶ್ಚಯಿಸಬೇಡ. ನಾನು ನಿಜವಾಗಿಯೂ ಕರ್ನಾಟಕದ ಬ್ರಾಹ್ಮಣನು. ಯಾರಾದರೂ ಸೋಮೇಶ್ವರದಲ್ಲಿ ಸ್ನಾನ ಮಾಡಿ ಬಂದಿರುವರೆಂಬ ಸುದ್ದಿಯನ್ನು ಕೇಳಿದ ಕೂಡಲೆ, ಭಾವಿಕತನದ ಪರಮಾ-ವಧಿಯಾಯಿತೆಂದು ಭಾವಿಸಿ, ಅವರನ್ನು ಹೊಡೆಯ ಹೋಗುವವನು ನಾನಲ್ಲವೆಂಬುದನ್ನು ನಿಶ್ಚಯವಾಗಿ ತಿಳಿದುಕೊಳ್ಳು."

ಭಾಮಿನಿಯು ಪ್ರತಿಮಾತಾಡದಿದ್ದಳು. ಭೀಮರಾಯನು ಮತ್ತೆ ಹೇಳತೊಡಗಿದನು:-"ರಂಗರಾಯನು ರಾಮನನ್ನು ಹೊಡೆದದ್ದು ನಿಜ; ಆದರೆ ಇದರ ಎಲ್ಲ ಹೊರೆಯನ್ನು ರಂಗರಾಯನ ಮೇಲೆ ಹಾಕಬಯಿಸಬೇಡ; ಯಾಕಂದರೆ ಅವನು ಅಷ್ಟೊಂದು ಕ್ಷುಲ್ಲಕ ಮನಸ್ಸಿನವನಲ್ಲ. ನಾನೂ ರಂಗರಾಯನೂ ಬಾಲ್ಯಸ್ನೇಹಿತರು. ನಾನವನ ಸ್ವಭಾವವನ್ನು ಚನ್ನಾಗಿ ಬಲ್ಲೆನು."

ಭಾಮಿನಿಯು ಈ ಮಾತಿನ ಉತ್ತರವನ್ನೂ ಕೊಡಲಿಲ್ಲ. ಸುಮ್ಮನೆ ನಿಂತಿದ್ದಳು. ಭೀಮರಾಯನು ಹೇಳ ಹತ್ತಿದನು:-"ತಂಗೀ, ಕುಳಿತುಕೊಳ್ಳು; ಹಿಡಿದಿದ್ದ ಕೆಲಸವನ್ನು ಮುಂದೆ ಸಾಗಿಸು. ನನ್ನ ಸಲುವಾಗಿ ನೀನು ನಿನ್ನ ಕೆಲಸದಲ್ಲಿ ವ್ಯತ್ಯಯ ತಂದುಕೊಳ್ಳುವದು ಬೇಡ." ತುಸ ಹೊತ್ತು ಸುಮ್ಮನಿದ್ದು, ಮತ್ತೆ ಇಂತು ನುಡಿದನು:-"ತಂಗಿ, ಕುಶಲ

ಹಸ್ತದಿಂದ ನಡೆದಿರುವ ನಿನ್ನ ಈ ವ್ಯವಸ್ಥಿತ ಕಾರ್ಯವನ್ನು ನೋಡಿ ನನಗೆ ಅತ್ಯಾನಂದವಾಗಿದೆ. ನಾನು ನಿನ್ನ ಈ ಮನೆಗೆಲಸವನ್ನು ನೋಡಿ ತುಸಮಟ್ಟಿಗಾದರೂ ಕಲಿತುಕೊಳ್ಳುವ ಆಶೆಯುಳ್ಳವನಾಗಿದ್ದೇನೆ.''

ಭಾಮಿನಿಯು ಕೆಳಗೆ ಕುಳಿತು ಮೆಲ್ಲನೆ ನಕ್ಕು, ಇಂತು ನುಡಿದಳು:-''ಇವೆಲ್ಲ ಗೃಹಿಣಿಯರ ಕಾರ್ಯಗಳು. ಇಂಥವುಗಳನ್ನು ನೀವು ಕಲಿಯುವುದರಿಂದ ಪ್ರಯೋಜನವೇನು?''

''ಇದರ ಉತ್ತರವನ್ನು ಇಂದು ಕೊಡಲಾರೆನು. ಇನ್ನೊಂದು ದಿನ ಹೇಳುವೆನು.''

ಭಾಮಿನಿಯು ಮಾತಾಡದಿದ್ದು ತನ್ನ ಕೆಲಸವನ್ನು ಮುಂದೆ ಸಾಗಿಸಿದಳು. ಕೆಲ ಹೊತ್ತಿನ ಮೇಲೆ:-''ಇವೆಲ್ಲ ಕೆಲಸಗಳು ದರಿದ್ರರು ಮಾಡತಕ್ಕವುಗಳು. ನಿಮ್ಮಂಥವರಿಗೆ ಇವುಗಳನ್ನು ಕಲಿತುಕೊಳ್ಳುವುದರಿಂದ ಉಪಯೋಗವಾಗದು'' ಎಂದು ನುಡಿದಳು.

ಭೀಮರಾಯನು ನಿಟ್ಟುಸಿರ ಬಿಟ್ಟು ನುಡಿಯಹತ್ತಿದನು:-'ತಂಗಿ, ಬಹಿರಂಗದ ಬೆಡಗನ್ನು ನೋಡಿ ನೀನೂ ಮೋಸ ಹೋಗುವಿಯಾದರೆ, ಈ ಸಂಸಾರದಲ್ಲಿ ನಮ್ಮಂಥ ದುರ್ದೈವಿಗಳ ದುಃಸ್ಥಿತಿಯನ್ನು ತಿಳಿಯುವವರೇ ಇಲ್ಲವೆಂದೆನ್ನಬೇಕಾಗುತ್ತಿದೆ! ನನಗೆ ಕಲಿಸದಿದ್ದರೆಬಿಡು; ನಾನು ನನ್ನ ತಂಗಿಯನ್ನು ದಿನಾಲು ನಿನ್ನ ಹತ್ತರ ಕಳುಹಿ ಕೊಡುವೆನು. ಅವಳಿಗೆ ಕಲಿಸು. ಅವಳು ನಿನ್ನ ಕಾರ್ಯ ಪದ್ಧತಿಯ ಕೆಲವಂಶವನ್ನಾದರೂ ಕಲಿತುಕೊಂಡರೆ, ಅತ್ತೆಯ ಮನೆಯಲ್ಲಿ ಲೋಕಾದರಕ್ಕೆ ಪಾತ್ರಳಾಗದಿರಳು.''

ಭಾಮಿನಿಯು ಸುಮ್ಮನಿದ್ದಳು. ಭೀಮರಾಯನು ಮತ್ತೆ ಮಾತಾಡುವುದರಲ್ಲಿದ್ದನು. ಬೂಟು ಕಾಲುಗಳ ಶಬ್ದವನ್ನು ಕೇಳಿ, ಮೆಲ್ಲನೆ ಇಂತು ಹೇಳಿದನು:-''ಅವರೆಲ್ಲರು ಇಲ್ಲಿಗೆ ಬರುತ್ತಿರುವರು. ಅವರಲ್ಲಿ ನನ್ನ ತಂಗಿಯೂ ಇದ್ದಾಳೆ. ನನ್ನ ಹೆಂಡತಿಯ ಹಾಗು ತಂಗಿಯ ವೇಷ-ಭೂಷಣಗಳ ಸಾದೃಶ್ಯವನ್ನು ನೋಡಿ, ಇಬ್ಬರ ಸ್ವಭಾವವೂ ಒಂದೇ ವಿಧವಾದುದೆಂದು ಭಾವಿಸಬೇಡ.''

“ನಾನು ಅನ್ಯರ ಅಂತರಂಗವನ್ನು ಸರಿಯಾಗಿ ತಿಳಿದುಕೊಳ್ಳ ಬಹುದು.” ಭಾಮಿನಿಯು ನಸುನಗೆಯಿಂದ ನುಡಿದಳು.

“ತಿಳಿದುಕೊಳ್ಳಬಹುದು ಯಾಕೆ? ನಿಶ್ಚಯವಾಗಿಯೂ ತಿಳಿಯ ಬಲ್ಲೆಯೆಂಬುದನ್ನು ನಾನು ಅರಿತಿರುವೆನು!”

ನಿನ್ನ ವಚನದ ಬೆಲೆ ಮುಂದೆ ಗೊತ್ತಾಗುವದು

ಆಗಂತುಕರು ರಂಗರಾಯನೂ ಸುಭದ್ರೆಯೂ ಆವಳ ನಾದಿನಿಯಾದ ಸುಶೀಲೆಯೂ ಆಗಿದ್ದರು. ರಂಗರಾಯನೂ ಸುಭದ್ರೆಯೂ ಮುಂದೆ ಇದ್ದರು. ಮೊದಲು ಕೋಣೆಯನ್ನು ಹೊಕ್ಕರು. ಸುಶೀಲೆಯು ಹಿಂದೆ ಇದ್ದಳು. ಇನ್ನು ಕೋಣೆಯಲ್ಲಿ ಕಾಲಿಡತಕ್ಕವಳಿದ್ದಳು. ಇಷ್ಟರಲ್ಲಿ ಭೀಮರಾಯನು ಇವಳಿಗೆ ಬೂಟುಗಳನ್ನು ತೆಗೆದಿರಿಸಿ ಒಳಗೆ ಬಾ, ಎಂದು ಸನ್ನೆಯ ಮೂಲಕ ಸೂಚಿಸಿದನು. ಸುಶೀಲೆಯು ಬೂಟುಗಳನ್ನು ಬಿಚ್ಚತೊಡಗಿದಳು. ಸುಭದ್ರೆಯು ಹಿಂದಿರುಗಿ ನೋಡಿ, ವಿಸ್ಮಯ ದಿಂದ ಪತಿಯನ್ನು ಕುರಿತು ಪ್ರಶ್ನೆ ಮಾಡಿದಳು:—“ಕಾರಣವೇನು?”

“ಬೂಟುಗಳನ್ನು ಬಿಚ್ಚಿಟ್ಟು ಬರುವುದರಲ್ಲಿ ದೋಷವೇನು? ಬೂಟುಗಳನ್ನು ಬಿಚ್ಚಿಟ್ಟರೆ ಕಾಲುಗಳಿಗೆ ಮುಳ್ಳು ನಡುವಂತಿಲ್ಲ; ಕೆಸರು ಹತ್ತುವಂತಿಲ್ಲ.” ಭೀಮರಾಯನು ಹೇಳಿದನು.

“ಇದು ನನಗೆ ಗೊತ್ತಿದೆ! ನೀವು ಒಮ್ಮಿಂದೊಮ್ಮೆಲೆ ಹೀಗೆ ಸೂಚಿಸಲಿಕ್ಕೆ ಕಾರಣವೇನೆಂಬದನ್ನು ಮಾತ್ರ ನಾನು ವಿಚಾರಿಸಿದೆನು!” ಸುಭದ್ರೆಯು ನುಡಿದಳು.

“ನಿನ್ನ ಅತ್ತಿಗೆಯು ಭಾವಿಕ ಮನುಷ್ಯಳು. ಮೇಲಾಗಿ ನಿಮ್ಮ ಬ್ಬರಿಗಿಂತ ಹಿರಿಯಳು. ಹಿರಿಯರ ಹತ್ತಿರ ಹೋಗಬೇಕಾದರೆ, ಬರಿ ಗಾಲಿನಿಂದ ಹೋಗುವದೇ ವಿಹಿತವು.” ಭೀಮರಾಯನು ಹೇಳಿದನು.

ಸುಭದ್ರೆಯು ಪತಿಯ ಪಾದಗಳ ಕಡೆಗೆ ನೋಡಿದಳು. ಭೀಮ ರಾಯನು ಒಳಗೆ ಬರುವ ಮೊದಲು ಬೂಟುಗಳನ್ನು ಬಿಚ್ಚಿರಿಸಿ ಒಳಗೆ

ಹೊಕ್ಕಿದ್ದನು. ಸುಭದ್ರೆಯು ಗಂಡನ ಬರಿಗಾಲುಗಳನ್ನು ನೋಡಿ ಕೋಪಗೊಂಡಳು. ಇವಳ ಮೈಯೆಲ್ಲವೂ ಉರಿಯಹತ್ತಿತು. "ಹಿರಿಯರ ವಿಷಯದಲ್ಲಿಯು ನಿಮ್ಮ ಭಕ್ತಿ-ವಿಶ್ವಾಸಗಳು ಅಸಾಧಾರಣವಾದವುಗಳು! ಶ್ರದ್ಧೆಯು ಕೆಟ್ಟದ್ದಲ್ಲವಾದರೂ ಅತಿರೇಕವಾದರೆ, ಕೆಡಿಸದೆ ಬಿಡದು! ಇದು ಮಲಗುವ ಮನೆಯಾಗಿರದೆ ದೇವ ಮಂದಿರವಾಗಿದ್ದರೆ, ನೀವಿಂದು ಪಂಚಗವ್ಯವನ್ನು ಸೇವಿಸದೆ ಒಳಗೆ ಕಾಲಿಕ್ಕುತ್ತಿದ್ದಿಲ್ಲ!" ಎಂದು ಸಂತಾಪಾತಿರೇಕದಿಂದುಚ್ಚರಿಸಿದಳು.

ಭೀಮರಾಯನು ಕಾಂತೆಯ ಕೋಪವನ್ನು ನೋಡಿ ನಕ್ಕು, ಮಾತಾಡತೊಡಗಿದನು:—"ಗೋಮಯವು ನನಗೆ ಸೇರುವುದಿಲ್ಲ. ಕಾರಣ ನಾನು ಪ್ರಸಂಗವಿಶೇಷದಲ್ಲಿಯೂ ಗೋಮಯವನ್ನು ತಿನ್ನಲಾರೆನು. ಮತ್ತೊಂದು ಮಾತೆಂದರೆ, ನಾನು ದೇವರ ನಾಮಸ್ಮರಣೆಯನ್ನೆಂದೂ ಮಾಡಿದವನಲ್ಲ. ಕಾರಣ ದೇವರಿಗೂ ನನಗೂ ಸಂಬಂಧವಿಲ್ಲ. ಹೀಗಿರಲು ನಿಷ್ಕಾರಣವಾಗಿ ದೇವಮಂದಿರವನ್ನು ಹೊಕ್ಕು ಉತ್ಪಾತವೆಬ್ಬಿಸಲಿಕ್ಕೆ ನಾನೆಂದೂ ಮನಸ್ಸು ಮಾಡುವವನಲ್ಲ." ಬಳಿಕ ಭಾಮಿನಿಯ ಕಡೆಗೆ ನೋಡಿ:—"ತಂಗೀ, ಈ ಮನೆಯಲ್ಲಿ ಒಂದು ದೊಡ್ಡ ಕಪಾಟು ಇತ್ತು. ಅದು ಇಂದು ಕಾಣದಾಗಿದೆ. ನೀನದನ್ನು ಬೇರೆ ಕಡೆಯಲ್ಲಿ ಇಡಿಸಿರುವೆಯೇನು?" ಎಂದು ಕೇಳಿದನು.

"ಅಹುದು. ಕಸ ಉಡುಗಿಸಲಿಕ್ಕೂ ಸಾರಿಸಲಿಕ್ಕೂ ತೊಂದರೆಯಾಗುತ್ತಿತ್ತು. ಮಲಗುವ ಮನೆಯಲ್ಲಿ ಹಾಗೆ ಸಾಮಾನುಗಳನ್ನು ಹರಿವಿಕೊಂಡು, ಹೊಲಸಿಗೆ ಎಡೆಮಾಡಿಕೊಟ್ಟು, ಹುಳ-ಹುಪ್ಪಡಿಗಳ ವಾಸಕ್ಕೆ ಅನುವು ಮಾಡಿ ಕೊಡುವದು ಒಳಿತಲ್ಲವೆಂದು ಆಲೋಚಿಸಿ, ಆ ಕಪಾಟನ್ನು ಹೊರಗೆ ಇರಿಸಿರುವೆನು........"

"ಮನೆಯಲ್ಲಿ ಕಪಾಟು ಇದ್ದರೆ, ಹೊಲಸಾಗುವದೆ? ಕ್ರಿಮಿ-ಕೀಟಕಗಳಾಗುವವೆ?" ಸುಭದ್ರೆಯು ಉಪಹಾಸದಿಂದ ಕೇಳಿದಳು.

ಭಾಮಿನಿಯು ಸುಭದ್ರೆಯ ಮೋರೆಯ ಮೇಲೆ ದೃಷ್ಟಿಯಿರಿಸಿ:-"ತಂಗೀ. ಆಗದೇನು? ಮೇಲೆ ಮೇಲೆ ನೋಡುವವರಿಗೆ ಕಾಣದಿದ್ದರೂ

ಕಪಾಟಿನ ಬುಡದಲ್ಲಿ ಹೊಲಸೂ ಹುಳ-ಹುಪ್ಪಡಿಗಳೂ ಇರುವದು ಸಹಜವಾದದ್ದು" ಎಂದು ನುಡಿದಳು.

ಸುಭದ್ರೆಯು ಪ್ರತಿಮಾತಾಡುವುದರಲ್ಲಿದ್ದಳು; ಆದರೆ ಪತಿಯ ಪ್ರಬಲ ಸ್ವರವನ್ನು ಕೇಳಿ ಸುಮ್ಮನಾದಳು. ಭೀಮರಾಯನು ಉತ್ಸಾಹ ದಿಂದ ಮಾತಾಡಹತ್ತಿದನು:-"ತಂಗಿ, ಸೂಕ್ಷ್ಮರೀತಿಯಿಂದ ನೋಡು ವುದು ನಮಗೆ ಬೇಡ. ಮರೆಯಲ್ಲಿ ಎಷ್ಟೇ ಹೊಲಸಿದ್ದರೂ, ಕ್ರಿಮಿ ಕೀಟಕಗಳು ಚಿರ ನಿವಾಸ ಭೂಮಿಯನ್ನು ಮಾಡಿಕೊಂಡಿದ್ದರೂ ನಮಗೆ ಹಾನಿಯಿಲ್ಲ! ಯಾಕೆಂದರೆ ಅವು ನಮ್ಮ ದಿವ್ಯದೃಷ್ಟಿಗೆ ಗೋಚರಿಸವು! ರಂಗ, ನಾನನ್ನುವ ಮಾತು ನಿಜವಷ್ಟೆ?"

ರಂಗರಾಯನು ಮಾತಾಡಬಯಸಲಿಲ್ಲ. ಸುಭದ್ರೆಯ ಕೋಪ ಕ್ಕೆ ಆಳತೆಯಿಲ್ಲದಾಯಿತು. ಆದರೂ ಅವಳು ತನ್ನ ಕೋಪವನ್ನು ತಡ ಕೊಂಡು ವಾದವಿವಾದ ಪ್ರವೃತ್ತಿಯನ್ನು ಬಿಗಿ ಹಿಡಿದುಕೊಂಡು ಮೌನದಿಂದಿದ್ದಳು. ಈ ದಂಪತಿಗಳು ಪರಸ್ಪರರಲ್ಲಿ ನಿಜವಾದ ಪ್ರೇಮ ಭಾವನೆಯುಳ್ಳವರಾಗಿದ್ದರು; ಆದರೆ ಬಹಿರಂಗದ ಆಚಾರ-ವಿಚಾರ ಗಳಲ್ಲಿ, ಕ್ರಿಯಾ-ಕಲಾಪಗಳಲ್ಲಿ ಮತ್ತೈಕ್ಯವುಳ್ಳವರಾಗಿರಲಿಲ್ಲ. ಕಾರಣ ಸಾಮಾನ್ಯ ಕಾರಣದ ಸಲುವಾಗಿ ಆಗಾಗ್ಗೆ ವಾದ-ವಿವಾದ ಪ್ರವೃತ್ತ ರಾಗುತ್ತಿದ್ದರು. ಕಲಹಿಸುತ್ತಿದ್ದರು. ಅನ್ಯರ ಸಮ್ಮುಖದಲ್ಲಿ ನಡೆದ ವಾಗ್ಯುದ್ಧದಲ್ಲಿ ಪರಾಜಯವನ್ನು ಸ್ವೀಕರಿಸುವುದು ಸುಭದ್ರೆಯ ಸ್ವಭಾ ವಕ್ಕೆ ತೀರ ವಿಪರೀತವಾಗಿತ್ತು. ಭಾರ್ಯೆಯ ಈ ಸ್ವಭಾವವನ್ನರಿತಿದ್ದ ಭೀಮರಾಯನು ಹೆಂಡತಿಯೊಡನೆ ವಾದ-ವಿವಾದಕ್ಕೆ ತೊಡಗಿದಾಗ 'ಹಗ್ಗವನ್ನು ಹರಿಯುವವರೆಗೂ ಜಗ್ಗಲಾಗದು' ಎಂಬ ನಾಣ್ಣುಡಿಯಂತೆ ಪ್ರೋಕ್ತವಿಚಾರವನ್ನವಲಂಬಿಸಿ, ತಾನೇ ಪರಾಜಯವನ್ನು ಸ್ವೀಕರಿಸ ಲಿಕ್ಕೆ ಸಿದ್ಧನಾಗುತ್ತಿದ್ದನು; ಇಲ್ಲವೆ ವಾದ-ವಿವಾದವನ್ನು ಅರ್ಧಕ್ಕೇನೆ ನಿಲ್ಲಿಸಿ, ಯುದ್ಧಮಾಡಲಾರದ ದಂಡಾಳುಗಳು ಸಮರ ಭೂಮಿಯಿಂದ ಕಾಲ್ದೆಗೆಯುವಂತೆ ಪಲಾಯನ ಮಂತ್ರವನ್ನು ಜಪಿಸುತ್ತಿದ್ದನು; ಆದರೆ ಭೀಮರಾಯನು ಇಂದು ಆ ಪ್ರವೃತ್ತಿಗೊಳಗಾಗಲಿಲ್ಲ. ಸುಭದ್ರೆಯು

ಪತಿಯ ಸ್ಥಿರತೆಯನ್ನು ಭಾವಿಸಿ ತಿಳಕೊಂಡವಳಾಗಿ, ತಾನೇ ಶಾಂತತೆಯನ್ನವಲಂಬಿಸುವುದನ್ನು ನಿರ್ಧರಿಸಿಕೊಂಡಳು.

ಭೀಮರಾಯನು ಇಂದು ತುಂಬ ನಿಷ್ಠುರನಾಗಿದ್ದನು. ಪರರ ದೋಷಗಳನ್ನೆತ್ತಿ ಕಟುವಚನಗಳನ್ನಾಡುವದು ಸುಭದ್ರೆಯ ಸ್ವಭಾವವಾಗಿ ಹೋಗಿತ್ತು. ಇವಳು ಎಲ್ಲಿ ಹೋದರೂ ತನ್ನ ಈ ಕಾಯಕವನ್ನು ಬಿಡುತ್ತಿದ್ದಿಲ್ಲ. ಸುಭದ್ರೆಯು ಈ ಮೊದಲು ಪತಿಯ ಸಮಕ್ಷಮದಲ್ಲಿ ಎಷ್ಟೋ ಸಲ ಅನ್ಯರನ್ನು ಆಡಿಕೊಳ್ಳುವ ಅಶಿಷ್ಟ ವ್ಯವಹಾರವ ಮಾಡಿದ್ದರೂ ಭೀಮರಾಯನು ಇಷ್ಟೊಂದು ಕೋಪಗೊಂಡಿರಲಿಲ್ಲ; ಯಾಕಂದರೆ, ಮುನ್ನಿನ ಪ್ರಸಂಗಗಳಲ್ಲಿ ಸುಭದ್ರೆಯ ನಿಂದೆಯ ವಿಷಯಗಳಾಗಿದ್ದ ವ್ಯಕ್ತಿಗಳಿಗೆ ವಿಶೇಷ ಹಾನಿಯೊದಗುವಂತಿರಲಿಲ್ಲ; ಆದರೆ ಈಗಿನ ಪ್ರಸಂಗವು ಹಾಗಿರಲಿಲ್ಲ. ಸುಭದ್ರೆಯು ಪ್ರಥಮ ದರ್ಶನ ಸಮಯದಿಂದ ಇದು ವರೆಗೆ ಭಾಮಿನಿಯ ನಿಂದೆಗೆ ಉದ್ಯುಕ್ತಳಾಗಿದ್ದಳು; ಭಾಮಿನಿಯ ಅಹಿತವನ್ನು ಮಾಡುವದಕ್ಕೆ ಬದ್ಧಕಂಕಣಳಾಗಿದ್ದಳು. ಪತಿಸುಖದಿಂದ ವಂಚಿತಳಾಗಿದ್ದ ಭಾಮಿನಿಯು ಬಹು ದಿನಗಳ ತರುವಾಯ ಕೇವಲ ದೈವಾನುಕೂಲತೆಯಿಂದ ಗಂಡನ ಮನೆಯಲ್ಲಿ ಕಾಲಿಕ್ಕಿದ್ದಳು; ಪತಿಯ ಹೃದಯವನ್ನು ಆಕ್ರಮಿಸುವದರಲ್ಲಿದ್ದಳು; ಆದರೆ ಸುಭದ್ರೆಯು ಭಾಮಿನಿಯ ಈ ಸುಖಪ್ರಾಪ್ತಿಗೆ ಮೊದಲಿನಿಂದಲೂ ಅಡ್ಡಿಯನ್ನೊಡ್ಡಿದ್ದಳು; ಭಾಮಿನಿಯನ್ನು ಪತಿಗೃಹದಿಂದ ಹೊರದೂಡಿಸುವ ದುರುದ್ದೇಶ ಪ್ರೇರಿತಳಾಗಿದ್ದಳು. ಇದು ಭೀಮರಾಯನಿಗೆ ಸಮ್ಮತವಿರಲಿಲ್ಲವಿಷ್ಟೇ ಅಲ್ಲ; ಹೆಂಡತಿಯ ಈ ದುರ್ವ್ಯವಹಾರದಿಂದ ಇವನ ಹೃದಯವು ದುಃಖದಿಂದಲೂ ಕೋಪದಿಂದಲೂ ತುಂಬಿಹೋಗಿತ್ತು. ಮತ್ತೊಂದು ಮಾತೇನೆಂದರೆ ಭೀಮರಾಯನು ತನ್ನ ಹೆಂಡತಿಯ ಹಾಗು ಭಾಮಿನಿಯ ಯೋಗ್ಯತೆಯನ್ನು ಒರೆಗೆ ಹಚ್ಚಿ ಪರೀಕ್ಷಿಸಿದ್ದನು; ಹಾಗು ಭಾಮಿನಿಯ ಪಾದಧೂಳಿಯ ಯೋಗ್ಯತೆಯೂ ತನ್ನ ಹೆಂಡತಿಯಲಿಲ್ಲವೆಂಬದನ್ನು ಗೊತ್ತುಮಾಡಿಕೊಂಡಿದ್ದನು. ಕಾರಣ ಭೀಮರಾಯನು ಇಂದು ತನ್ನ ಮಡದಿಯ ಅಪರಾಧ ಕ್ಷಮಿಸದಾಗಿದ್ದನು.

ಸುಭದ್ರೆಯು ವಿದ್ಯಾಭೂಷಿತೆಯು. ಸುಧಾರಕಳು. ಇದುವರೆಗೂ ಗಂಡನ ಮೇಲೆ ತನ್ನ ಟಬರು ನಡಿಸುತ್ತ ಬಂದವಳು. ಭೀಮರಾಯನು ಹೆಂಡತಿಯ ದೋಷವನ್ನು ಸ್ಪಷ್ಟವಾಗಿ ಸೂಚಿಸಿ, ಅವಳ ಕಿವಿ ಹಿಂಡಲಸಮರ್ಥನಾಗಿದ್ದನು. ಅಂತೆಯೆ ಅವನು ಇಂದು ತನ್ನ ಕೋಪವನ್ನು ಒಂದು ಬಗೆಯಿಂದ ಪ್ರಕಟಿಸಿ, ತನ್ನ ಹೆಂಡತಿಗೆ ಪಶ್ಚಾತ್ತಾಪವುಂಟಾಗುವಂತೆ ಮಾಡಬೇಕೆಂದು ಆಲೋಚಿಸಿದ್ದನು.

"ಸುಶೀಲೆ, ನೀನು ದಿನಾಲು ನಿನ್ನ ಈ ಅಕ್ಕನ ಹತ್ತರ ಬರುತ್ತಿರು. ಇವಳ ಕಾರ್ಯಪದ್ಧತಿಯನ್ನು ಅವಲೋಕಿಸಿ ಕಲಿತುಕೊಳ್ಳು. ನೀನು ಹೀಗೆ ಮಾಡಿದೆಯಾದರೆ, ಮುಂದೆ ಅತ್ತೆಯ ಮನೆಯಲ್ಲಿ ನಿಶ್ಚಯವಾಗಿಯೂ ಸುಖವನ್ನು ಹೊಂದುವೆ." ಭೀಮರಾಯನು ತನ್ನ ತಂಗಿಯನ್ನುದ್ದೇಶಿಸಿ ನುಡಿದನು.

ಸುಶೀಲೆಯು ನಗೆಮೋರೆ ಮಾಡಿ ಸುಮ್ಮನಿದ್ದಳು ಭಾಮಿನಿಯು ಮೋರೆಯನ್ನು ಮೇಲೆತ್ತದೆ ಇಂತು ಮಾತನಾಡಿದಳು:—"ಹೀಗೆನ್ನಬೇಡಿರಿ. ಸುಶೀಲೆಯು ನನ್ನ ಅನುಕರಣಮಾಡಿ ಉಪಯೋಗವಿಲ್ಲ. ಇವಳು ನನ್ನಂತೆ ಆಚರಿಸಹತ್ತಿದರೆ, ನಿಮ್ಮ ಸುಧಾರಕ ಸಮಾಜವು ಇವಳಿಗೆ ಬಹಿಷ್ಕಾರವ ಹಾಕದೆ ಬಿಡದು!"

"ಸಮಾಜವು ಏನೇ ಮಾಡಲಿ, ಗೃಹಸೌಖ್ಯಕ್ಕೆ ಬಾಧೆಬಾರದು. ಇವಳು ನಿನ್ನ ಕಾರ್ಯಕುಶಲತೆಯನ್ನು ಕಲಿತಿಟ್ಟರೆ, ಭವಿಷ್ಯತ್ಕಾಲದ ದಾಂಪತ್ಯ ಜೀವನವು ಒಳ್ಳೇ ಸುಖಮಯವಾಗುವದೆಂದು ನಾನು ಪಣ ಮಾಡಿ ಹೇಳಬಲ್ಲೆನು!" ಭೀಮರಾಯನು ಆವೇಶದಿಂದ ನುಡಿದನು.

ಇದುವರೆಗೆ ಸುಮ್ಮನಿದ್ದ ರಂಗರಾಯನು ಮಾತಾಡಲಿಕ್ಕೆ ಮುಂದರಿದನು. ಇವನು ತಂಗಿಯ ಮೋರೆಯ ಕಡೆಗೆ ನೋಡಿ ಚೇಷ್ಟೆ ಮಾಡುವ ಉದ್ದೇಶದಿಂದ:—"ಇದು ವರೆಗೆ ಸಹಜವಾಗಿ ಮಾತಾಡಿದ್ದೇ ಸಾಕಾಗಿದೆ. ಇನ್ನು ಪಣಕಟ್ಟಿ ಮಾತಾಡುವ ಪ್ರಯೋಜನವಿಲ್ಲ" ಎಂದು ನುಡಿದನು.

ಭೀಮರಾಯನು ಈ ಮಾತಿನ ಕಡೆಗೆ ಲಕ್ಷ್ಯವಿರಿಸದೆ, ಮುಂದೆ

ಮಾತಾಡಹತ್ತಿದನು:-"ಸುಶೀಲೆಯು ಭಾಮಿನಿಯ ಇಂದಿನ ಇದೊಂದೇ ಕೆಲಸವನ್ನು ಕಲಿತಿಟ್ಟುಕೊಂಡರೂ ಎಷ್ಟೋ ಪ್ರಯೋಜನವನ್ನು ಹೊಂದ ಬಹುದಾಗಿದೆ. ದಿನಾಲು ಹೊಸ ಹೊಸ ಕಾಲುಚೀಲಗಳನ್ನು ಕೊಳ್ಳ ಹೋಗುವ ಪತಿಯ ಶ್ರಮವನ್ನೂ ಹಣವನ್ನೂ ಉಳಿಸಬಹುದಾಗಿದೆ."

ಸುಭದ್ರೆಯು ಇದುವರೆಗೆ ಸುಮ್ಮನಿದ್ದಳು. ಇನ್ನು ತಡೆಯ ದಾದಳು. ಇವಳು ಹೊಟ್ಟೆಯೊಳಗಿನ ಕೋಪವನ್ನು ಹೊಟ್ಟೆಯಲ್ಲಿಯೇ ಮುಚ್ಚಿಟ್ಟುಕೊಂಡು ಮೋರೆಯ ಮೇಲೆ ನಗೆಯ ಲಕ್ಷಣವನ್ನು ತಂದು ಕೊಂಡು ಮಾತಾಡಹತ್ತಿದಳು: "ಭವಿಷ್ಯತ್ಕಾಲದ ಸುಶೀಲೆಯ ಸಂಸಾರದಲ್ಲಿ ಇವಳಿಗೆ ಪತಿಯ ಕಾಲುಚೀಲಗಳನ್ನು ದುರಸ್ತ ಮಾಡುವ ಸುಸಂಧಿಯೇ ದೊರೆಯಲಿಕ್ಕಿಲ್ಲ. ಒಂದು ವೇಳೆ ದೊರೆತು ಇವಳು ಕಾಲುಚೀಲಗಳನ್ನು ದುರಸ್ತ ಮಾಡಿಟ್ಟರೂ, ಪತಿರಾಯನು ಆ ಕಾಲು ಚೀಲಗಳನ್ನು ಹಾಕಿಕೊಳ್ಳಲಿಕ್ಕೆ ಒಪ್ಪಿಕೊಳ್ಳಲಿಕ್ಕಿಲ್ಲ. ಹೀಗಾದರೆ, ಸುಶೀಲೆಯು ಈ ವಿದ್ಯೆಯನ್ನು ಕಲಿತಿಟ್ಟುಕೊಂಡು ಮಾಡುವದೇನು? ಮುಂದಾಗುವುದನ್ನು ಕಂಡುಹಿಡಿಯುವದು ಹೇಗೆ? ಅನಿಶ್ಚಿತವಾದ ಭವಿಷ್ಯತ್ಕಾಲದ ಬೆನ್ನು ಹತ್ತಿ ಈಗಿನಿಂದಲೂ ಶ್ರಮಪಡುವದು ಸಮಂಜಸವೇ?"

"ಕಣ್ಣು, ಕಿವಿ ಮುಂತಾದ ಅವಯವಗಳು ಜಾಗ್ರತವಾಗಿದ್ದರೆ, ಮುಂದಾಗುವದನ್ನು ಕಂಡುಹಿಡಿಯುವದು ಅಸಾಧ್ಯವಲ್ಲ. ಕುಶಲನಾದ ನಾವಿಕನು ಮೇಲಿನ ನೀರನ್ನು ನೋಡಿ ಮಹಾಸಾಗರದ ನೆಲೆಯನ್ನು ತರ್ಕಿಸುವನು; ಊಹೆಗೆ ಅನುರೂಪವಾದ ಹಡಗವನ್ನು ನಡೆಸಿಕೊಂಡು ಹೋಗಿ ಸುರಕ್ಷಿತರೀತಿಯಿಂದ ದಂಡೆಯನ್ನು ಮುಟ್ಟುವನು. ನಿನ್ನ ಅತ್ತಿಗೆಯು ಈ ಸಂಸಾರ ನೌಕೆಯಲ್ಲಿ ಕಾಲಿಡುತ್ತಲೆ ತಳದ ಛಿದ್ರವನ್ನು ಕಂಡು ಹಿಡಿದು, ಸಾವಧಾನತೆಯಿಂದ ವರ್ತಿಸಿ, ಆ ತೂತನ್ನು ಮುಚ್ಚುವುದರಲ್ಲಿದ್ದಾಳೆ. ಇದಕ್ಕಾಗಿ ನೀನು ನಿನ್ನ ಈ ಅತ್ತಿಗೆಗೆ ಧನ್ಯವಾದಗಳನ್ನೇ ಅರ್ಪಿಸಲಿಕ್ಕೆಬೇಕು. ಇದಕ್ಕಾಗಿ ರಂಗನು ಕೋಟಿ ಧನ್ಯವಾದಗಳನ್ನರ್ಪಿಸಿದರೂ ಸಾಲದು." ಭೀಮರಾಯನಂದನು.

ಭಾಮಿನಿಯು ಅತಿಶಯ ನಾಚಿಕೊಂಡವಳಾಗಿ ವಿನಯದಿಂದ ಹೇಳಹತ್ತಿದಳು:-"ಪತಿರಾಯನ ಸ್ಥಿತಿಗತಿಗಳನ್ನರಿತು ತಕ್ಕ ಏರ್ಪಾಟು ಗಳನ್ನು ಮಾಡುವುದು ಗೃಹಿಣಿಯ ಕರ್ತವ್ಯವು. ನಾನು ನನ್ನ ಈ ಕರ್ತವ್ಯವನ್ನು ಪಾಲಿಸುವುದರಲ್ಲಿದ್ದೇನೆ. ಇದರಲ್ಲಿ ಧನ್ಯವಾದಕ್ಕೆ ಎಡೆ ಯಿಲ್ಲ."

"ಧನ್ಯವಾದಕ್ಕೆ ಆಸ್ಪದವಿರದಿದ್ದರಿಲ್ಲ. ಕೈ ಹಿಡಿದ ಹೆಂಡತಿಗೆ ಅಪಮಾನ ಮಾಡಬೇಕೆಂದಿರುವ ತಮ್ಮ ಉದ್ದೇಶದ ಸಿದ್ಧಿಗಾದರೂ ಆಸ್ಪದವಿದೆಯಷ್ಟೆ? ಮತ್ತೊಂದು ಮಾತೇನಂದರೆ, ಕೆಲವರಿಗೆ ದಾಸ್ಯ ವೃತ್ತಿಯವರನ್ನು ಕಂಡರೆ ಪರಮಾನಂದವಾಗುವುದು. ಅವರು ಆ ದಾಸ್ಯ ವೃತ್ತಿಯ ಜನರನ್ನು ಶತಮುಖರಾಗಿ ಹೊಗಳಲಿಕ್ಕೆ ಹಿಂದೆಗೆ ಯರು!" ಸುಭದ್ರೆಯು ಮಾತಾಡಿದಳು.

ಭಾಮಿನಿಯು ಮೋರೆಯೆತ್ತಿ ಮಾತಾಡಹತ್ತಿದಳು:—"ತಂಗಿ, ನೀನು ತಪ್ಪುತ್ತಿರುವೆ! ಪತಿಯ ಮನೋವೃತ್ತಿಯನ್ನರಿತು ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ದಾಸ್ಯವೃತ್ತಿಯೆನ್ನಲಿಕ್ಕಾದೀತೇ?"

"ಅನ್ನಲಿಕ್ಕಾಗದು. ಜಗತ್ತಿನೊಳಗಿನ ಸುಧಾರಿಸಿದ ಯಾವ ಮನು ಷ್ಯನೂ ಗೃಹಿಣಿಯ ಈ ಕರ್ತವ್ಯಪಾಲನೆಗೆ ಹೀನವೃತ್ತಿಯೆಂದು ಹೆಸ ರಿಡನು. ಒಂದು ವೇಳೆ ನಿನ್ನ ನಾದಿನಿಯ ದೃಷ್ಟಿಯಿಂದ ಇದು ಹೀನ ಕಾರ್ಯವೇ ಆಗಿದ್ದರೆ, ಪತಿಯ ಸಮ್ಮುಖದಲ್ಲಿ ಅವನ ಸಾಧ್ವಿಯಾದ ಸತಿಯನ್ನು ಸದಾ ಹೀಯಾಳಿಸುತ್ತಿರುವದು ಹೃದಯದ ಎಂತಹ ಪ್ರವೃತ್ತಿಯೆಂಬುದನ್ನು ವಿಚಾರಿಸಿ ತಿಳಿದುಕೊಳ್ಳು" ಭೀಮರಾಯನು ನುಡಿದನು.

ಸುಭದ್ರೆಯ ಮುಖದಿಂದ ಮಾತುಗಳು ಹೊರಡದಾದವು. ಅವಳು ಹುಚ್ಚಿಯಂತೆ ಒಮ್ಮೆ ಪತಿಯ ಮುಖವನ್ನು ನೋಡಿದಳು; ಮತ್ತೊಮ್ಮೆ ರಂಗರಾಯನ ಮುಖದ ಕಡೆಗೆ ನೋಡಹತ್ತಿದಳು. ತನ್ನ ಪತಿಯು ಇಷ್ಟು ಜನರ ಸಮಕ್ಷಮ ಹೀಗೆ ವಾಗ್ಬಾಣಗಳ ಮಳೆಗರೆಯ ಬಹುದೆಂಬದನ್ನು ಅವಳು ಕನಸು-ಮನಸುಗಳಲ್ಲಿ ಸಹ ಭಾವಿಸಿದವ.

ಳಲ್ಲ. ಮೊದಲು ಇವಳಿಗೆ ಕೊಂಚ ವಿಸ್ಮಯವಾಯಿತು. ಬಳಿಕ ಆ ಸ್ಥಳವನ್ನು ಸಂತಾಪಾತಿರೇಕವು ವ್ಯಾಪಿಸಿತು. ಶೋಕವು ಅನಾವರ ವಾಯಿತು. ಅವಳು ಕಣ್ಣೀರು ಸುರಿಸುತ್ತ:-"ಅಣ್ಣಾ, ಇನ್ನು ನಾನು ನಿನ್ನೀ ಮನೆಗೆ ಬರಲಾರೆನು! ನಾನಿನ್ನು ನನ್ನೀ ಜನ್ಮಗೃಹಕ್ಕೆ ಕೊನೆಯ ನಮಸ್ಕಾರ ಮಾಡಿ ಹೊರಡುವೆನು!" ಎಂದು ನುಡಿದಳು.

ರಂಗರಾಯನು ವ್ಯಾಕುಲಗೊಂಡನು. ಭಾಮಿನಿಯು ಕೈಯೊಳಗಿನ ಕೆಲಸವನ್ನು ಚಲ್ಲಿಕೊಟ್ಟು, ಅವಸರದಿಂದ ಎದ್ದು ಬಂದು ಸುಭದ್ರೆಯ ಕೈ ಹಿಡಿದು: "ತಂಗಿ, ನಾವೀರ್ವರೂ ನಿನ್ನ ಮನಸ್ಸಿಗೆ ಹತ್ತುವಂಥ ಯಾವ ಕೆಟ್ಟ ಮಾತುಗಳನ್ನೂ ಆಡಿದವರಲ್ಲ," ಎಂದು ನುಡಿದಳು.

ಭೀಮರಾಯನು ಈ ಅಪ್ರಿಯ ಪ್ರಸಂಗವನ್ನು ನೋಡಿ, ಆ ಸ್ಥಳದಿಂದ ಕಾಲ್ದೆಗೆದನು. ಸುಭದ್ರೆಯು ಕೈಗಳನ್ನು ಕೊಸರಿಕೊಂಡು ಕಣ್ಣುಗಳನ್ನು ಒರಸಿಕೊಳ್ಳುತ್ತಾ:-"ನಾನು ಕೇವಲ ನಿಮ್ಮ ಅಹಿತಾಚರಣೆಯನ್ನು ಆಚರಿಸುತ್ತಿರುವೆನೆಂದ ಬಳಿಕ ಈ ಮನೆಯಲ್ಲಿ ಕಾಲಿಡಲು ಅಯೋಗ್ಯಳು! ನಾನಿಲ್ಲಿಗೆ ಬರುವುದರಿಂದ ನಿಮಗೆ ಹಿತವಿಲ್ಲವಿಷ್ಟೇ ಅಲ್ಲ; ಭಯಂಕರ ಅಹಿತವಿದೆ!"

"ನಾವು ಹೀಗೆ ಮಾತಾಡುವದೊತ್ತಟ್ಟಗಿರಲಿ, ಸ್ವಪ್ನದಲ್ಲೂ ಭಾವಿಸಿದವರಲ್ಲ!" ಭಾಮಿನಿಯು ಹೇಳಿದಳು.

ಸುಭದ್ರೆಯು ಈ ಮಾತನ್ನು ಲಕ್ಷಿಸದೆ, ಅಳುತ್ತಲೆ ಮುಂದೆ ಮಾತಾಡಹತ್ತಿದಳು: -"ಇಂದು ಇವರು ನನ್ನೆದುರಿನಲ್ಲಿ ಸ್ಪಷ್ಟವಾಗಿ ನುಡಿದು ಹೋದರು! ನಾಳೆ ಅಣ್ಣನೂ ಹೀಗೆಯೇ ಅನ್ನುವನು! ಅಣ್ಣನ ಈ ನೂತನ ಸಂಸಾರದಲ್ಲಿ ಕಾಲಿಟ್ಟು ಮಾತಾಡಬಯಸುವದೆಂದರೆ, ಸ್ವಂತದ ಅಪಮಾನ ಮಾಡಿಕೊಳ್ಳುವದಕ್ಕಾಗಿ! ಸುಶೀಲೆ, ನೀನು ಮನೆಗೆ ಬರುವೆಯಷ್ಟೆ? ಏಳು" ಒಂದೆರಡು ಹೆಜ್ಜೆ ಮುಂದೆ ಹೋಗಿ, ಮತ್ತೆ ಮಾತಾಡತೊಡಗಿದಳು:—"ರಮೆಯು ಸತ್ತುಹೋಗಿದ್ದ ಬಳಿಕ ನಾನು ಈ ಮನೆಗೆ ಬರಬಾರದಿತ್ತು! ಬಂದದ್ದು ನನ್ನ ಮಹಾಪರಾಧವು! ಇನ್ನು ಬರುವದಿಲ್ಲ! ನಾನಿನ್ನು ತವರು ಮನೆಯ ಯಾವತ್ತೂ ಸಲ್ಲು

ಹರಕೊಂಡಂತಾಯಿತು!" ಸುಭದ್ರೆಯು ಭರದಿಂದ ಮುಂದೆ ನಡೆದಳು. ರಂಗರಾಯನು ಅವಳನ್ನನುಸರಿಸಿ ಹೊರಟು:-"ತಂಗೀ, ಹೋಗಬೇಡ. ಇಲ್ಲಿ ಕುಳ್ಳಿರುವದು ನಿನಗೆ ಬೇಡವಾದರೆ, ನನ್ನ ಓದುವ ಕೋಣೆಗೆ ನಡೆ. ಅಲ್ಲಿ ಕುಳಿತುಕೊಳ್ಳೋಣ" ಎಂದು ಸಂಕೋಚದಿಂದ ನುಡಿದನು.

ಸುಭದ್ರೆಯು ತಲೆಯಲ್ಲಾಡಿಸಿ ಹೇಳಹತ್ತಿದಳು:—"ಒಲ್ಲೆ; ಎಲ್ಲಿಯೂ ಬರಲಾರೆನು! ಅಣ್ಣಾ, ಈ ಪ್ರಸಂಗದಲ್ಲಿ ನಾನು ನಿನಗೆ ಒಂದೇ ಒಂದು ಮಾತನ್ನು ಹೇಳಿಡುವೆನು. ನೀನದನ್ನು ನಡೆಸು. ನೀನು ನಿನ್ನ ಈ ಮಡದಿಯ ಮೋಹ ಜಾಲದಲ್ಲಿ ಸಿಕ್ಕು ರಮೆಯನ್ನು ಸಂಪೂರ್ಣವಾಗಿ ಮರೆದುಹೋಗುವ ಸಂಭವವಿದೆ; ಆದರೆ ಹೀಗಾಗಗೊಡಬೇಡ! ತನ್ನ ಏಕಮಾತ್ರ ಪುತ್ರನಾದ ರಾಮನು ವಿಲಾಯತಿಗೆ ಹೋಗಿ ವಿದ್ಯೆಗಲಿತು, ಪ್ರಸಿದ್ಧಿಯನ್ನು ಪಡೆಯಬೇಕೆಂಬುದು ಅವಳ ಉತ್ಕಟೇಚ್ಛೆಯಾಗಿತ್ತು. ನೀನು ಅವಳ ಇಚ್ಛೆಯನ್ನು ಸಫಲಗೊಳಿಸು. ನೀನು ರಾಮನ ಕಡೆಗೆ ಹೆಚ್ಚು ಲಕ್ಷ್ಯವಿರಿಸು. ಇಂದು ಈಗಳಿನ ಅವನ ಸ್ಥಿತಿಯನ್ನು ನಾವೆಲ್ಲರೂ ಕಣ್ಮುಟ್ಟ ಕಂಡಿದ್ದೇವೆ. ಅವನ ಶಿಕ್ಷಣವು ಇನ್ನು ಮುಂದೆಯೂ ಹೀಗೆಯೇ ಸಾಗಿದರೆ, ನಮ್ಮ ಸುಧಾರಕರ ಸಮಾಜದಲ್ಲಿ ನಾವೀರ್ವರೂ ಮೋರೆ ತೋರಿಸದವರಾಗಿ ಹೋಗುವೆವು!"

ಸುಭದ್ರೆಯ ಅಶ್ರುಗದ್ಗದ ಕಂಠಸ್ವರದಿಂದ ವಿಚಲಿತನಾದ ರಂಗರಾಯನು ಆರ್ಜವವೃತ್ತಿಯಿಂದ ಹೇಳಹತ್ತಿದನು:—"ತಂಗೀ, ನನ್ನ ಲಾಯಬ್ರರಿ ಮನೆಗೆ ನಡೆ. ನೀನು ಹೀಗೆಯೇ ಹೊರಟುಹೋದರೆ, ನನಗೆ ಅತಿಶಯ ದುಃಖವಾಗುವುದು!"

ಸುಭದ್ರೆಯ ಕಣ್ಣುಗಳಿಂದ ಮತ್ತೆ ಅಶ್ರುಗಳುದುರಹತ್ತಿದವು. ಅವಳು ಸೆರಗಿನಿಂದ ಕಣ್ಣುಗಳನ್ನು ಒರಸಿಕೊಂಡು ಹೇಳಹತ್ತಿದಳು:—"ಅಣ್ಣಾ, ಇನ್ನು ನಾನೆಲ್ಲಿಯೂ ಬರಲಿಕ್ಕೆ ಒಲ್ಲೆನು! ನನ್ನ ತಂದೆಯ ಈ ಮನೆಗೆ ರಾಮನು ಏಕಮಾತ್ರ ವಂಶಧರನು-ಕುಲದೀಪಕನು! ನೀನವನ ಹಿತವನ್ನು ಚೆನ್ನಾಗಿ ಚಿಂತಿಸು; ಮೈಮರೆದು ಹೋಗಿ, ಅವನ ಅಹಿತವನ್ನು ಆಚರಿಸದಿರು!"

ಸುಭದ್ರೆಯು ಭರದಿಂದ ನಡೆದು ಹೋಗಿ, ಮೋಟರಿನಲ್ಲಿ ಕುಳಿತಳು. ಸುಶೀಲೆಯು ಸುಮ್ಮನೆ ಹೊರಟು ಬಂದು ಅತ್ತಿಗೆಯ ಪಕ್ಕದಲ್ಲಿ ಕುಳಿತಳು. ರಂಗರಾಯನು ಬಂದು ತಂಗಿಯ ಹತ್ತರ ನಿಂತುಕೊಂಡು:—"ತಂಗೀ, ನಿನ್ನಿಷ್ಟವಿದ್ದರೆ ರಾಮನನ್ನು ಕರೆದುಕೊಂಡು ಹೋಗು. ನಿನಗೆ ಮಕ್ಕಳಿಲ್ಲ. ಅವನನ್ನೇ ಮಗನೆಂದು ಭಾವಿಸಿ ರಕ್ಷಿಸು. ನಿನ್ನ ಅಪೇಕ್ಷೆಯ ಮೇರೆಗೆ ಅವನ ಶಿಕ್ಷಣವನ್ನೂ ಸಾಗಿಸು" ಎಂದನು.

ಸುಭದ್ರೆಯೂ ಸುಶೀಲೆಯೂ ವಿಸ್ಮಯದಿಂದ ರಂಗರಾಯನ ಕಡೆಗೆ ನೋಡಹತ್ತಿದರು. ತುಸ ಹೊತ್ತಿನ ಮೇಲೆ ಸುಭದ್ರೆಯು:— "ಅಣ್ಣಾ, ಈ ಡಂಭಾಚಾರದ ಮಾತನಾಡುತ್ತಿರುವುದೇಕೆ? ನೀನು ರಾಮನನ್ನು ನನಗೊಪ್ಪಿಸಲಾರೆ—ಒಂದು ವೇಳೆ ನೀನು ಮನಸ್ಸು ಮಾಡಿದರೂ, ನಿನ್ನ ಪ್ರಿಯತಮೆಯು ನಿನ್ನಾಟವನ್ನು ನಡೆಯಗೊಡಳು!" ಎಂದು ನುಡಿದಳು.

"ತಂಗಿ, ಏನಾದರೊಂದು ಭಾವಿಸಿ ಹೀಗೆ ಮಾತಾಡಬೇಡ. ರಾಮನನ್ನು ನಿನಗೆ ಒಪ್ಪಿಸುವೆನೆಂದು ನಾನು ನಿನಗೆ ವಚನ ಕೊಡಬಲ್ಲೆನು!" ರಂಗರಾಯನು ಉತ್ತೇಜಿತನಾಗಿ ನುಡಿದನು.

"ಅಣ್ಣಾ, ನಿನ್ನ ವಚನದ ಬೆಲೆಯು ಮುಂದೆ ಗೊತ್ತಾಗುವದು. ಈ ವಿಷಯದಲ್ಲಿ ಈಗ ನಾನು ಹೆಚ್ಚಾಗಿ ಮಾತಾಡ ಬಯಸುವದಿಲ್ಲ. ನಿನಗೆ ಸಾಧ್ಯವಿದ್ದರೆ, ರಾಮನನ್ನು ನನ್ನ ಮನೆಗೆ ಕಳುಹಿಸಿಕೊಡು. ನಾನವನ ಶಿಕ್ಷಣವನ್ನು ಸರಿಯಾಗಿ ಸಾಗಿಸುವೆನು. ನೀನು ಅವನ ವಿಲಾಯತಿಯ ವೆಚ್ಚವನ್ನು ಕೊಡಲಿಕ್ಕೆ ಅಸಮರ್ಥನಾಗಿದ್ದರೆ, ನಾನೇ ಕೊಡುವೆನು. ಇದು ನನ್ನ ವಚನವೆಂದು ತಿಳಿ. ನಾನು ಈ ಮಾತಿಗೆ ಎಂದೂ ತಪ್ಪುವವಳಲ್ಲ." ಎಂದು ನುಡಿದು, ಸುಭದ್ರೆಯು ಸುಶೀಲೆಯ ದೃಷ್ಟಿಯನ್ನನುಸರಿಸಿ ಮೇಲೆ ನೋಡಿದಳು. ಭಾಮಿನಿಯು ಚಂದ್ರಶಾಲೆಯ ಗಜವನ್ನು ಹಿಡಿದುಕೊಂಡು ತನ್ನ ಕಡೆಗೆ ನೋಡುತ್ತಿರುವುದನ್ನು ಕಂಡಳು. ಕ್ಷಣಕಾಲದಲ್ಲಿ ಮೋಟರ ಬಂಡಿಯು ಮುಂದೆ ಸಾಗಿ ಅದೃಶ್ಯವಾಗಿ ಹೋಯಿತು. ರಂಗರಾಯನು ತನ್ನ ಓದುವ

ಕೋಣೆಯಲ್ಲಿ ಹೋಗಿ ಕುಳಿತುಕೊಂಡನು. ಅಂತಸ್ತಿನ ಮೇಲೆ ಹೋಗಿ ಹೆಂಡತಿಯನ್ನು ಮಾತಾಡಿಸುವ ಇಚ್ಛೆಯು ಅವನಿಗಾಗಲಿಲ್ಲ; ಧೈರ್ಯವೂ ಇರಲಿಲ್ಲ; ಏಕಂದರೆ, ಸುಭದ್ರೆಯೊಡನೆ ತಾನಾಡಿದ ಎಲ್ಲ ಮಾತುಗಳನ್ನು ಭಾಮಿನಿಯು ಕೇಳಿಕೊಂಡಿರುವಳೆಂಬುದು ಅವನಿಗೆ ಗೊತ್ತಾಗಿತ್ತು.

ಅಣ್ಣ-ತಂಗಿಯರು ಕಲಹಿಸುವದೇ ತರವಲ್ಲ.

ರಾತ್ರಿಯಲ್ಲಿ ಭಾಮಿನಿಯು ಬಡಿಸಹತ್ತಿ, ಪತಿಯನ್ನು ಊಟಕ್ಕೆ ಕರೆಕಳುಹಿಸಿದಳು. ತುಸ ಹೊತ್ತಿನಲ್ಲಿ ರಂಗರಾಯನು ಭೋಜನ ಶಾಲೆಗೆ ಬಂದು ನೋಡಿದನು. ಎಲ್ಲ ವ್ಯವಸ್ಥೆಯೂ ದಿನದಂತೆ ಇತ್ತು. ರಂಗರಾಯನು ಮಣೆಯ ಮೇಲೆ ಕುಳಿತನು. ಇವನ ಮುಖವು ದಿನದಂತೆ ನಗೆಯ ಲಕ್ಷಣವನ್ನು ಪ್ರಕಟಿಸುತ್ತಿರಲಿಲ್ಲ—ಬಹು ಗಂಭೀರವಾಗಿತ್ತು. ಭಾಮಿನಿಯು ಕೊಂಚ ದೂರದಲ್ಲಿ ಕುಳಿತಿದ್ದಳು. ರಾಮನು ಮಾತ್ರ ಇಂದು ಬಳಿಯಲ್ಲಿರಲಿಲ್ಲ. ಕೆಣಕಿ ಮಾತಾಡಿಸುವುದು ಭಾಮಿನಿಯ ಸ್ವಭಾವವಾಗಿರಲಿಲ್ಲ. ಕಾರಣ ಇವಳು ಮಧ್ಯಾಹ್ನದ ಸಂಗತಿಯ ಬಗ್ಗೆ ಯಾವ ಮಾತನ್ನೂ ಎತ್ತಲಿಲ್ಲ; ತನ್ನ ಅಪರೋಕ್ಷದಲ್ಲಿ ನಡೆದಿದ್ದ ಸಂಗತಿಗಳನ್ನು ತಿಳಕೊಳ್ಳಲಿಕ್ಕೆ ಕುತೂಹಲತೆಯನ್ನೂ ತೋರಿಸಲಿಲ್ಲ. ರಂಗರಾಯನು ಈ ಕೆಲ ದಿನಗಳ ವ್ಯವಹಾರದಿಂದ ಪತ್ನಿಯ ಈ ಸ್ವಭಾವವನ್ನು ಚನ್ನಾಗಿ ಅರಿತಿದ್ದನಾದ್ದರಿಂದ, ಭಾಮಿನಿಯ ಮೌನವನ್ನು ನೋಡಿ ಆಶ್ಚರ್ಯವೆನಿಸಲಿಲ್ಲ; ಆದರೆ ಕೋಪ ಮಾತ್ರ ಉಂಟಾಯಿತು. ಉಟಮಾಡಹತ್ತಿದ್ದ ರಂಗರಾಯನು ಆಗಾಗ್ಗೆ ಮೋರೆಯನ್ನೆತ್ತಿ ಹೆಂಡತಿಯ ಮುಖದ ಕಡೆಗೆ ನೋಡಹತ್ತಿದನು; ಆದರೆ ಭಾಮಿನಿಯು ಇಂದು ದಿನದಂತೆ ಕುಳಿತಿರಲಿಲ್ಲ—ದೀಪಕ್ಕೆ ಮರೆಯಾಗಿ ಮೋರೆದಿರುವಿಕೊಂಡು ಕುಳಿತಿದ್ದಳು. ಆದುದರಿಂದ ರಂಗರಾಯನಿಗೆ ಪತ್ನಿಯ ಮುಖಭಾವವು ಎಂದಿನಂತೆ ಇಂದು ಸ್ಪಷ್ಟವಾಗಿ ಕಾಣಿಸಲಿಲ್ಲ.

ರಂಗರಾಯನಿಗೆ ದಿನದಂತೆ ಊಟ ಹೋಗಲಿಲ್ಲ; ಆದರೆ ಭಾಮಿನಿಯು ಈ ವಿಷಯವಾಗಿಯೂ ಪತಿಗೆ ಪ್ರಶ್ನಮಾಡಲಿಲ್ಲ;-ಇನ್ನಿಷ್ಟು ಊಟ ಮಾಡಿರೆಂದು ಒತ್ತಾಯ ಪಡಿಸಲಿಲ್ಲ. ಇದರಿಂದ ರಂಗರಾಯನ ಕೋಪವು ಹೆಚ್ಚಿತು. ಇವನು ಸತಿಯ ಕಾರಣವನ್ನು ಕೇಳದಿದ್ದರೂ, ಒತ್ತಾಯದಿಂದ ಕೇಳಿಸುವ ಸಂಕಲ್ಪ ಮಾಡಿಕೊಂಡು ಮಾತಾಡಹತ್ತಿದನು: -"ಇನ್ನು ಈ ಮಾದರಿಯ ಊಟವು ನನಗೆ ರುಚಿಸದು. ದಿನಾಲು ಒಂದೇ ಬಗೆಯ ವ್ಯವಸ್ಥೆ; ಅವೇ-ಅವೇ ಪದಾರ್ಥಗಳು. ಒಂದು ದಿನವಾದರೂ ಹೆಚ್ಚುಕಡಿಮೆಯಿಲ್ಲ. ನನ್ನ ದಿನದ ಊಟವು ಬೇರೆ ಬಗೆಯದಾಗಿತ್ತು. ಬೇಕಾದರೆ, ನೀನಿದನ್ನು ಅಡುಗೆಯ ಆಚಾರಿಯನ್ನು ವಿಚಾರಿಸಿ ತಿಳಿದುಕೊಳ್ಳು. ಈಗಳಿನ ಈ ಊಟದ ವ್ಯವಸ್ಥೆಯಲ್ಲಿ ಪರಿವರ್ತನೆಯಾಗದಿದ್ದರೆ, ನಾನಿನ್ನು ಊಟ ಮಾಡಲಾರದವನಾಗಿ ಹೋಗುವೆನು!"

ಇಂದು ಗಂಡನ ಹೊಟ್ಟೆ ಹಸಿಯದಿದ್ದುದರ ನಿಜವಾದ ಕಾರಣವು ಭಾಮಿನಿಗೆ ಗೊತ್ತಿತ್ತು—ಪತಿಯು ತಾನು ವಿಚಾರಿಸದಿದ್ದರೂ ತಾನೇ ತಾನಾಗಿ ಸೂಚಿಸಿದ ಕಾರಣವು ಸುಳ್ಳೆಂದು ತಿಳಿದಿದ್ದಳು. ಕಾರಣ ಇವಳು ಈ ವಿಷಯದಲ್ಲಿ ಪತಿಯೊಡನೆ ಮಾತು ಬಳಿಸಲು ಇಚ್ಛಿಸಲಿಲ್ಲ; ಯಾಕಂದರೆ, ಅಸತ್ಯ ಸಂಗತಿಯು ನಿಜವಾಗಿಯೂ ಅಸತ್ಯವಾದುದು, ಎಂಬದನ್ನು ಸಿದ್ಧಗೊಳಿಸಲು ವಾದ-ವಿವಾದದಲ್ಲಿ ತೊಡಗುವ ಪ್ರವೃತ್ತಿಯನ್ನು ಇವಳು ಎಂದೂ ಹೊಂದಿದವಳಲ್ಲ.

ಭಾಮಿನಿಯು ಹೀಗೆ ಮೌನದಿಂದಿರುವದು ರಂಗರಾಯನಿಗೆ ಸೇರಲಿಲ್ಲ. ಅವನ ಕೋಪವು ಮತ್ತಿಷ್ಟು ಹೆಚ್ಚಿತು. ಮಾತಿನ ಬಂಟನು ವಾಗ್ಯುದ್ಧಕ್ಕಾಗಿ ತೊಡೆ ಚಪ್ಪರಿಸಿಕೊಂಡು ನಿಂತಿರುವಾಗ ಪ್ರತಿಪಕ್ಷಿಯು ಹೆದರಿ ಹಿಂಜರಿದರೂ, ಆ ಮಾತಿನ ಬಂಟನಿಗೆ ಅಸಮಾಧಾನವಲ್ಲದೆ ಸಮಾಧಾನವಿಲ್ಲ. ರಂಗರಾಯನು ಸುಮ್ಮನೆ ಕುಳಿತಿದ್ದ ಆ ಸಾಧ್ವಿಗೆ ಮತ್ತೆ ಆಘಾತ ಮಾಡುವ ಉದ್ದೇಶದಿಂದ ಮಾತಾಡಹತ್ತಿದನು:—"ಮೊದಲು ನಾನು ನಿನ್ನ ವಿಷಯದಲ್ಲಿ ಅನ್ಯಾಯವನ್ನಾಚರಿಸಿದ್ದು

ನಿಜವು. ಎರಡನೆಯ ಲಗ್ನ ಮಾಡಿಕೊಂಡು ನಿನ್ನನ್ನು ಮರೆದಿದ್ದುದು ನನ್ನದು ಮಹಾಪರಾಧವು; ಆದರೆ ಆ ನನ್ನ ಅಪರಾಧಕ್ಕಾಗಿ ಈಗ ನೀನು ಸೇಡು ತೀರಿಸಿಕೊಳ್ಳಬಯಸುವುದು ತರವಲ್ಲ! ಈಗ ನೀನು 'ಈ ಸಂಸಾರವು ನನ್ನ ತಂತ್ರದಂತೆಯೆ ನಡೆಯಬೇಕು; ಗೃಹವ್ಯವಸ್ಥೆಯಲ್ಲಿ ಪತಿಯಾಗಲಿ ಅನ್ಯರಾಗಲಿ ಕೈಹಾಕಕೂಡದು.' ಎಂದೆನ್ನುವುದು ಸಮಂಜಸವಾದೀತೇನು? ಪತಿಯು ಸೂತ್ರದ ಗೊಂಬೆಯಾಗಿರಬೇಕೆಂದು ನೀನು ಅಪೇಕ್ಷಿಸುವದು ಒಳಿತಾದೀತೇ?"

ರಂಗರಾಯನು ಪುನರ್ದರ್ಶನದ ಪ್ರಥಮ ದಿನದಲ್ಲೂ ಭಾಮಿನಿಗೆ ಇಂತಹ ಕಟು ಮಾತಾಡಿದವನಲ್ಲ. ಭಾಮಿನಿಯು ಈ ವಿಚಾರವನ್ನು ಮನವಂದು ವಿಸ್ಮಯಾಪನ್ನಳಾದಳು: ಆದರೆ ಇವಳು ತನ್ನ ಮನೋಭಾವನೆಯನ್ನು ಹೊರಗೆ ತೋರಗೊಡದೆ, "ನಿಮ್ಮ ಮಾತಿನ ಒಲವು ನನಗೆ ತಿಳಿಯದಾಗಿದೆ," ಎಂದು ನುಡಿದು ಸುಮ್ಮನಾದಳು.

ರಂಗರಾಯನು ಭಾಮಿನಿಯ ಈ ಸಂಕ್ಷಿಪ್ತ ಉತ್ತರದಿಂದ ಸಂತುಷ್ಟನಾಗಲಿಲ್ಲ. ಅವನು ಮತ್ತೆ ಮಾತಾಡಹತ್ತಿದನು:—"ನಮ್ಮ ಶಿಕ್ಷಣವೂ, ಸಂಸ್ಕಾರವೂ, ಸಮಾಜವೂ ಒಂದು ವಿಧದ್ದಾಗಿದೆ. ನೀನು ನಮ್ಮ ಶಿಕ್ಷಣದ, ಸಂಸ್ಕಾರದ, ಸಮಾಜದ ವೈಶಿಷ್ಟ್ಯವನ್ನು ಲಕ್ಷಿಸದೆ, ನನ್ನೀ ಮನೆಯನ್ನು ಆಚಾರ್ಯರ ಮನೆಯಲ್ಲಿ ರೂಪಾಂತರಗೊಳಿಸಲು ಯತ್ನಿಸುತ್ತಿರುವೆ. ಹೀಗಾಗುವದು ನಮಗೆ ಪರಮ ಘಾತುಕವು! ನಿನ್ನ ಈ ಕೃತಿಯಿಂದ ನಾವು ನಾಳೆ ನಮ್ಮ ಸಮಾಜದಲ್ಲಿ ಮೋರೆ ತೋರಿಸದವರಾಗಿ ಹೋದೇವು! ಈ ಕಾರಣದಿಂದ ನಾನು ನಾಳೆ ರಾಮನನ್ನು ಅವನ ಅತ್ತೆಯ ಮನೆಗೆ ಕಳುಹಿಕೊಡಬೇಕೆಂದಿರುವೆನು. ಇದಕ್ಕೆ ನೀನೇನೆನ್ನುವೆ?"

"ಅಲ್ಲಿ ಹೋಗುವದರಿಂದಲೇ ಅವನ ಹಿತವಾಗುವಂತಿದ್ದರೆ, ಅವನನ್ನು ಅವಶ್ಯವಾಗಿ ಕಳುಹಿಕೊಡಿರಿ." ಭಾಮಿನಿಯು ನುಡಿದಳು.

ಭಾಮಿನಿಯ ಮಾತಿನಲ್ಲಿ ಕೋಪದ ಛಾಯೆಯಿರಲಿಲ್ಲ; ಸಂದಿಗ್ಧತೆಯಿದ್ದಿಲ್ಲ. ರಂಗರಾಯನು ಭಾಮಿನಿಯ ಮನಃಸ್ಥಿತಿಯನ್ನು ಸರಿಯಾಗಿ

ತಿಳಿಯದವನಾಗಿ ಗೊಂದಲದಲ್ಲಿ ಬಿದ್ದನು. ಪತಿಕ್ಕಾಗಿ ತಾನು ಹೀಗೆ ಮಾತಾಡಲುಪಕ್ರಮಿಸಿರುವೆನೆಂಬದನ್ನು ರಂಗರಾಯನು ಸ್ಪಷ್ಟವಾಗಿ ಅರಿಯನು. ಆದರೂ ದುರ್ಬಲ ಪ್ರಕೃತಿಯ ರಂಗರಾಯನು ಕಾಲ್ಪನಿಕ ಮನಃಪೀಡೆ ಹಾಗು ದುರಭಿಮಾನಗಳಿಂದ ಪರಿಚಾಲಿತನಾಗಿ ಭರದಿಂದ ಮುಂದಡಿಯಿಡಹತ್ತಿದನು:—“ರಾಮನು ತನ್ನ ಅತ್ತೆಯ ಮನೆಯಲ್ಲಿ ರುವದರಿಂದಲೇ ಉನ್ನತಿಯನ್ನು ಹೊಂದುವನೆಂಬುದು ನಮ್ಮೆಲ್ಲರ ವಿಶ್ವಾಸವು. ಅಂತೆಯೇ ನಾನವನನ್ನು ಅಲ್ಲಿಗೆ ಕಳುಹಿಕೊಡಬೇಕೆಂದು ಅನ್ನುತ್ತಿರುವೆನು. ಯಾವ ಆಚಾರ-ವ್ಯವಹಾರ, ರೀತಿ-ನೀತಿಗಳನ್ನು ನಾವು ಇದು ವರೆಗೆ ಮನ್ನಿಸಿಲ್ಲವೋ-ಮುಂದೆಯೂ ಮನ್ನಿಸಲಾರದವರಾಗಿರುವೆವೋ, ಆ ಆಚಾರ-ವ್ಯವಹಾರಗಳಿಗಾಗಿ ಇಂದು ಅಣ್ಣ-ತಂಗಿಯರು ಕಲಹಿಸುವದು ತರವಲ್ಲ. ಇದರಿಂದ ನಾನು ನಮ್ಮ ಸಮಾಜದ ಪರಿಹಾಸಕ್ಕೆ ಗುರಿಯಾಗಬೇಕಾಗುವದು. ಹೀಗಾಗಗೊಡುವದು ನನ್ನ ಮನಸ್ಸಿಗೆ ಬಾರದು.”

ಭಾಮಿನಿಯು ತನ್ನ ಪಕ್ಷಸಮರ್ಥನೆಗೆ ಮನಸ್ಸು ಮಾಡಲಿಲ್ಲ; ಪ್ರತ್ಯುತ್ತರ ಕೊಡಲಿಲ್ಲ. ಅವಳು ನಿಟ್ಟುಸಿರಬಿಟ್ಟು ಸುಮ್ಮನಿದ್ದಳು. ಶಾಂತವಾದ ಆ ಗೃಹದಲ್ಲಿ ಭಾಮಿನಿಯು ಉಸುರ್ಗರೆದ ಸಪ್ಪಳವು ರಂಗರಾಯನಿಗೆ ಕೇಳಿಸದಿರಲಿಲ್ಲ. ಭಾಮಿನಿಯು ಎಂದೂ ಕಲಹಪ್ರವೃತ್ತಳಾದವಳಲ್ಲ. ಸುಭದ್ರೆಯು ಅವಳ ಸಮ್ಮುಖದಲ್ಲಿ ಕಠೋರವಚನಗಳ ಮಳೆಗರೆದಿದ್ದರೂ, ಭಾಮಿನಿಯು ಪ್ರತ್ಯುತ್ತರವಾಗಿ ಒಂದು ಮಾತನ್ನು ಸಹ ಉಚ್ಚರಿಸಿದವಳಲ್ಲ. ಇದರಿಂದ ರಂಗರಾಯನು ಭಾಮಿನಿಗೆ ದೋಷದ ಹೊರೆಯನ್ನು ಹೊರಿಸಲಸಮರ್ಥನಾಗಿದ್ದನು.

——

ಪ್ರಾಣನಾಥರೇ ಕ್ಷಮಿಸಿರಿ! ತಿರುಗಿ ಬರಲಾರೆನು.

ರಂಗರಾಯನು ತನ್ನ ಹಾಸುಗೆಯ ಮೇಲೆ ಮಲಗಿದ್ದನು. ಕೊಂಚ ದೂರದಲ್ಲಿರುವ ಬೇರೊಂದು ಶಯ್ಯೆಯಲ್ಲಿ ಭಾಮಿನಿಯು ಮಲಗಿದ್ದಳು.

ಇವಳ ಹತ್ತಿರವೇ ರಾಮನು ಮಲಗಿದ್ದನು. ದೀಪದ ಅಲ್ಪಪ್ರಕಾಶವು ಕೋಣೆಯಲ್ಲಿ ಬಿದ್ದಿತ್ತು. ರಾಮನು ಗಾಢನಿದ್ರೆಯಲ್ಲಿದ್ದನು. ದಂಪತಿಗಳಿಗೆ ಇನ್ನೂ ನಿದ್ದೆ ಹತ್ತಿರಲಿಲ್ಲ.

ಸುಭದ್ರೆಗೆ ಸಂತಾಪವಾಗುವಂತೆ ಮಾತಾಡಿದವನು ಭೀಮರಾಯನು. ಇದರಲ್ಲಿ ಭಾಮಿನಿಯ ಅಂಗವೆಷ್ಟು ಮಾತ್ರವೂ ಇರಲಿಲ್ಲ. ಈ ವಿಷಯದಲ್ಲಿಭಾಮಿನಿಯು ದೋಷಾರ್ಹಳಾಗಿರಲಿಲ್ಲವಿಷ್ಟೇ ಅಲ್ಲ, ದೊಡ್ಡ ಮನಸ್ಸನ್ನೂ ಸಹನಶೀಲತೆಯನ್ನೂ ತೋರಿಸಿ, ಗೌರವಕ್ಕೆ ಪಾತ್ರಳಾಗಿದ್ದಳು. ರಂಗರಾಯನು ಇದಕ್ಕಾಗಿ ಭಾಮಿನಿಯನ್ನು ಗೌರವಿಸಲಿಲ್ಲ ಮಾತ್ರವಲ್ಲ; ಊಟಕ್ಕೆ ಕುಳಿತಾಗ ಆವೇಶದಿಂದ ವಾಗ್ಬಾಣಗಳನ್ನು ಸುರಿಸಿದ್ದನು. ಉತ್ತೇಜನವು ಅಡಗುತ್ತಲೆ, ಈ ವಿಷಯದಲ್ಲಿ ರಂಗರಾಯನಿಗೆ ಅನುತಾಪವಾಗದಿರಲಿಲ್ಲ. ಅವನು ಆ ತಳಮಳದಿಂದ ಪ್ರೇರಿತನಾಗಿ ಈಗ ಮಾತಾಡಹತ್ತಿದನು:-"ನನ್ನ ಹಾಗೂ ಸುಭದ್ರೆಯ ಮನಸ್ತಾಪಕ್ಕೆ ನಿನ್ನ ವ್ಯವಹಾರವು ಕಾರಣವಲ್ಲ; ಭೀಮರಾಯನ ಮಾತುಗಳೇ ಕಾರಣೀಭೂತವಾದುವು. ಅವನ ಆ ವಿಚಾರವನ್ನು ನಿನ್ನ ಮೇಲೆ ಹೊರಿಸಬಯುಸಿದವನು ನಾನಲ್ಲ. ನಾನು ರಾಮನ ಭವಿಷ್ಯತ್ಕಾಲದ ಚಿಂತೆಯಿಂದ ಊಟಕ್ಕೆ ಕುಳಿತಾಗ ಹಾಗೆ ಮಾತಾಡಿದೆನು. ರಾಮನು ಮುಂದೆ ವಿಲಾಯತಿಗೆ ಹೋಗಿ ವಿದ್ಯೆಗಲಿಯಬೇಕಾಗಿದೆ. ಸುಧಾರಕರ ಸಮಾಜದಲ್ಲಿ ವ್ಯವಹರಿಸಬೇಕಾಗಿದೆ. ಇಂಥವನಿಗೆ ಬಾಲ್ಯಕಾಲದಿಂದಲೂ ಅನುರೂಪ ಶಿಕ್ಷಣವು ದೊರೆಯುತ್ತಹೋಗುವದು ಅವಶ್ಯವು. ಈ ಕಾರಣದಿಂದ ಪುರಾಣಮತಾಭಿಮಾನಿಗಳ ಸಹವಾಸವು ಅವನಿಗೆ ಹಿತಕರವಲ್ಲ. ಅವನು ಈಗಿನಿಂದಲೇ ಸುಧಾರಕರ ಸಂರಕ್ಷಣೆಯಲ್ಲಿರಬೇಕು. ಸುಧಾರಕರ ಆಚಾರ-ವಿಚಾರಗಳನ್ನು ಅವಲೋಕಿಸಿ, ಅನುಕರಣ ಮಾಡಬೇಕು. ಈ ಕಾರಣದಿಂದಲೇ ನಾನು ರಾಮನನ್ನು ಅವನ ಅತ್ತೆಯ ಮನೆಗೆ ಕಳುಹಿಕೊಡುವ ಸ್ಥಿರಸಂಕಲ್ಪ ಮಾಡಿಕೊಂಡಿದ್ದೇನೆ. ಇದಕ್ಕೆ ನಿನ್ನ ಆಕ್ಷೇಪಣೆಯೇನಾದರೂ ಇದೆಯೇ? ಹೀಗೆ ಸುಮ್ಮನಿದ್ದರೆ ನಿನ್ನ ಅಭಿಪ್ರಾಯವು ನನಗೆ ಹೇಗೆ ತಿಳಿಯಬೇಕು?"

ಭಾಮಿನಿಯು ಹತ್ತರ ಮಲಗಿ ನಿದ್ರಿಸುತ್ತಿದ್ದ, ರಾಮನ ಹಣೆಯ ಮೇಲೆ ಸ್ನೇಹಭರದಿಂದ ಮೆಲ್ಲನೆ ಕೈಯಾಡಿಸಿ ಮಾತಾಡ ಹತ್ತಿದಳು: "ನೀವು ಸಂಕಲ್ಪಿಸಿಕೊಂಡಿರುವದು ರಾಮನ ಹಿತಕ್ಕಾಗಿಯೇ ಇರಲಿಕ್ಕೆ ಬೇಕು. ಇದಕ್ಕೆ ವಿಪರೀತವಾಗಿ ನಾನೆಂದಾದರೂ ಭಾವಿಸಬಲ್ಲೆನೆ? ನಿಮ್ಮ ಇಷ್ಟವಿರುವಂತೆ ಮಾಡಿರಿ."

ರಂಗರಾಯನು ಹಾಸಿಗೆಯ ಮೇಲೆ ಎದ್ದು ಕುಳಿತು, ಆ ಮಂದ ಪ್ರಕಾಶದಲ್ಲಿ ಹೆಂಡತಿಯ ಮುಖದ ಕಡೆಗೆ ನೋಡಿ ಹೇಳಹತ್ತಿದನು:- "ಮತ್ತೊಂದು ಮಾತೆಂದರೆ, ಅವಳು ಎಲ್ಲ ವೆಚ್ಚವನ್ನು ನಾನು ಕೊಡುವೆನೆಂದು ಹೇಳಿದ್ದಾಳೆ; ಇದೇನು ಸಾಮಾನ್ಯ ಸಂಗತಿಯೆ?"

"ಸಾಮಾನ್ಯವೆ ಇರಲಿ, ಅಸಾಮಾನ್ಯವೆ ಇರಲಿ; ನಾನು ಮಾತ್ರ ಈ ಸಂಗತಿಯನ್ನು ಒಪ್ಪಲಾರೆನು. ರಾಮನು ನಮ್ಮ ಮಗನು. ಇವನ ಶಿಕ್ಷಣದ ವೆಚ್ಚವನ್ನು ನಾವು ಕೊಡಲಿಕ್ಕೆಬೇಕು. ಈ ವೆಚ್ಚವನ್ನು ತಂಗಿಯ ಮೇಲೆ ಹೇರುವದು ನ್ಯಾಯವಲ್ಲ. ನಮ್ಮ ಹಣದಿಂದಲೇ ರಾಮನು ವಿದ್ಯಾವಂತನಾಗಿ ಹೆಸರು ಪಡೆಯಬೇಕೆಂಬುದು ನನ್ನ ಉತ್ಕಟೇಚ್ಛೆಯಾಗಿದೆ." ಭಾಮಿನಿಯು ಶಾಂತಸ್ವರದಿಂದಲೇ ನುಡಿದಳು.

"ವಿಲಾಯತಿಯ ವೆಚ್ಚವು ಅಷ್ಟಿಷ್ಟಲ್ಲ; ಹತ್ತಿಪ್ಪತ್ತು ಸಾವಿರ ರೂಪಾಯಿಗಳಾದರೂ ಬೇಕು. ಈ ಹಣವು ನಮ್ಮ ಯೋಗ್ಯತೆಗೆ ಮೀರಿದ್ದಲ್ಲವೆ?" ರಂಗರಾಯನು ಕೇಳಿದನು.

"ವೆಚ್ಚವು ಎಷ್ಟೇ ಹಿಡಿಯಲಿ, ನಾವು ಅದನ್ನು ಕೊಡಲಿಕ್ಕೇಬೇಕು. ರಾತ್ರಿಯು ಬಹಳವಾಗಿದೆ. ಇನ್ನು ಮಲಗಿಕೊಳ್ಳಿರಿ. ರಾತ್ರಿಯಲ್ಲಿ ಬಹಳ ಹೊತ್ತಿನವರೆಗೆ ಜಾಗರಣೆ ಮಾಡುವದು ಹಿತಕರವಲ್ಲ." ಭಾಮಿನಿಯು ನುಡಿದಳು. ಜನನಿಯು ತೋರಿದ ಬಾವಾನ ಬೆದರಿಕೆಯಿಂದ ಬಾಲಕನು ಮನಸ್ಸಿಲ್ಲದಿದ್ದರೂ ಮಲಗಿಕೊಳ್ಳುವಂತೆ, ರಂಗರಾಯನು ಮತ್ತೆ ಹಾಸುಗೆಯ ಮೇಲೆ ಒರಗಿಕೊಂಡನು.

ಮರುದಿನ ಇಳಿಹೊತ್ತಿನಲ್ಲಿ ಕಾಲೇಜದಿಂದ ಮನೆಗೆ ಬಂದ ರಂಗರಾಯನು ಅಡುಗೆಯ ಪರಿಚಿತ ಗಂಧವನ್ನು ಆಘ್ರಾಣಿಸಿ ವಿಸ್ಮಿ

ತನೂ ಆನಂದಿತನೂ ಆಗಿ, ತನ್ನ ಓದುವ ಕೋಣೆಯನ್ನು ಹೊಕ್ಕನು. ಅಲ್ಪಾವಕಾಶದಲ್ಲಿಯೇ ಸೇವಕನು ಚಹ-ಬಿಸ್ಕೀಟುಗಳನ್ನು ತಂದಿರಿಸಿದನು. ರಂಗರಾಯನು ಭಾಮಿನಿಯ ಮಾರ್ಗಪ್ರತೀಕ್ಷೆ ಮಾಡಿದನು; ಆದರೆ ಅವಳು ಬರಲಿಲ್ಲ. ರಂಗರಾಯನು ಚಹಾಪಾನದ ವಿಧಿಯನ್ನು ತೀರಿಸಿಕೊಂಡನು.

ರಾತ್ರಿಯಲ್ಲಿ ರಂಗರಾಯನು ಪರಿಚಾರಿಕೆಯಿಂದ ಆಮಂತ್ರಣ ಹೊಂದಿ ಭೋಜನ ಶಾಲೆಗೆ ಹೋದನು. ಆತ್ತಿತ್ತ ನೋಡಿದನು. ಕೆಲ ಕಾಲ ಅಡಗಿದ್ದ ಪದಾರ್ಥಗಳು ಮತ್ತೆ ತಲೆಯೆತ್ತಿದ್ದುವು. ಬಹು ದಿನಗಳ ತರುವಾಯ ಕಣ್ಣಿಗೆ ಬಿದ್ದ ಆ ಪದಾರ್ಥಗಳನ್ನು ಕಂಡು ರಂಗರಾಯನ ರಸನೆಯು ಆರ್ದ್ರವಾಯಿತು; ಆದರೆ ಅಲ್ಲಿ ಭಾಮಿನಿಯಿರಲಿಲ್ಲ. ಅಡುಗೆಯ ಆಚಾರಿಯೇ ಬಡಿಸುತ್ತಿದ್ದನು.

ರಂಗರಾಯನು ಭೋಜನವನ್ನಾರಂಭಿಸಿದನು. ನಾಲ್ಕಾರು ತುತ್ತುಗಳನ್ನು ಬಾಯಿಯಲ್ಲಿ ಹಾಕಿಕೊಂಡಿದ್ದನು. ಈ ಸಮಯದಲ್ಲಿ ಭಾಮಿನಿಯು ಬಂದು ದೂರದಲ್ಲಿ ಕುಳಿತುಕೊಂಡಳು. ರಂಗರಾಯನ ಮನಸ್ಸು ಪ್ರಸನ್ನವಾಗಿತ್ತು. ಅವನು ವಿನೋದದಿಂದ "ನೀನು ಇಲ್ಲಿಗೆ ಯಾಕೆ ಬಂದೆ? ಜಾತಿ ಭ್ರಷ್ಟಳಾಗುವ ಭಯವಿಲ್ಲವೆ? ಅಡುಗೆಯ ಪದಾರ್ಥಗಳ ವಾಸನೆ ತಕ್ಕೊಂಡರೆ, ಅರ್ಧ ಭೋಜನ ಮಾಡಿದಂತಾಯಿತೆಂದು ಶಾಸ್ತ್ರದಲ್ಲಿ ಹೇಳಿದೆ" ಎಂದು ನುಡಿದನು.

ಭಾಮಿನಿಯು ತುಸ ನಕ್ಕು ಮಾತಾಡಹತ್ತಿದಳು:-"ನೀವು ಹೀಗೆ ಮಾತಾಡುವದು ಉಚಿತವಲ್ಲ. ಯಾಕಂದರೆ, ಯಾವ ಶಾಸ್ತ್ರವನ್ನು ನೀವು ಒಪ್ಪುವದಿಲ್ಲವೋ, ಯಾವ ಶಾಸ್ತ್ರದಲ್ಲಿ ಹೇಳಿರುವಂತೆ ನೀವು ಆಚರಿಸುವದಿಲ್ಲವೋ ಅಂತಹ ಶಾಸ್ತ್ರದ ಆಧಾರವನ್ನು ತೋರುವುದು ನಿಮಗೆ ಸಮಂಜಸವೆನಿಸುವದೆ?"

ರಂಗರಾಯನೂ ನಕ್ಕು ಮಾತಾಡತೊಡಗಿದನು:—"ಆಗಲಿ. ನಾನು ನನ್ನ ತಪ್ಪನ್ನೊಪ್ಪಿಕೊಳ್ಳುವೆನು. ಇನ್ನು ನಾನು ಶಾಸ್ತ್ರದ ಆಧಾರ ತೋರುವದೂ ಬೇಡ. ನೀನು ಇಲ್ಲಿಂದ ಓಡಿ ಹೋಗುವುದೂ ಬೇಡ.

ಶಾಂತಚಿತ್ತಳಾಗಿ ಕುಳಿತಿದ್ದು ನಾನಾಡುವ ಮಾತುಗಳನ್ನು ಕೇಳು. ನಿನ್ನೆ ನಾನು ನಿನಗೆ ವಾಕ್ಪ್ರಹಾರ ಮಾಡಿದ್ದಕ್ಕಾಗಿ ಇಂದು ನನಗೆ ಈ ಭೋಜನ ಸೌಭಾಗ್ಯವು ದೊರೆತಿರುವುದೆಂದು ನಾನು ಭಾವಿಸಿದ್ದೇನೆ. ಪ್ರಿಯೆ, ನನ್ನ ಈ ಭಾವನೆಯು ನಿಜವಷ್ಟೇ? ನಿನ್ನ ಅಡುಗೆಯು ಕೆಟ್ಟದ್ದೆಂದು ನಾನು ಹೇಳುವದಿಲ್ಲ. ಅದು ಅತ್ಯುತ್ತಮವಾದುದು; ಆದರೆ ನಿನ್ನ ಆ ಸೌಮ್ಯಪದಾರ್ಥಗಳು ರಾಕ್ಷಸೀ ಆಹಾರದಲ್ಲಿ ಅಭ್ಯಸ್ತನಾದ ನನಗೆ ಚಿರಕಾಲಿಕ ಪ್ರಿಯವಾಗವು. ಅಂತೆಯೆ ನಾನು ನಿನ್ನೆ ಹಾಗೆ ಮಾತಾಡ ಬೇಕಾಯಿತು. ಇರಲಿ. ದಿನಾಲು ಹೀಗೆ ಭೋಜನವ್ಯವಸ್ಥೆಯನ್ನಿರಿಸುವದರಿಂದ ವೆಚ್ಚವು ಹೆಚ್ಚಾಗುವಂತಿದೆಯೆ?''

''ಅಪವ್ಯಯವಾಗದಂತೆ ಎಚ್ಚರದಿಂದಿದ್ದರೆ, ಭೋಜನದ ವ್ಯವಸ್ಥೆಯನ್ನು ಹೇಗೆ ಇಟ್ಟುಕೊಂಡರೂ ಖರ್ಚು ಹೆಚ್ಚು ಬೀಳದು. ಮುಂದಿನ ತಿಂಗಳಿಂದ ನಾನಾಗಿಯೇ ಹೀಗೆ ವ್ಯವಸ್ಥೆ ಮಾಡಬೇಕೆಂದಿದ್ದೆನು; ಆದರೆ ನಿಮ್ಮ ಆಗ್ರಹದಿಂದ ಇಂದಿನಿಂದಲೇ ಹೀಗೆ ಮಾಡಬೇಕಾಯಿತು.''

ಭಾಮಿನಿಯು ಕ್ಷಣಕಾಲ ನೀರವವಾಗಿದ್ದು, ಬಳಿಕ ಪತಿಯ ಮುಖದ ಮೇಲೆ ದೃಷ್ಟಿಯಿರಿಸಿ ಮಾತಾಡಹತ್ತಿದಳು:—''ನಿನ್ನೆ ನೀವು ಆಡಿದ ಮಾತುಗಳ ಬಗ್ಗೆ ಬೆಳತನಕ ವಿಚಾರಿಸಿದೆನು. ಮುಂದೆ ಹೇಗೆ ವರ್ತಿಸಬೇಕೆಂಬುದನ್ನು ನಿಶ್ಚಯಿಸಿಕೊಂಡೆನು. ಆ ನಿಶ್ಚಯದಂತೆ ನಾನು ನಡೆಯಬೇಕಾಗಿದೆ. ನೀವು ನನ್ನ ಆ ನಿರ್ಧರದಂತೆ ನನ್ನನ್ನು ನಡೆಯಗೊಡಬೇಕೆಂದು ನಿಮ್ಮನ್ನು ಸೆರಗೊಡ್ಡಿ ಬೇಡಿಕೊಳ್ಳುವೆನು.

ರಂಗರಾಯನು ಸತಿಯ ಇಂಗಿತವನ್ನರಿಯದವನಾಗಿ ಹೇಳಹತ್ತಿದನು:—''ಪ್ರಿಯೆ, ನೀನು ಸಬಲ ಚಿತ್ತಳು. ನಿರ್ಧಾರಣೆಯಂತೆ ನಡೆದೇ ತೀರುವೆ. ಈ ನಿನ್ನ ನಿರ್ಧಾರಣೆಯಂತೆ ನಡೆಯುವಿಕೆಗೆ ನನ್ನಿಂದ ಅಡ್ಡಿಯಾದೀತೆಂದು ತಿಳಿದಿರುವೆಯಾ? ಹೀಗೆಂದಿಗೂ ಭಾವಿಸದಿರು. ನೀನು ಅಸಮಂಜಸ ವಿಚಾರ ಮಾಡತಕ್ಕವಳಲ್ಲ; ಅಯೋಗ್ಯ ರೀತಿಯಿಂದ ವರ್ತಿಸತಕ್ಕವಳಲ್ಲ ಎಂಬುದನ್ನರಿತಿದ್ದ ನಾನು, ನಿನ್ನ ಕಾರ್ಯಕ್ರಮದಲ್ಲಿ ವ್ಯಾಘಾತವನ್ನೆಂದೂ ಉಂಟುಮಾಡುವದಿಲ್ಲ.''

ಭಾಮಿನಿಯು ಪತಿಯ ಮೋರೆಯಿಂದ ತನ್ನ ನೋಟವನ್ನು ಹೊರಳಿಸಿ, ಮೆಲ್ಲನೆ ಮಾತಾಡಹತ್ತಿದಳು:“ಹೆಚ್ಚಾಗಿ ವಿಚಾರಿಸಿ ಸ್ಥಿರಪಡಿಸಿಕೊಂಡ ಆ ಗೊತ್ತುವಳಿಗೆ ವಿಪರೀತವಾಗಿ ವರ್ತಿಸತಕ್ಕವಳಲ್ಲ.”

ರಂಗರಾಯನು ಭಾಮಿನಿಯ ಬಹು ಆಲೋಚನೆಯ ತರುವಾಯದ ಆ ನಿರ್ಧಾರಣೆಯು ರಾಮನ ವಿಷಯದ್ದಾಗಿರಬೇಕೆಂದು ತರ್ಕಿಸಿಕೊಂಡು. ಮುಗುಳುನಗೆಯಿಂದ ಹೇಳಹತ್ತಿದನು:-“ಮುಖ್ಯ ವಿಷಯವನ್ನು ಮುಚ್ಚಿಟ್ಟು ಉಪೋದ್ಘಾತವನ್ನೇ ಬೆಳೆಸುತ್ತ ನಡೆದಿರುವೆ. ಇನ್ನು ಹೀಗೆ ಮಾಡದೆ, ಆ ನಿನ್ನ ನಿರ್ಧಾರಣೆಯನ್ನಷ್ಟು ಬೇಗನೆ ಹೇಳಿಬಿಡು. ನಿನ್ನ ಇಚ್ಛೆಗೆ ವಿರುದ್ಧವಾಗಿ ಕಾರ್ಯಮಾಡಲಿಕ್ಕೆ ಒತ್ತಾಯಪಡಿಸೆನೆಂದು ನಾನು ಈಗಲೆ ನಿನಗೆ ಆಶ್ವಾಸನ ಕೊಡುತ್ತಿರುವೆನು. ಇನ್ನು ನೀನು ನಿಶ್ಶಂಕೆಯಿಂದ ನಿನ್ನ ಆ ಗೊತ್ತುವಳಿಯನ್ನು ಹೇಳು.”

ಭಾಮಿನಿಯು ಒಂದೆರಡು ಮಿನಿಟುಗಳ ವರೆಗೆ ಸ್ತಬ್ಧಳಾಗಿದ್ದಳು. ಬಳಿಕ ಮತ್ತೆ ಮಾತಾಡಹತ್ತಿದಳು:—“ಅಣ್ಣಂದಿರ ಸಂಸಾರದಲ್ಲಿ ವಿಶೇಷ ದುಃಖವೇನೂ ನನಗಿರಲಿಲ್ಲ; ಒಂದು ವಿಧವಾಗಿ ಸೌಖ್ಯದಿಂದಲೆ ದಿನಗಳನ್ನು ಕಳೆಯುತ್ತಿದ್ದೆನು. ನಾನು ನಾಳೆ ಮತ್ತೆ ಅಣ್ಣಂದಿರ ಮನೆಗೆ ಹೊರಡಬೇಕೆಂದಿರುವೆನು.”

“ಅಣ್ಣಂದಿರ ಬಳಿಗೆ ಹೋಗುವೆಯಾ? ಎಂದಿಗೆ ಬರುವೆ?”

“ಪ್ರಾಣನಾಥರೆ, ನೀವು ನನ್ನನ್ನು ಕ್ಷಮಿಸಿರಿ! ನಾನು ತಿರುಗಿ ಬರಲಾರೆನು! ನಾನು ಬಹಳವಾಗಿ ಆಲೋಚಿಸಿರುವೆನು—ನಾನು ಇಲ್ಲಿರುವುದು ವಿಹಿತವಲ್ಲವೆಂದು ಗೊತ್ತುಮಾಡಿಕೊಂಡಿರುವೆನು. ಇದೇ ನನ್ನ ಕೊನೆಯ ನಿರ್ಧರವು.”

ರಂಗರಾಯನು ಭಾಮಿನಿಯ ಈ ಮಾತು ಕೇಳಿ ದಿಙ್ಮೂಢನಾದನು! ಅವನಿಗೆ ತಾನೇನು ಮಾತಾಡಬೇಕೆಂಬುದು ಹೊಳೆಯದಾಯಿತು. ಸತಿಯ ಹೃದಯಮಂದಿರದ ಚಿನ್ನದ ಬಾಗಿಲು ಇಕ್ಕಿಕೊಳ್ಳುವದರಲ್ಲಿದೆ; ಇನ್ನು ಅದು ತೆರೆಯುವಂತೆ ಮಾಡುವದು ಜಗತ್ತಿನಲ್ಲಿಯು ಯಾವನಿಂದಲೂ ಸಾಧ್ಯವಲ್ಲವೆಂದು ಅವನಿಗೆ ಬೋಧೆಯಾಯಿತು.

ಅಪರಿಜ್ಞಾತ ಭವಿಷ್ಯತ್ತು.

ಮುಂಜಾವಿನಲ್ಲಿ ಹಾಸುಗೆಯಿಂದೇಳುತ್ತಲೆ, ರಾತ್ರಿಯೆಲ್ಲವೂ ದುಃಸ್ವಪ್ನದಲ್ಲಿ ಕಳೆದಿರುವಂತೆ ರಂಗರಾಯನಿಗೆ ಭಾಸವಾಯಿತು. ಇವನು ಮಲಗುವ ಮನೆಯಿಂದ ಹೊರಬಿದ್ದು ಬಂದು ಅತ್ತಿತ್ತ ಅವಲೋಕಿಸಿದನು. ಭಾಮಿನಿಯು ಮನೆಗೆಲಸದಲ್ಲಿ ತೊಡಗಿದ್ದಳು. ರಾಮನು ಅವಳ ಬೆನ್ನಹತ್ತಿದ್ದನು. ಏನೋ ಬೇಕೆಂದು ಹಟಮಾಡುತ್ತಿದ್ದನು. ತುಸ ಹೊತ್ತಿನ ಮೇಲೆ ಭಾಮಿನಿಯು ಪತಿಯನ್ನು ನೋಡಿ:-"ನಿಮ್ಮ ಚಹವನ್ನು ಸಿದ್ಧಪಡಿಸಿಟ್ಟಿರುವೆನು. ಕೈ-ಕಾಲು ತೊಳಕೊಳ್ಳಲಿಕ್ಕೆ ತಡಮಾಡಿದರೆ, ಚಹವು ಆರಿ ಕೆಟ್ಟು ಹೋದೀತು. ಬೇಗನೆ ಕೆಲಸ ತೀರಿಸಿಕೊಳ್ಳಿರಿ" ಎಂದು ನುಡಿದಳು.

"ನೀನು ಚಹವನ್ನು ಕಳುಹಿಕೊಡು. ನಾನು ತಡ ಮಾಡುವದಿಲ್ಲ. ಈಗಳೆ ಬರುವೆನು." ಎಂದು ನುಡಿದು, ರಂಗರಾಯನು ಅವಸರದಿಂದ ಹೊರಟು ಬಚ್ಚಲ ಮನೆಯನ್ನು ಹೊಕ್ಕನು. ಮನಸ್ಸಿನಲ್ಲಿಯೆ ಆಲೋಚಿಸಹತ್ತಿದನು:—"ಎಂತಹ ಭಾವನಾಪ್ರಧಾನ ಮನುಷ್ಯನು ನಾನು! ದಾಂಪತ್ಯ ಕಲಹದ ಯುದ್ಧಘೋಷಣೆಗೆ ಭೀಷ್ಮಪ್ರತಿಜ್ಞೆಯೆಂದು ಭಾವಿಸಿ, ರಾತ್ರಿಯೆಲ್ಲವನ್ನು ಅಶಾಂತಿಯಲ್ಲೂ ದುಶ್ಚಿಂತೆಯಲ್ಲೂ ಕಳೆದೆನಲ್ಲ!" ಈ ವಿಚಾರ ಉಂಟಾಗುತ್ತಲೆ ರಂಗರಾಯನಿಗೆ ನಗೆ ಬರಹತ್ತಿತು. ಮತ್ತೆ ಯೋಚಿಸಹತ್ತಿದನು: "ಒಂದು ಮನೆಯಲ್ಲಿ ಸಂಸಾರವನ್ನು ಸಾಗಿಸುತ್ತಿದ್ದ ಸತಿ-ಪತಿಗಳಲ್ಲಿ ಮತಭೇದವುಂಟಾಗುವದು ಸ್ವಾಭಾವಿಕವು. ಈ ಕಾರಣದಿಂದ ವಾದ-ವಿವಾದವಾಗಲಿ ಕಲಹವಾಗಲಿ ಏಳುವುದು ಸಹಜವಾದ್ದು; ಆದರೆ ಅಷ್ಟರಿಂದಲೆ ಸತಿಯರು ಪತಿಗೃಹವನ್ನು ತ್ಯಜಿಸಿ, ತೌರುಮನೆಯಲ್ಲಿ ಆಶ್ರಯ ಹೊಂದಹತ್ತಿದರೆ, ಈ ಜಗತ್ತಿನಲ್ಲಿ ಮನುಷ್ಯನ ಆಸ್ತಿತ್ವವೇ ಲೋಪವಾಗದಿರದು! ರಾಮನನ್ನು ಹಡೆದವಳ ಮಾತು ಬೇರೆಯಾಗಿತ್ತು. ಅವಳು ಹೀಗೆ ಮಾಡುವೆನೆಂದು ಅಂದಿದ್ದರೆ, ನಾನು ನಾಲ್ಕೆಂಟು ದಿನಗಳ ಮಟ್ಟಿಗಾದರೂ

ಭಯಗೊಳ್ಳಬೇಕಾಗಬಹುದಿತ್ತು; ಆದರೆ ಭಾಮಿನಿಯ ಮಾತು ಹಾಗಿಲ್ಲ. ಇವಳು ಆರ್ಯಲಲನೆಯರ ಆದರ್ಶದಂತೆ ಆಚರಿಸತಕ್ಕವಳು-ಪುರಾಣಮತಾಭಿಮಾನಿಯು--ಕೇವಲ ಭಾವಿಕಳು. ಇಂತಹ ರಮಣಿಯರಿಗೆ ಸಂಸಾರದಲ್ಲಿ ಧರ್ಮವೊಂದು ಕಾಣುತ್ತಿದೆ; ಸ್ವಾಮಿಯೊಬ್ಬನು ಕಾಣುತ್ತಿದ್ದಾನೆ; ಮತ್ತೇನೂ ಕಾಣದು. ಇವರು ಪತಿಯ ಸಂಬಂಧದ ಇಲ್ಲವೆ ಧರ್ಮಸಂಬಂಧದ ವಿಚಾರಗಳನ್ನುಳಿದು ಬೇರೆ ಮಾತೆತ್ತರು. ಇಂತಹ ಅಬಲೆಯರು ಪತಿಯ ಒಂದೆರಡು ಮಾತುಗಳಿಗಾಗಿ ತೌರುಮನೆಗೆ ಹೋದವ್ಸಂಟೆ? ತನ್ನ ಆದರ್ಶವನ್ನೂ ಏಕಮಾತ್ರ ಧರ್ಮವಾಗಿದ್ದ ಪಾತಿವ್ರತ್ಯವನ್ನೂ ಮರೆದು, ಪತಿಸೇವೆಯಿಂದ ವಂಚಿತರಾಗಬಯಿಸಿದ್ಸಂಟೆ? ಆರ್ಯಮಹಿಳೆಯರ ಆದರ್ಶವು ಸಾಮಾನ್ಯವಲ್ಲ. ಪಾತಿವ್ರತ್ಯವು ಅಷ್ಟೊಂದು ಕ್ಷುದ್ರವಲ್ಲ. ಈ ಬಂಧನಗಳಿಂದ ಬಂಧಿಸಲ್ಪಟ್ಟ ಭಾರ್ಯೆಯು ಪತಿಸಾನ್ನಿಧ್ಯವನ್ನು ಸ್ವಸಂತೋಷದಿಂದ ತ್ಯಜಿಸುವದು ಶಕ್ಯವಲ್ಲ. ಹೀಗಿರುವಾಗ, ನಾನು ಭಾಮಿನಿಯ ಒಂದು ಮಾತಿನಿಂದ ಬೆದರಿದವನಾಗಿ, ಸಲ್ಲದ ನೂರಾರು ಚಿಂತೆಗೊಳಗಾಗಿ ವ್ಯಥೆಯನ್ನನುಭವಿಸಿದ್ದು ನನ್ನ ಹುಚ್ಚುತನದ ದ್ಯೋತಕವಲ್ಲದೆ ಮತ್ತೇನು?'' ಈ ವಿಚಾರಸರಣಿಯಿಂದ ರಂಗರಾಯನ ಭಯವೂ, ಭಾವನೆಯೂ ಅಳಿದು ಹೋಗಿ, ಹೃದಯವು ಶಾಂತಿ ಹಾಗು ಪ್ರೀತಿ ರಸಗಳಿಂದ ಪರಿಪೂರ್ಣವಾಯಿತು. ಹಾಗೆಯೆ ತನ್ನ ವಿಚಾರಸರಣಿಯನ್ನು ಮುಂದೆ ಸಾಗಿಸಿದ ರಂಗರಾಯನು ಇಚ್ಛೆಯಿಲ್ಲದಿದ್ದರೂ ಭಾಮಿನಿಯನ್ನು ಸುಭದ್ರೆಗೂ ಸುಧಾರಕ ಸಮಾಜದ ಮತ್ತೆ ನಾಲ್ಕಾರು ಜನ ಹೆಂಗುಸರಿಗೂ ಒರೆಹಚ್ಚಿ ನೋಡಿದನು. ಅವನು ಈ ಪರೀಕ್ಷೆಯ ಫಲವಾಗಿ ಸಮಾಧಾನದ ಉಸಿರ್ಗರೆದು, ತನ್ನಲ್ಲಿಯೆ ಇಂತು ಅಂದುಕೊಳ್ಳಹತ್ತಿದನು:''ನನಗೆ ಹೆಣ್ಣುಮಕ್ಕಳಿಲ್ಲ. ಮುಂದೆ ಹುಟ್ಟುವರಾದರೆ, ತಮ್ಮನ್ನು ಹಡೆದವಳಂತೆಯೆ ಇರಲಿ. ಭಾಮಿನಿಯಂತೆಯೆ ಅವಳ ಮಕ್ಕಳು ಮಹದ್ಗುಣಮಂಡಿತೆಯರಾದರೆ, ನಾನು ದೇವರಿಗೆ ಧನ್ಯವಾದಗಳನ್ನರ್ಪಿಸುವೆನು.'' ರಂಗರಾಯನು ಅವಸರದಿಂದ ಕೈಕಾಲು ಮೋರೆಗಳನ್ನು

ತೊಳಕೊಂಡು, ಒರಸಿಕೊಂಡು, ಭರದಿಂದ ನಡೆದು ಲಾಯಬ್ರರಿ ಕೋಣೆಯನ್ನು ಪ್ರವೇಶಿಸಿ ಕುಳಿತುಕೊಂಡನು.

ಸೇವಕನು ಉಪಾಹಾರದ ಪದಾರ್ಥಗಳನ್ನು ತಂದಿರಿಸಿದನು. ರಂಗರಾಯನು ಈ ಸಾಮಾನುಗಳ ಕಡೆಗೆ ನೋಡಿದನು. ಮೊದಲಿನ ವಸ್ತುಗಳು-ನಡುವೆ ಕೆಲ ದಿನ ಅದೃಶ್ಯಗಳಾಗಿದ್ದ ಪದಾರ್ಥಗಳು ಇದ್ದವು. ಭಾಮಿನಿಯು ಬಂದಾಗಿನಿಂದ ಈ ಸಾಮಾನುಗಳ ಬದಲು ಉಂಡಿ, ಅವಲಕ್ಕಿ, ಸಜ್ಜಿಗೆ ಮೊದಲಾದವುಗಳನ್ನು ತಯಾರಿಸಹತ್ತಿದ್ದಳು; ಹಾಗು ಮುಂಜಾವಿನ ಚಹದ ಸಮಯದಲ್ಲಿ ಅವುಗಳನ್ನು ತಾನೇ ತಂದುಕೊಡುತ್ತಿದ್ದಳು; ಆದರೆ ಇಂದು ಅವಳು ಈ ಸಾಮಾನುಗಳನ್ನು ಬುದ್ಧಿಪೂರ್ವಕವಾಗಿ ಕಳುಹಿಕೊಟ್ಟಿದ್ದಳು; ಆದರೆ ರಂಗರಾಯನಿಗೆ ಈ ಪದಾರ್ಥಗಳು ಇಂದು ಪ್ರಿಯವಾಗಿ ತೋರಲಿಲ್ಲ. ಹೆಂಡತಿಯ ಹಸ್ತದಿಂದಸಿದ್ಧವಾದಯಾವ ಪದಾರ್ಥವೂ ಇಂದುಇಲ್ಲದಿರುವದನ್ನು ಕಂಡು, ಎದುರಿಗಿದ್ದ ಸಾಮಾನುಗಳನ್ನು ಮುಟ್ಟುವ ಮನಸ್ಸು ಕೂಡ ಅವನಿಗಾಗಲಿಲ್ಲ. ರಂಗರಾಯನು ಒಂದು ಕಪ್ಪು ಚಹವನ್ನು ಮಾತ್ರ ಇಟ್ಟುಕೊಂಡು, ಉಳಿದುದೆಲ್ಲವನ್ನೂ ತಿರುಗಿ ಕಳುಹಿಕೊಟ್ಟನು; ಹಾಗು ಈಗ್ಗೆ ಕೆಲವು ದಿನಗಳಿಂದ ನಿತ್ಯ ಪರಿಚಿತವಾಗಿದ್ದ ಕಾಲಸಪ್ಪಳವನ್ನು ಕೇಳುವ ಕುತೂಹಲತೆಯಿಂದ ಬಾಗಿಲ ಕಡೆಗೆ ನೋಡಹತ್ತಿದನು; ಮತ್ತು ಹೆಂಡತಿಯು ಬರುತ್ತಲೆ ಉಪಾಹಾರದ ಸಾಮಾನುಗಳನ್ನು ಸೇವಿಸದಿದ್ದುದರ ಕಾರಣವನ್ನು ಕಟುರೀತಿಯಿಂದುಚ್ಚರಿಸುವ ಸಂಕಲ್ಪ ಮಾಡಿಕೊಂಡು ಕೆಲ ಕಾಲ ದಾರಿಯ ಕಾಯ್ದನು. ಕೊನೆಗೆ ನಿರಾಶನಾಗಿ ಚಹವನ್ನು ಕುಡಿಯಹತ್ತಿದನು. ಚಹವು ತಣ್ಣಗಾಗಿ ರುಚಿಹೀನವಾಗಿ ಹೋಗಿತ್ತು. ಸೇವಕನು ಕಪ್ಪು-ಬಸಿಗಳನ್ನು ತಕ್ಕೊಂಡು ಹೋದನು; ಆದರೆ ಆ ಪರಿಚಿತ ಪಾದಕಮಲಗಳು ಕಾಣಲಿಲ್ಲ—ಭಾಮಿನಿಯ ಆಗಮನವಾಗಲಿಲ್ಲ.

ಕ್ರಮವಾಗಿ ವೇಳೆಯಾಯಿತು. ರಂಗರಾಯನು ಸ್ನಾನಾಹಾರಗಳನ್ನು ತೀರಿಸಿಕೊಳ್ಳಲಿಕ್ಕೆ ಸಿದ್ಧನಾದನು. ಭಾಮಿನಿಯ ಕಾರ್ಯ-ಕಲಾಪಗಳು ದಿನದಂತೆ ನಡೆದಿದ್ದುವು. ರಂಗರಾಯನಿಗೆ ಎಲ್ಲಿಯೂ

ಅವ್ಯವಸ್ಥೆಯು ಕಂಡುಬರಲಿಲ್ಲ. ಭಾಮಿನಿಯು ಊಟದ ಸಮಯದಲ್ಲಿ ರಂಗರಾಯನ ಬಳಿಗೆ ಬಂದಳು. ದಿನದಂತೆ ಮಾತಾಡಿದಳು. ಪತಿಗೆ ಆಗ್ರಹದಿಂದ ಊಟ ಮಾಡಿಸಿದಳು. ಭಾಮಿನಿಯ ಇಂದಿನ ಕಾರ್ಯಪದ್ಧತಿಯಲ್ಲಿ ಏನಾದರೂ ಹೆಚ್ಚು-ಕಡಿಮೆಯಾಗಿದೆಯೆಂದು ಮನೆಯಲ್ಲಿಯ ಉಳಿದವರಾರ ಲಕ್ಷ್ಯದಲ್ಲೂ ಬರುವಂತಿರಲಿಲ್ಲ; ಆದರೆ ರಂಗರಾಯನು ಮಾತ್ರ ಇದನ್ನು ಕಂಡುಕೊಂಡನು. ಒಂದು ರಾತ್ರಿಯ ಅವಧಿಯಲ್ಲಿ ಹೆಂಡತಿಯ ಸ್ಥಿತಿ-ಗತಿಗಳಲ್ಲಾದ ಬದಲಾವಣೆಗಳನ್ನು ಕಂಡು ಬೆರಗಾದನು—ಬಹಿರಂಗದಲ್ಲಿ ಯಾವ ಸ್ಥಿತ್ಯಂತರವನ್ನೂ ತೋರದೆ, ಪ್ರಿಯ ವ್ಯಕ್ತಿಯು ಅಲ್ಪಾವಧಿಯಲ್ಲಿ ತನ್ನಿಂದ ಹೀಗೆ ದೂರ ಸರಿದು ನಿಂತುಕೊಂಡುದನ್ನು ನೋಡಿದ ಅವನು ಸ್ತಬ್ಧನಾಗಿ ಹೋದನು!

ಕಾಲೇಜಿಗೆ ಹೊರಡುವ ಪೂರ್ವದಲ್ಲಿ ಬಟ್ಟೆಗಳನ್ನು ಧರಿಸಲಿಕ್ಕೆಂದು ಕೋಣೆಯಲ್ಲಿ ಕಾಲಿಟ್ಟ ರಂಗರಾಯನಿಗೆ ಮೊದಲು ಜಮಾ ಖರ್ಚಿನ ಆ ಪುಟ್ಟ ಪುಸ್ತಕವು ಕಣ್ಣಿಗೆ ಬಿತ್ತು. ರಂಗರಾಯನು ಗೇನಿಸಹತ್ತಿದನು:—"ಈ ವಹಿಯು ನಿನ್ನಿನಿಂದಲೂ ಇಲ್ಲಿ ಬಿದ್ದುಕೊಂಡಿರಬಹುದು. ನಾನಿದನ್ನು ಲಕ್ಷ್ಯಿಸಿರಲಿಕ್ಕಿಲ್ಲ; ಇಲ್ಲವೆ ನಾನು ಊಟಕ್ಕೆ ಹೋದಾಗ ಭಾಮಿನಿಯು ತಂದಿಟ್ಟಿರಬಹುದು. ಇದೇನೋ ಅಷ್ಟು ಸಂಭವನೀಯವಾಗಿ ತೋರುವದಿಲ್ಲ. ಇಂದು ತಿಂಗಳ ಕೊನೆಯ ದಿವಸವಲ್ಲ. ಹೀಗಿರಲು, ಈ ವಹಿಯು ಇಲ್ಲಿಗೇಕೆ ಬಂದಿರಬಹುದು?" ಹೀಗೆ ಆಲೋಚಿಸುತ್ತ ರಂಗರಾಯನು ಉಡುಗೆ-ತೊಡುಗೆಗಳನ್ನು ಧರಿಸಹತ್ತಿದನು. ಕುತೂಹಲತೆಯಿಂದ ಆ ಪುಸ್ತಕದ ಬಳಿಗೆ ಹೋಗಿ ನೋಡುತ್ತ ನಿಂತನು. ತುಸ ಹೊತ್ತಿನ ಮೇಲೆ ಕೈಯೊಳಗಿನ ಕೆಲಸವನ್ನು ತಡೆದು, ಪುಸ್ತಕದ ಪಾನುಗಳನ್ನು ತಿರುವುತ್ತ ಅವಲೋಕಿಸಿದನು. ಜಮಾಖರ್ಚು ಮೊದಲಿನಿಂದ ಕೊನೆಯ ವರೆಗೆ ಶುದ್ಧವೂ ಸ್ಪಷ್ಟವೂ ಆಗಿ ಬರೆಯಲ್ಪಟ್ಟಿತ್ತು. ನಿನ್ನಿನ ಸಾಯಂಕಾಲದ ವರೆಗಿನ ಜಮೆಯ ಹಾಗು ಖರ್ಚಿನ ರಕಮುಗಳ ಬೇರೀಜು ಮಾಡಿ, ಶಿಲುಕು ಕೂಡ ತೋರಿಸಲ್ಪಟ್ಟಿತ್ತು. ಈ ಜಮಾಖರ್ಚಿನ ಬರೆಹವು ಯಾವ ದಿವಸ

ಆರಂಭವಾಗಿತ್ತೋ, ಅಂದು ರಂಗರಾಯನು ಮನೆಯಲ್ಲಿರಲಿಲ್ಲ. ಇಷ್ಟೇ ಅಲ್ಲ; ಮುಂಬಯಿಯಲ್ಲಿದ್ದನು. ಅರ್ಥಾತ್ ರಂಗರಾಯನು ಬರೆಯ ಲಾರಂಭಿಸಿದವನಲ್ಲ; ಹೇಳಿ ಬರೆಸಿದವನೂ ಅಲ್ಲ. ಒಂದುವೇಳೆ ಜಮಾ ಖರ್ಚಿನ ಬರೆಹದ ಪರಿಸಮಾಪ್ತಿಯು ಇಂದೇ ಘಟಿಸುವದಾದರೆ, ಇದ ರಲ್ಲಿಯೂ ರಂಗರಾಯನ ಅಂಗವಿರಲಿಲ್ಲ; ಯಾಕೆಂದರೆ, ಬರೆಯ ಬೇಡೆಂದು ಇವನು ಸೂಚಿಸಿದವನಲ್ಲ. ಮುಖ್ಯವಾಗಿ ರಂಗರಾಯನಿಗೆ ಈ ಜಮಾಖರ್ಚಿನ ಪುಸ್ತಕವು ಆವಶ್ಯಕ ವಸ್ತುವಾಗಿರಲಿಲ್ಲ; ಆದರೂ ಇವನು ಮೊದಲನೆಯ ಪುಟದ ಬರೆಹವನ್ನು ಕ್ಷಣಕಾಲದವರೆಗೆ ನಿರ್ನಿ ಮೇಷನೇತ್ರನಾಗಿ ನೋಡುತ್ತ ನಿಂತುಬಿಟ್ಟನು. ಹೀಗೆ ನೋಡುತ್ತಿ ರುವ ಇವನಿಗೆ ನಡುವೆ ಕೆಲವು ದಿನ ಮಾತ್ರ ಮನೆಯಲ್ಲಿ ತಲೆದೋ ರಿದ್ದ ಜಮಾಖರ್ಚಿನ ಪುಸ್ತಕದ ಬಗ್ಗೆಯೂ, ಬರೆಹಗಾರರ ವಿಷಯ ವಾಗಿಯೂ ಹಲವು ಬಗೆಯ ಯೋಚನೆಗಳು ತಲೆದೋರಹತ್ತಿದುವು. ಕೆಲಹೊತ್ತಿನ ಮೇಲೆ ರಂಗರಾಯನು ಆ ಪುಸ್ತಕದಿಂದ ಸರಿದು ಬಂದು ಪೋಷಾಕ ಹಾಕಿಕೊಳ್ಳುವದರಲ್ಲಿ ತೊಡಗಿದನು; ಆದರೂ ಆಲೋಚ ನೆಯು ಇವನನ್ನು ಬಿಡಲಿಲ್ಲ. ಇವನು ಮನಸ್ಸಿನಲ್ಲಿಯೇ ಇಂತು ಅಂದು ಕೊಳ್ಳಹತ್ತಿದನು:—“ಈ ಸಂಸಾರದಲ್ಲಿ ಯಾವ ವಸ್ತುವಿಗೂ ಯಾವ ಸಂಗತಿಗೂ ಹೆಚ್ಚು ಮಹತ್ವ ಕೊಟ್ಟು ಉಪಯೋಗವಿಲ್ಲ. ಉದಯಿ ಸುವವು-ಕೆಲ ಕಾಲವಿರುವವು; ಕೊನೆಯಲ್ಲಿ ಅಸ್ತವಾಗುವವು. ಈ ಆಗು-ಹೋಗುಗಳನ್ನು ನಿರಪೇಕ್ಷಬುದ್ಧಿಯಿಂದ ನಿರೀಕ್ಷಿಸುತ್ತಿರಬೇಕಲ್ಲದೆ, ಮಮತ್ವ ಹಚ್ಚಿಕೊಂಡು ಬಡೆದಾಡುವದರಲ್ಲಿ ಸುಖವಿಲ್ಲ.”

ರಂಗರಾಯನು ಕಾಲೇಜಿಗೆ ಹೊರಡುವ ಮೊದಲು ಎಷ್ಟೇ ಇಚ್ಛೆ ಯಿದ್ದರೂ, ಭಾಮಿನಿಯನ್ನು ಕರೆದು ಮಾತಾಡಿಸುವ ಧೈರ್ಯವನ್ನು ಹೊಂದಲಿಲ್ಲ. ಅಪರಿಜ್ಞಾತ ಭವಿಷತ್ತಿನ ಬಗ್ಗೆ ಅವನು ನೂರಾರು ಕಲ್ಪನೆಗಳನ್ನು ಕಲ್ಪಿಸಹತ್ತಿದನು ಮಾತ್ರ—ಆದರೆ ಅನಿಶ್ಚಯದ ಆಶಂಕೆ ಯನ್ನು ಸುನಿಶ್ಚಿತ ದುರ್ಘಟನೆಯಲ್ಲಿ ದೃಢಪಡಿಸಿಕೊಳ್ಳುವ ಸಾಹಸವು ಇವನಿಗಾಗಲಿಲ್ಲ.

ಅಣ್ಣಾ, ಆ ಒಳಸಂಚು ಜಯಶೀಲವಾಗಲಿ.

ಕಾಲೇಜದ ಕೆಲಸವು ಮುಗಿಯುತ್ತಲೆ ರಂಗರಾಯನು ಮನೆಗೆ ಹೊರಡದೆ ಸುಭದ್ರೆಯ ಮನೆಯ ಕಡೆಗೆ ನಡೆದನು. ಭೀಮರಾಯನು ಮನೆಯಲ್ಲಿಯೇ ಇದ್ದನು. ಈ ಅವಧಿಯಲ್ಲಿ ದಂಪತಿಗಳಲ್ಲಿ ಒಪ್ಪಂದ ವಾಗಿ ಹೋಗಿತ್ತು. ಭೀಮರಾಯನೂ ಸುಭದ್ರೆಯೂ ಚಕ್ಕಂದದಿಂದ ಮಾತಾಡುತ್ತ ಕುಳಿತಿದ್ದರು. ರಂಗರಾಯನು ಈ ಸ್ಥಿತಿಯನ್ನು ನೋಡಿ ಸಂತುಷ್ಟನಾಗಿ:—"ತಂಗಿ, ರಾಮನನ್ನು ಕರೆಕಳುಹಲಿಲ್ಲವಲ್ಲ?" ಎಂದು ಕೇಳಿದನು.

ಸುಭದ್ರೆಯು ಉತ್ತರಕೊಡತಕ್ಕವಳಿದ್ದಳು; ಆದರೆ ಭೀಮರಾಯನು ಹೆಂಡತಿಗೆ ಮಾತಾಡಲವಕಾಶ ಕೊಡದೆ:—"ನಿನ್ನೆ ಆನೆಯನ್ನು ಕೊಂಡ ವ್ಯಕ್ತಿಯು ಈಗ ಇಲ್ಲಿಲ್ಲ" ಎಂದು ನುಡಿದನು.

"ಒಳ್ಳೇ ಗೂಢವಾಗಿ ಮಾತಾಡಿದೆ! ವಿವರಣೆಯನ್ನಷ್ಟು ಮಾಡಿಬಿಡು!" ರಂಗರಾಯನು ನುಡಿದನು.

'ನೀನು ಕತೆಯನ್ನು ಕೇಳಿಲ್ಲವೆ? ಕೇಳಿರದಿದ್ದರೆ, ನಾನೀಗ ಸಂಕ್ಷೇಪವಾಗಿ ಹೇಳುವೆನು ಕೇಳು. ಸೆರೆಗುಡುಕನೊಬ್ಬನು ಮದಿರೆಯ ಮದದಲ್ಲಿ ಅರಸನ ಆನೆಯನ್ನು ಕೊಳ್ಳಬಯಿಸಿದನು; ಆನೆಯನ್ನು ತಕ್ಕೊಂಡು ಹೋಗುತ್ತಿರುವ ರಾಜಸೇವಕರಿಗೆ ಮನಬಂದಂತೆ ಮಾತಾಡಿದನು. ಈ ಸುದ್ದಿಯು ರಾಜನಿಗೆ ತಿಳಿಯಿತು. ರಾಜನು ಮರುದಿನದ ದರ್ಬಾರದಲ್ಲಿ ಆ ಸೆರೆಗುಡಕನನ್ನು ಕರೆಸಿಕೊಂಡು ವಿಚಾರಿಸಿದನು. ಇದಕ್ಕೆ ಉತ್ತರವಾಗಿ ಆ ಸೆರೆಗುಡುಕನು ಕೈಜೋಡಿಸಿಕೊಂಡು ವಿನಯದಿಂದ ಹೇಳಿಸ್ತೇನಂದರೆ:—"ನಿನ್ನೆ ದೊರೆಗಳವರ ಆನೆಯನ್ನು ಕೊಳ್ಳಬಯಸಿದವನು ಬೇರೆ; ಈಗ ನಿಮ್ಮ ಮುಂದೆ ನಿಂತಿರುವ ನಾನು ಬೇರೆ. ನಿನ್ನೆ ಅವನು ನನ್ನಲ್ಲಿ ವಾಸವಾಗಿದ್ದನು—ಅವನೂ ನಾನೂ ಏಕತ್ರಿತರಾಗಿದ್ದೆವು. ಇಂದು ಅವನು ನನ್ನಿಂದ ಬೇರೆಯಾಗಿ ಹೋಗಿದ್ದಾನೆ. ಈಗ ನನಗೆ ನಿಮ್ಮ ಆನೆಯಿಂದ ಪ್ರಯೋಜನವಿಲ್ಲ—ಕಾರಣ ನನಗೆ ನಿಮ್ಮ

ಆನೆಯು ಬೇಡ. ನಿನ್ನೆ ಆನೆಯನ್ನು ಕೊಳ್ಳಬಯಿಸಿದ ವ್ಯಕ್ತಿಯು ಈಗ ಇಲ್ಲಿಲ್ಲ." ಎಂದು ಹೇಳಿ, ಭೀಮರಾಯನು ತನ್ನ ರಸಿಕತೆಗೆ ತಾನೇ ನಗಹತ್ತಿದನು. ನಗೆಯು ನಿಂತ ಬಳಿಕ ಮತ್ತೆ ಹೇಳಹತ್ತಿದನು:—"ಈ ಕತೆಯನ್ನು ನಿನ್ನ ಹೆಂಡತಿಗೆ ಹೇಳಿ, ಅವಳ ಕೋಪವನ್ನು ಶಾಂತಗೊಳಿಸು. ನಿನ್ನೆ ರಾಮುನನ್ನು ಸಂರಕ್ಷಿಸ ಬಯಸಿದವಳು ಈಗ ಈ ಸ್ಥಳದಲ್ಲಿಲ್ಲ. ಅವಳು ನಿನ್ನೆ ಕ್ಷಣ ಕಾಲ ಮಾತ್ರ ನಿನ್ನ ಸಹೋದರಿಯಲ್ಲಿ ವಾಸಿಸಿ ಅಂತರ್ಧಾನ ಹೊಂದಿದ್ದಾಳೆ. ಬಾಲಕನಿಗೆ ತಾಯಿಗಿಂತ ಅತ್ತೆಯ ಸಂರಕ್ಷಣೆಯು ಪ್ರಿಯಕರವಲ್ಲ; ಹಿತಕರವೂ ಅಲ್ಲ. ಒಂದು ವೇಳೆ ನಿನ್ನ ಸಹಜಾತೆಯು ಯಾವುದೊಂದು ಪ್ರಾಣಿಯನ್ನು ಸಂರಕ್ಷಿಸಿಯೇ ತೀರುವೆನೆಂದು ಹಟ ಹಿಡಿದರೆ, ನಾನು ಇವಳಿಗೆ ಸಾಲ ಮಾಡಿಯಾದರೂ ಒಂದು ಆನೆಯನ್ನು ಕೊಂಡುಕೊಡುವೆನು. ಅದನ್ನಿವಳು ಸಂರಕ್ಷಿಸಿ, ಸಂತುಷ್ಟಳಾಗಲಿ." ಭೀಮರಾಯನು ರಂಗರಾಯನ ಕಡೆಗೆ ಮೋರೆ ಮಾಡಿ ಕಣ್ಣು ಚಿವುಟಿ ನಗಹತ್ತಿದನು.

ರಂಗರಾಯನು ಭೀಮರಾಯನ ಈ ನಗುವಿನಲ್ಲಿ ಸಹಕಾರಿಯಾಗಲಿಲ್ಲ; ನಗಲಿಲ್ಲ. ಯಾಕೆಂದರೆ, ಈ ಚೇಷ್ಟೆಯು ಸುಭದ್ರೆಯ ಸುಪ್ತ ಕ್ರೋಧವನ್ನು ಜಾಗ್ರತಗೊಳಿಸಿದರೆ, ಅನರ್ಥವೊದಗಬಹುದೆಂದು ಭಯಗೊಂಡಿದ್ದನು. ಕಾರಣ ಇವನು ಪ್ರಯತ್ನಪೂರ್ವಕವಾಗಿ ತನ್ನ ನಗುವನ್ನು ತಡೆದುಕೊಂಡನು.

"ರಂಗ, ನಿನ್ನ ಮೋರೆಯ ಮೇಲೆ ಕಳೆಯಿಲ್ಲದಾಗಿದೆ. ಮತ್ತೇನಾದರೂ ವಿಶೇಷ ಸಂಗತಿ ಜರುಗಿದೆಯೆ?" ಭೀಮರಾಯ ಕೇಳಿದನು.

"ನಿನ್ನಿನ ಸುಭದ್ರೆಯ ಮಾತುಗಳಿಂದ ರಾಮುನ ವಿಷಯದಲ್ಲಿ ನಾನು ತುಂಬಾ ನಿಶ್ಚಿಂತನಾಗಿದ್ದೇನೆ; ಆದರೆ ಇವಳು ಇಂದು ಉತ್ಸಾಹವಿಲ್ಲದವಳಾಗಿದ್ದಾಳೆ. ಇವಳಿಂದ ಆ ಕೆಲಸವಾಗುವದಿಲ್ಲೆಂದ ಬಳಿಕ, ನಾನು ರಾಮುನ ವಿಷಯವಾಗಿ ಬೇರೊಂದು ವ್ಯವಸ್ಥೆಯನ್ನು ಗೊತ್ತು ಮಾಡಲಿಕ್ಕೆ ಬೇಕಾಗಿದೆ."

"ಮಗನ ಸಂರಕ್ಷಣೆಯ ವಿಷಯದಲ್ಲಿ ನೀನು ನಿನ್ನ ಈ ಭಾವಿಕ

ಭಾರ್ಯೆಯನ್ನು ನಂಬಲಾರದವನಾಗಿರುವೆ........"

"ನಿನ್ನ ಈ ಕಠೋರ ನುಡಿಯು ಉತ್ತರವನ್ನು ಕೊಡುವ ಮನಸ್ಸು ನನಗಿಲ್ಲದಾಗಿದೆ; ಆದರೂ ನಾನು ನಿನಗೆ ಭಾಮಿನಿಯು ಬೇಗನೆ ಇಲ್ಲಿಂದ ಹೊರಟು ಹೋಗತಕ್ಕವಳಿರುವಳೆಂಬದನ್ನು ಮಾತ್ರ ಸೂಚಿಸದಿರಲಾರೆನು."

"ಹೊರಟು ಹೋಗುವಳೆ? ಎಲ್ಲಿಗೆ?" ಭೀಮರಾಯ ಕೇಳಿದನು.

"ಎಲ್ಲಿಂದ ಬಂದಿರುವಳೋ ಅಲ್ಲಿಗೆ? ತನ್ನ ಅಣ್ಣಂದಿರ ಮನೆಗೆ ಹೋಗುವಳಂತೆ." ರಂಗರಾಯ ನುಡಿದನು.

ಭೀಮರಾಯನ ಮುಖವು ಅತಿಶಯ ಗಂಭೀರವಾಯಿತು. ಅವನು ತನ್ನ ಹೆಂಡತಿಯ ಮೋರೆಯನ್ನು ದೃಷ್ಟಿಸಿ, "ರಂಗ, ಇಂತಹದೊಂದು ದುರ್ಘಟನೆ ಒದಗಬಹುದೆಂದು ನಾನು ಮೊದಲೇ ತರ್ಕಿಸಿ ಭಯಗೊಂಡಿದ್ದೆನು" ಎಂದು ನುಡಿದನು.

ಈ ವರೆಗೆ ಮಾತಾಡದೆ ಸುಮ್ಮನೆ ಕುಳಿತಿದ್ದ ಸುಭದ್ರೆಯು ಪತಿಯ ಮಾತಿನ ಇಂಗಿತವನ್ನರಿತಳು. ಉಂಟಾದ ಕೋಪವನ್ನು ತೋರಗೊಡದೆ, ಸಹಜ ಸ್ವರದಿಂದ ಮಾತಾಡತೊಡಗಿದಳು: "ಅಣ್ಣಾ, ನನ್ನ ಮಾತುಗಳಿಂದಲೆ ನೀನು ಭಾಮಿನಿಯನ್ನು ತೌರುಮನೆಗೆ ಕಳುಹಿಸಬೇಕೆಂದಿರುವೆಯಾ? ಯಾವ ಕಾರಣದಿಂದಲೊ ನೀನು ಭಾಮಿನಿಯನ್ನು ಹೊರದೂಡಬಯಸಿರಲೊಲ್ಲೆಯೇಕೆ, ನಾನು ಬೇಡೆನ್ನುವದಿಲ್ಲ; ಆದರೆ ಇದರ ಪರಿಣಾಮವು ಒಳಿತಾಗಲಿಕ್ಕಿಲ್ಲವೆಂದು ನನಗೆ ಅನಿಸಹತ್ತಿದೆ. ಯಾಕಂದರೆ, ಇದಕ್ಕಾಗಿ ನೀವಿಬ್ಬರೂ ಮುಂದೆ ಪಶ್ಚಾತ್ತಾಪಕ್ಕೆ ಗುರಿಯಾಗುವ ಸಂಭವವಿದೆ."

ರಂಗರಾಯನು ಕಳೆದ ಒಂದೆರಡು ದಿನ ತನ್ನ ಮನೆಯಲ್ಲಿ ನಡೆದ ವಿಶೇಷ ಸಂಗತಿಗಳನ್ನು ವಿವರಿಸಿ, ಬಳಿಕ ಇಂತು ಮಾತನಾಡತೊಡಗಿದನು: "ನಾನು ಅವಳಿಗೆ ತೌರುಮನೆಗೆ ಹೋಗೆಂದು ಹೇಳಿದವನಲ್ಲ; ಅವಳಾಗಿಯೆ ಹೋಗುವೆನೆಂದೆನ್ನಲು ಬೇಡವೆಂದು ನುಡಿದವನೂ ಅಲ್ಲ. ಅವಳು ಹೀಗೆ ಮತ್ತೆ ತವರು ಮನೆಗೆ ಹೋಗುವಳಾದರೆ, ಬಂಧು-

ಬಾಂಧವರೆಲ್ಲರು ಈ ವಿಷಯವನ್ನೆತ್ತಿ ಚರ್ಚಿಸಹತ್ತುವರು. ಈ ಚರ್ಚೆಯಲ್ಲಿ ನನ್ನ ಸ್ತುತಿಗೆ ಅವಕಾಶವಿಲ್ಲೆಂಬುದನ್ನು ನಾನು ಬಲ್ಲೆನಾದರೂ, ಭಾಮಿನಿಯನ್ನು ತಡೆದಿರಿಸಿಕೊಳ್ಳಲಾರದವನಾಗಿರುವೆನು. ಮೊದಲು ನನ್ನಿಂದ ಒಂದು ದೊಡ್ಡ ತಪ್ಪಾಗಿತ್ತು. ಅದನ್ನು ಸುಧಾರಿಸಿಕೊಳ್ಳುವದಕ್ಕಾಗಿ ನಾನು ಭಾಮಿನಿಯನ್ನು ಕರೆಸಿಕೊಂಡಿದ್ದೆನು; ಆವಳು ನನ್ನಿಚ್ಛೆಯಂತೆ ನಡೆದು ತನ್ನ ಸ್ಥಳವನ್ನು ಕಾಯ್ದುಕೊಳ್ಳಬೇಕಾಗಿತ್ತು; ಆದರೆ ಅವಳು ಹೀಗೆ ಮಾಡದೆ, ತಾನೇ ತಾನಾಗಿ ನಾನು ತವರು ಮನೆಗೆ ಹೋಗುವೆನೆಂದು ಹಟ ಹಿಡಿದಿರುವದು ಒಂದು ದೃಷ್ಟಿಯಿಂದ ನನ್ನ ಮಹದ್ಭಾಗ್ಯವೆಂದೇ ನಾನು ಭಾವಿಸಿದ್ದೇನೆ. ಅವಳಿಗೆ ಈ ಬುದ್ಧಿಯನ್ನಿತ್ತುದಕ್ಕಾಗಿ ನಾನು ದೇವರಿಗೆ ಮನಃಪೂರ್ವಕವಾಗಿ ಧನ್ಯವಾದಗಳನ್ನರ್ಪಿಸುವೆನು.'

ಸುಭದ್ರೆಯು ಈ ಮಾತಿಗೆ ಉತ್ತರ ಕೊಡ ಬಯಿಸದೆ ಸುಮ್ಮನಿದ್ದಳು. ಭೀಮರಾಯನೂ ಪ್ರತಿಮಾತನಾಡಲಿಲ್ಲ. ರಂಗರಾಯನು ಮತ್ತೆ ಹೀಗೆ ಹೇಳಹತ್ತಿದನು: "ನಿಮಗೆ ಈ ಎಲ್ಲ ಸಂಗತಿಯನ್ನು ತಿಳುಹುವದು ಅವಶ್ಯವೆಂದು ನನಗೆ ಅನಿಸಿದ್ದರಿಂದ, ನಾನು ಇಂದು ಈ ಸಮಯದಲ್ಲಿ ಇಲ್ಲಿಗೆ ಬಂದಿರುವೆನು. ಎಲ್ಲ ವಿಷಯಗಳನ್ನು ಸರಿಯಾಗಿ ತಿಳಿದಿದ್ದ ನೀವು ನನಗೆ ದೋಷಕೊಡಲಾರಿರೆಂದೇ ನಾನು ಭಾವಿಸಿರುವೆನು."

ಭೀಮರಾಯನು ಬಲವಾಗಿ ತಲೆಯಲ್ಲಾಡಿಸಿ ಮಾತನಾಡತೊಡಗಿದನು:—"ಇಲ್ಲ, ನಾವು ನಿನಗೆ ದೋಷಕೊಡುವದಿಲ್ಲ. ಇರಲಿ. ರಂಗ, ಮಧ್ವರಾಯರ ಮಗಳನ್ನು ನಿನಗೆ ಕೊಡುವ ಆಲೋಚನೆಯು ನಡೆದಿತ್ತಷ್ಟೆ? ಮಧ್ವರಾಯನೇ ಆಗಲಿ, ಅವನ ಪತಿಯಿಂದ ಮತ್ತಾರೇ ಆಗಲಿ ನಿನ್ನ ಬಳಿಗೆ ಬಂದಿದ್ದರೇನು?"

ರಂಗರಾಯನು ಕೋಪದಿಂದ ಹೀಗೆ ಮಾತಾಡಿದನು: "ಭೀಮಾ, ನಿನ್ನ ಮಾತಿನ ಇಂಗಿತವು ನನಗೆ ಹೊಳೆಯುತ್ತಿದೆ. ಹಾಗೂ ಅತಿಶಯ ವ್ಯಥೆಯನ್ನುಂಟುಮಾಡುತ್ತಿದೆ! ನಿನಗೆ ಯಾವ ಕಾಲಕ್ಕೆ ಯಾರಿಗೆ ಯಾವ

ಮಾತಾಡಬೇಕು? ಯಾವ ಮಾತಾಡಬಾರದು? ಎಂಬುದರ ಸಾರಾಸಾರ ವಿಚಾರವಿಲ್ಲ! ನನ್ನ ಹೃದಯದ ಯಾವ ಭಾಗದಲ್ಲಿ ವಿಶಿಷ್ಟ ನೋವಿದೆಯೋ, ಅದೇ ಸ್ಥಳಕ್ಕೆ ನೀನು ನಿನ್ನ ವಾಗ್ಬಾಣಗಳನ್ನು ಪ್ರಯೋಗಿಸಿ ನನಗೆ ಅಸಹ್ಯವಾದ ತಾಪವನ್ನುಂಟು ಮಾಡುತ್ತಿರುವೆ!'' ರಂಗರಾಯನು ಹೃದಯದ ವ್ಯಥಾತಿರೇಕದಿಂದಲೋ ಏನೋ, ಅತ್ತಿತ್ತ ಚಲಿಸಿ ಮತ್ತೆ ಸ್ಥಿರವಾಗಿ ಕುಳಿತುಕೊಂಡನು.

ಭೀಮರಾಯನು ರಂಗರಾಯನ ಮುಖದ ಕಡೆಗೆ ನೋಡುತ್ತ ಸಹಜ ರೀತಿಯಿಂದ ಮಾತಾಡಹತ್ತಿದನು: ''ರಂಗ, ನಿನ್ನ ಹೃದಯದ ಯಾವ ಭಾಗದಲ್ಲಿ ನೋವಿದೆಯೆಂಬುದನ್ನು ನಾನು ನಿಜವಾಗಿಯೂ ಅರಿಯೆನು.''

ರಂಗರಾಯನು ಮತ್ತಷ್ಟು ಕೋಪಗೊಂಡು, ನಿಂತು ಮಾತಾಡತೊಡಗಿದನು:-''ನೀನವನ್ನು ಎಂದೂ ತಿಳಿಯಲಾರೆ! ಕೈಹಿಡಿದ ಹೆಂಡತಿಯ ಮನೋಭಾವವನ್ನು ತಿಳಿಯದೆ, ಅವಳನ್ನು ಆಗಾಗ್ಗೆ ವಾಗ್ಬಾಣಗಳಿಂದ ವ್ಯಥೆಗೊಳಿಸುತ್ತಿರುವೆ! ಇಂತಹ ನೀನು, ನನ್ನ ಮೇಲೆ ಸದಯನಾಗುವ ಬಗೆ ಹೇಗೆ? ನನ್ನ ಮನೋವ್ಯಥೆಯನ್ನು ತಿಳಿದು, ಅದು ಕಡಿಮೆಯಾಗುವಂತೆ ಉಪಚಾರದ ಮಾತನಾಡುವದೆಂತು?''

ಭೀಮರಾಯನು ನಸುನಗೆಯಿಂದ ಹೇಳಹತ್ತಿದನು: ''ರಂಗ, ನೀನು ಮಾತ್ರ ಸತಿಯ ಮನೋಭಾವನೆಗಳನ್ನು ಸರಿಯಾಗಿ ತಿಳಿದವನು! ಸತಿಗೆ ದುಃಖವಾಗದಂತೆ ವರ್ತಿಸಬಲ್ಲವನು! ಈ ವಿಷಯದಲ್ಲಿ ನೀನು ನನ್ನ ಗುರುವಾಗಬಲ್ಲೆ! ಆದರೆ ನನ್ನದು ಕಲಿಯುವ ವಯಸ್ಸು ಕಳೆದು ಹೋಗಿದೆ. ಕಾರಣ ನಿನ್ನ ಶಿಷ್ಯನಾಗುವ ಪ್ರಬಲ ಆಕಾಂಕ್ಷೆಯನ್ನು ನಿರುಪಾಯವಾಗಿ ತಡೆಯಬೇಕಾಗಿದೆ! ಆಗಲಿ. ನೀನಿನ್ನು ಒಂದು ಪುಸ್ತಕವನ್ನು ಬರೆ. ಲೇಖಕನಾಗಿ ಜಗತ್ತಿಗೆ ಪತಿಧರ್ಮವನ್ನು ಬೋಧಿಸು. ಇದರಿಂದ ನೀನು ಬಹು ಜನರ ಹಿತಮಾಡಿದಂತಾಗುವದು.'' ಭೀಮರಾಯನು ಕೊಂಚ ಕಾಲ ಸುಮ್ಮನಿದ್ದು, ಬಳಿಕ ''ಅಣ್ಣ-ತಂಗಿಯರು ಏಕಾಂತಸ್ಥಳವಲ್ಲಿ ಕೆಲಹೊತ್ತು ಆಲೋಚಿಸುತ್ತ ಕುಳಿತುಕೊಳ್ಳಿರಿ.

ನನಗೆ ತುಸ ಕೆಲಸವಿದೆ. ಹೋಗಿ ಬರುವೆನು," ಎಂದು ನುಡಿದು ಹೊರಟನು.

"ಪುಸ್ತಕವನ್ನು ಬರೆಯುವದಕ್ಕೆ ಕಾಲಾವಧಿಯು ಬೇಕು. ಆ ಮೊದಲು ನಿನಗೆ ಒಂದು ಮಾತನ್ನು ಹೇಳಬೇಕಾಗಿದೆ. ಹೋಗಬೇಡ, ತುಸ ತಡೆದು ನಿಲ್ಲು. ನಾನು ಹೇಳುತ್ತಿರುವುದನ್ನು ಕೇಳಿಕೋ. ಆಗಳೆ ನೀನು ಮಧ್ವರಾಯರ ಮಗಳ ಮಾತೆತ್ತಿ ನನಗೆ ಚೇಷ್ಟೆಮಾಡಿದೆ. ಆ ನಿನ್ನ ಚೇಷ್ಟೆಯನ್ನು ನಿಜವಾದ ಕೃತಿಯಲ್ಲಿ ತರಬೇಕೆಂದು ನಾನು ಆಶಿಸಿದ್ದೇನೆ. ಮಧ್ವರಾಯನೇ ಆಗಲಿ, ಅವನ ಮತಿಯ ಜನರೇ ಆಗಲಿ ನನ್ನ ಹತ್ತಿರ ಬಂದಿರದಿದ್ದರೂ, ಇನ್ನು ನಾನೇ ಅವರ ಹತ್ತಿರ ಹೋಗಬೇಕಾಗಿದೆ." ರಂಗರಾಯನು ಗಟ್ಟಿಸಿ ನುಡಿದನು.

ಭೀಮರಾಯನು ಮತ್ತೆ ಒಳಗೆ ಬರಲಿಲ್ಲ. ಬಾಗಿಲದ ಹೊರಗಿನಿಂದಲೆ ಇಂತು ಉತ್ತರವಿತ್ತನು:—"ಆಗಲಿ. ಇನ್ನು ಕಾಲವಿಲಂಬ ಮಾಡಬೇಡ. ಬೇಗನೆ ಕೆಲಸಕ್ಕೆ ತೊಡಗು. ಅನುಮಾನದಿಂದ ಕಾಲಯಾಪನೆ ಮಾಡುತ್ತ, ಮಾಲೆ ಹಾಕ ಬಂದವಳನ್ನು ಉಪೇಕ್ಷಿಸಿ ತಿರುಗಿ ಕಳುಹಿಕೊಡುವದು ತರವಲ್ಲ!"

ಮರುದಿನ ಮುಂಜಾವಿನಲ್ಲಿ ಭೀಮರಾಯನು ರಂಗರಾಯನ ಮನೆಗೆ ಹೋದನು. ರಂಗರಾಯನು ಸ್ನಾನ ಮಾಡುವ ಉದ್ಯೋಗದಲ್ಲಿದ್ದನು. ಈ ಅವೇಳೆಯಲ್ಲಿ ಆಕಸ್ಮಾತ್ತಾಗಿ ಬಂದ ಭೀಮರಾಯನನ್ನು ನೋಡಿ ಅತ್ಯಂತ ವಿಸ್ಮಿತನಾದನು. ನಿನ್ನಿನ ಅಪ್ರಿಯ ಭಾಷಣದ ತರುವಾಯ ಭೀಮರಾಯನು ಇಂದು ತಾನೇ ತಾನಾಗಿ ಹೀಗೆ ಬಂದಾನೆಂಬುದನ್ನು ರಂಗರಾಯನು ಕನಸಿನಲ್ಲಿ ಸಹ ಭಾವಿಸಿದವನಲ್ಲ. ರಂಗರಾಯನು ಉಂಟಾದ ವಿಸ್ಮಯವನ್ನು ತೋರ್ಪಡಿಸದೆ, "ಇಂದು ಕೋರ್ಟಿಗೆ ಸೂಟಿಯುಂಟೇ?" ಎಂದು ಕೇಳಿದನು.

"ನಿನ್ನ ಪ್ರಶ್ನೆಯು ನಿರರ್ಥಕವಾದದ್ದು."

"ನೀನು ಇಂದು ಕೋರ್ಟಿಗೆ ಹೋಗುವದಿಲ್ಲವೇ?"

"ಈ ಪ್ರಶ್ನೆಯು ಅದಕ್ಕಿಂತಲೂ ಹೆಚ್ಚು ನಿರರ್ಥಕವಾದುದು."

"ಹೀಗಿದ್ದರೆ, ನಿನ್ನ ದೃಷ್ಟಿಯಿಂದ ನಾನೂ ನಿರರ್ಥಕನೇ ಸರಿ! ಆಗಲಿ. ಈಗ ನಾನು ನಿನ್ನೊಡನೆ ಮಾತ ಬಳಿಸುತ್ತ ಕುಳ್ಳಿರುವಂತಿಲ್ಲ. ಸ್ನಾನದ ವೇಳೆಯಾಗಿದೆ. ಸ್ನಾನ ಮಾಡುವೆನು. ಇದಕ್ಕೆ ನಿನ್ನ ಅಡ್ಡಿ ಯಿಲ್ಲವಷ್ಟೆ?"

"ಇಲ್ಲ. ನಿನ್ನೊಡನೆ ನನ್ನ ಕೆಲಸವಿಲ್ಲ. ನೀನು ಬೇಕಾದ ಕೆಲ ಸಕ್ಕೆ ತೊಡಗಬಹುದು."

"ತಂಗೀ, ಒಳಗೆ ಬರಬಹುದಷ್ಟೆ?" ಭೀಮರಾಯನು ಅಡುಗೆಯ ಮನೆಯ ಬಾಗಿಲ ಬಳಿಯಲ್ಲಿ ನಿಂತು ಪ್ರಶ್ನ ಮಾಡಿದನು.

ಭಾಮಿನಿಯು ವೃಂದಾವನದ ಪೂಜೆ ಮಾಡಿಕೊಂಡು ಅದೇ ಬಂದು ನಿಂತಿದ್ದಳು. ಮನೆಯಲ್ಲಿ ತುಳಸಿಯ ಕಟ್ಟೆಯಿರಲಿಲ್ಲ. ನೆರೆ ಮನೆಯಲ್ಲಿಯ ವೃಂದಾವನಕ್ಕೆ ಹೋಗಿ ಪೂಜೆ ಮಾಡಿಕೊಂಡು ಬರುವದು ಭಾಮಿನಿಯ ನಿತ್ಯದ ಪದ್ಧತಿಯಾಗಿತ್ತು. ಇವಳು ಬಾಗಿಲ ಕಡೆಗೆ ನೋಡಿ "ಬರ್ರಿ" ಎಂದು ಉಚ್ಚರಿಸಿದಳು.

ಭೀಮರಾಯನು ಅಡುಗೆಯ ಮನೆಯಲ್ಲಿ ಹೊಕ್ಕು ಭಾಮಿನಿಯನ್ನು ನೋಡಿದನು. ಮಾತಾಡಹತ್ತಿದನು:—"ತಂಗಿ, ಈ ಅವೇಳೆಯಲ್ಲಿ ಬಂದು ನಿನಗೆ ತೊಂದರೆ ಕೊಟ್ಟಂತಾಯಿತು. ನೀನು ಮತ್ತೆ ತವರು ಮನೆಗೆ ಹೊರಡುವ ಸುದ್ದಿಯನ್ನು ಕೇಳಿ, ತಡೆಯಲಾರದೆ ಬಂದೆನು. ನೀನು ಹೀಗೆ ಅಕಸ್ಮಾತ್ತಾಗಿ ತವರು ಮನೆಗೆ ಹೊರಡುವದರ ಕಾರಣವೇನು? ಅಪ್ಪನಿಗೆ ಜಡ್ಡಾಗಿದೆಯೆ?"

"ಅಪ್ಪನು ಜೀವಿಸಿಲ್ಲ; ಸತ್ತು ಸ್ವರ್ಗದಲ್ಲಿರುವನು!"

"ಹೀಗೋ? ಹಾಗಾದರೆ ಅವ್ವನಿಗೆ ಕಾಹಿಲೆಯಾಗಿದೆಯೇನು?"

"ಅವಳೂ ಜೀವಿಸಿಲ್ಲ; ಅಪ್ಪನಿಗಿಂತ ಮೊದಲೇ ಸತ್ತು ಹೋಗಿದ್ದಾಳೆ!"

"ಭೀಮರಾಯನು ಅತಿಶಯ ವಿಸ್ಮಯವನ್ನು ಪ್ರಕಟಿಸಿ, ಇಂತು ಮಾತಾಡಿದನು:—"ಹಾಗಾದರೆ ನೀನೆಲ್ಲಿಗೆ ಹೋಗುವೆ? ಅಲ್ಲಿ ಯಾರಿರುವರು? ತಾಯ್ತಂದೆಗಳಿಲ್ಲದ ಮನೆಗೆ ನೀನು ಈ ಸಮಯದಲ್ಲಿ ಹೋಗ

ಬಯಸುವದು ಎಷ್ಟು ಮಾತ್ರಕ್ಕೂ ವಿಹಿತವಲ್ಲ. ರಂಗರಾಯನ ಅಭಿಪ್ರಾಯವು ಹೇಗೆಯೇ ಇರಲಿ; ನಾನಂತೂ ಈ ನಿನ್ನ ಸಂಕಲ್ಪವನ್ನು ಸಮರ್ಥಿಸಲಾರೆನು!''

ಭಾಮಿನಿಯು ಕೆಳವೋರೆ ಮಾಡಿಕೊಂಡು ನಸುನಗೆಯಿಂದ:— ''ನೀವು ನನಗೆ ಹೋಗಲಿಕ್ಕೆ ಅಪ್ಪಣೆಯನ್ನು ಕೊಡಲಾರಿರಾ?'' ಎಂದು ಕೇಳಿದಳು.

''ಇಲ್ಲ, ಎಷ್ಟು ಮಾತ್ರಕ್ಕೂ ಒಪ್ಪಿಗೆಯನ್ನು ಕೊಡಲಾರೆನು!''

''ಅಣ್ಣಾ, ನನಗೆ ಇದುವರೆಗೆ ಮೂವರು ಅಣ್ಣಂದಿರಿದ್ದರು; ಈಗ ನಾಲ್ಕನೆಯ ಅಣ್ಣನೊಬ್ಬನಿರುವನೆಂದು ಭಾವಿಸಿರುವೆನು. ನೀವು ಈ ನನ್ನ ನಾಲ್ಕನೆಯ ಅಣ್ಣಂದಿರು. ನಾನಿದುವರೆಗೆ ಅಣ್ಣಂದಿರ ಮನೆಯಲ್ಲಿಯೆ ಇದ್ದವಳು; ಅಣ್ಣಂದಿರ ಅಧಿಕಾರಕ್ಕೊಳಗಾಗಿದ್ದು, ನನ್ನ ಇದುವರೆಗಿನ ಜೀವಿತದ ಬಹು ಭಾಗವನ್ನು ಕಳೆದವಳು. ಅಣ್ಣಂದಿರ ಸಂಸಾರದಲ್ಲಿ ನಾನು ಆತ್ಮಾಭಿಮಾನಕ್ಕೆ ಆಘಾತವನ್ನನುಭವಿಸಿದವಳಲ್ಲ; ಆಚಾರ-ವಿಚಾರಗಳಿಗೆ ಅಮರ್ಯಾದೆಯನ್ನು ಹೊಂದಿದವಳಲ್ಲ.''

''ತಂಗೀ, ಒಂದು ವೇಳೆ ನೀನು ಈಗ ತೌರುಮನೆಗೆ ಹೋಗುವುದು ಅತ್ಯವಶ್ಯವಾಗಿದ್ದರೆ ಹೋಗಬಹುದು; ನಾನು ಬೇಡೆನ್ನುವದಿಲ್ಲ; ಆದರೆ ತಿರುಗಿ ಎಂದಿಗೆ ಬರುವೆಯೆಂಬುದನ್ನು ಸ್ಪಷ್ಟವಾಗಿ ಹೇಳಿಟ್ಟು ಹೋಗು. ತಿರುಗಿ ಬರುವ ಸಮಯವನ್ನು ಸೂಚಿಸಿದ ಹೊರತು ನಾನು ನಿನ್ನ ಈ ಹೊರಡುವಿಕೆಗೆ ಅನುಮತಿ ಕೊಡಲಾರೆನು.''

ಭಾಮಿನಿಯು ಮಾತಾಡದೆ ಸುಮ್ಮನಿದ್ದಳು. ಭೀಮರಾಯನೇ ಮತ್ತೆ 'ರಾಮನ ಗತಿಯೇನು?' ಎಂದು ಕೇಳಿದನು.

'ಅವನ ಅತ್ತೆಯಿದ್ದಾಳೆ.'

''ಅವಳು ನನ್ನ ಹೆಂಡತಿಯು. ನಾನು ಅವಳ ಸಲುವಾಗಿ ನಿನ್ನ ಹತ್ತರ ಕ್ಷಮೆ ಬೇಡಿಕೊಳ್ಳುವೆನು.''

ಭಾಮಿನಿಯು ಮೌನದಿಂದಿದ್ದಳು. ಭೀಮರಾಯನು ''ಕ್ಷಮಿಸುವದು ಸಾಧ್ಯವಿಲ್ಲವೆ?'' ಎಂದು ಕೇಳಿದನು; ಆದರೂ ಭಾಮಿನಿಯು

ಮಾತನಾಡಲಿಲ್ಲ. ಭೀಮರಾಯನು ಕೆಲ ಕಾಲ ಉತ್ತರದ ಮಾರ್ಗ ಪ್ರತೀಕ್ಷೆ ಮಾಡಿ, ನಿಟ್ಟುಸಿರ ಬಿಟ್ಟು, ಮೆಲ್ಲಮೆಲ್ಲನೆ ಮಾತಾಡಹತ್ತಿದನು: "ಜಗತ್ತಿನಲ್ಲಿ ಅಪರಾಧವಿದ್ದ ಬಳಿಕ ಅದಕ್ಕೆ ಕ್ಷಮೆಯೂ ಇರಲಿಕ್ಕೆ ಬೇಕು. ಅವಳ ಅಪರಾಧಕ್ಕೆ ಕ್ಷಮೆಯು ಏಕೆ ಇಲ್ಲವೆಂಬುದನ್ನು ಹೇಳ ಲಾರೆಯಾ?"

"ಒಬ್ಬನು ಮಾಡಿದ ಅಪರಾಧದ ಶಿಕ್ಷೆಯನ್ನು ಮತ್ತೊಬ್ಬನು ಅನುಭವಿಸಬೇಕಾಗುತ್ತಿರುವುದೇಕೆ? ಹೀಗಾಗುವುದನ್ನು ನಾನು ಬಲ್ಲೆನು; ಆದರೆ ಏಕೆ ಹೀಗಾಗುತ್ತಿದೆಯೆಂಬುದನ್ನು ಮಾತ್ರ ಅರಿಯೆನು." ಭಾಮಿ ನಿಯು ನುಡಿದಳು.

'ಎಂದು ಹೊರಡುವೆ?' ಭೀಮರಾಯನು ಕೇಳಿದನು.

"ಅಣ್ಣನು ಕರೆಯ ಬಂದ ಬಳಿಕ ಹೋಗುವೆನು. ಅವನು ನಾಳೆ ಯೇ ಬಂದರೂ ಬರಬಹುದು."

ಭೀಮರಾಯನು ಕ್ಷಣಕಾಲ ಸುಮ್ಮನಿದ್ದನು. ಬಳಿಕ ಮತ್ತೆ ಮಾತಾಡಹತ್ತಿದನು: "ತಂಗಿ, ಒಂದು ಮಾತನ್ನು ನಿನ್ನ ಮುಂದೆ ಎಂದೂ ಒಡನುಡಿಯಬಾರದೆಂದು ಸಂಕಲ್ಪಿಸಿಕೊಂಡಿದ್ದೆನು; ಆದರೆ ಇಂದು ಆ ಮಾತನ್ನು ನಿನ್ನ ಮುಂದೆ ಹೇಳದಿದ್ದರೆ, ನಾನು ಅಪರಾಧಿ ಯಾಗಿ ಹೋಗುವೆನೆಂದು ನನಗೆ ಅನಿಸುತ್ತಿದೆ. ಕಾರಣ ಅದನ್ನು ಈಗ ನಿನಗೆ ಹೇಳಿಡುವೆನು. ನೀನು ಈ ಮನೆಗೆ ಬರುವ ಮೊದಲು ಮತ್ತೊ ಬ್ಬಳು ಈ ಮನೆಯ ಒಡತಿಯಾಗಿ ಬರುವ ಆಲೋಚನೆಯು ನಡೆ ದಿತ್ತು. ಆ ಆಲೋಚನೆಯು ಈಗಲೂ ಸಂಪೂರ್ಣವಾಗಿ ಮುಗ್ಗಿಲ್ಲ."

"ಅಣ್ಣಾ, ನಾನದನ್ನು ಬಲ್ಲೆನು."

"ಹೀಗಿದ್ದು ನೀನು ಈ ಮನೆಯನ್ನು ಬಿಟ್ಟು ಹೋಗಲಿಕ್ಕೆ ಮನಸ್ಸು ಮಾಡಿರುವಿಯಾ? ನೀನಾಗಿಯೆ ಆ ಆಲೋಚನೆಯನ್ನು ಕಾರ್ಯ ದಲ್ಲಿ ಪರಿಣಮಿಸಲಿಕ್ಕೆ ಸಹಾಯ ಮಾಡುವೆಯಾ? ನೀನು ಕೋಪದ ಅಧೀನಳಾಗಿ ಈ ಮನೆಯನ್ನು ಬಿಟ್ಟು ಹೋಗಿ. ನಡೆದಿದ್ದ ಆ ಒಳ ಸಂಚು ಜಯಶಾಲಿಯಾಗುವಂತೆ......."

ಭಾಮಿನಿಯು ಭೀಮರಾಯನನ್ನು ಮುಂದೆ ಮಾತಾಡಗೊಡದೆ ನಿರ್ಧರದಿಂದ ಹೀಗೆ ಹೇಳಹತ್ತಿದಳು:—"ಅಣ್ಣಾ, ಈ ಒಳಸಂಚು ಜಯಶೀಲವಾಗಲಿ ಇಲ್ಲವೆ ಅಪಜಯಹೊಂದಲಿ, ನಾನು ಯಾವುದನ್ನೂ ಲೆಕ್ಕಿಸುವದಿಲ್ಲ! ನೀವು ನನ್ನನ್ನು ಕ್ಷಮಿಸಿರಿ!" ಭಾಮಿನಿಯು ಕೈ ಜೋಡಿಸಿ ಭೀಮರಾಯನ ಮೋರೆಯ ಕಡೆಗೆ ನೋಡಿದಳು.

ಆ ದೃಷ್ಟಿಯ ಎದುರಿನಲ್ಲಿ ಭೀಮರಾಯನು ನೀರವವಾಗಿ ನೋಡುತ್ತ ನಿಂತನು.

ಆದರೆ ಅದು ಸತ್ಯವಾಗಲಿಲ್ಲ.

ರಂಗರಾಯನು ಹೆಂಡತಿಯೊಡನೆ ಮಾತಾಡುವದನ್ನು ಬಹಳವಾಗಿ ಕಡಿಮೆ ಮಾಡಿದನು; ಆದರೆ ಭಾಮಿನಿಯು ಹೀಗೆ ಬುದ್ಧಿಪೂರ್ವಕ ಮಾತು ನಿಲ್ಲಿಸುವ ಮನಸ್ಸು ಮಾಡಲಿಲ್ಲ. ಇವಳು ಮಾತುಗುಳಿಯಾಗಿರದಿದ್ದರೂ, ಪ್ರಸಂಗೋಚಿತವಾಗಿ ಪತಿಯೊಡನೆ ಮಾತಾಡುತ್ತಿದ್ದಳು. ರಂಗರಾಯನು ಎಷ್ಟೇ ಸೂಕ್ಷ್ಮರೀತಿಯಿಂದ ಪರೀಕ್ಷಿಸಿದರೂ ಭಾಮಿನಿಯ ಬಹಿರಂಗದ ಆಚರಣೆಯಲ್ಲಿ ಲೇಶಮಾತ್ರವೂ ಪರಿವರ್ತನೆಯಾದುದನ್ನು ಕಂಡುಕೊಳ್ಳಲಿಲ್ಲ. ಭಾಮಿನಿಯು ಸಂಸಾರದ ಎಲ್ಲ ಕೆಲಸಗಳನ್ನು ಹಿಂದಿನಂತೆ ಈಗಲೂ ಒಳ್ಳೇ ದಕ್ಷತೆಯಿಂದ ಹಾಗು ವ್ಯವಸ್ಥೆಯಿಂದ ಸಾಗಿಸಿದ್ದಳು. ಇವಳು ತಾನು ಮಾಡುವ ಕೆಲಸದಲ್ಲಿಯೆ ಆಗಲಿ, ಸೇವಕರಿಂದ ಮಾಡಿಸುವ ಕೆಲಸದಲ್ಲಿಯೆ ಆಗಲಿ ಸದಾ ಜಾಗ್ರತ ದೃಷ್ಟಿಯನ್ನಿರಿಸುತ್ತಿದ್ದಳು. ಸೇವಕರ ಕೆಲಸದಲ್ಲಿ ಕೊಂಚ ದೋಷ ಘಟಿಸಿದರೂ ಅದು ಭಾಮಿನಿಯ ದೃಷ್ಟಿಗೋಚರವಾಗದಿರುತ್ತಿರಲಿಲ್ಲ. ರಂಗರಾಯನು ಇಂದು ಮುಂಜಾವಿನಲ್ಲಿ ಭಾಮಿನಿಯು ಚಾಕರನ ಒಂದು ಸಣ್ಣ ತಪ್ಪಿಗಾಗಿ ಅವನಿಗೆ ಸಿಟ್ಟುಮಾಡುತ್ತಿರುವದನ್ನು ಕೇಳಿದ್ದನು. ಇವನು ತನ್ನ ಹೆಂಡತಿಯ ಚಟುವಟಿಕೆಯನ್ನೂ ಕಾರ್ಯದಕ್ಷತೆಯನ್ನೂ ಕಂಡು, ಯಾವ ಹೆಂಗಸು ಒಂದೆರಡು ದಿನಗಳಲ್ಲಿ ಈ

ಮನೆಗೆ ಕೊನೆಯ ಶರಣು ಹೊಡೆದು ತವರು ಮನೆಗೆ ಹೋಗುತ್ತಿರುವಳೋ, ಅವಳಿಗೆ ಈ ಸಂಸಾರದ ವಿಷಯದಲ್ಲಿ ಇಷ್ಟೊಂದು ಮಮತೆಯಿದ್ದುದೆಂತು? ಎಂಬದನ್ನು ಯೋಚಿಸಿ, ಆಗಾಗ್ಗೆ ಗೊಂದಲದಲ್ಲಿ ಬೀಳುತ್ತಿದ್ದನು. ಈ ವಿಷಯವಾಗಿ ಭಾಮಿನಿಯನ್ನು ಮಾತಾಡಿಸಿ ತಿಳಿದುಕೊಳ್ಳಬೇಕೆಂದರೆ, ಯಾವದೋ ಒಂದು ಅನಿರ್ದಿಷ್ಟ ಕಾರಣವು ಅಡ್ಡಿಯಾಗಿ, ರಂಗರಾಯನನ್ನು ಮಾತಾಡಗೊಡುತ್ತಿರಲಿಲ್ಲ.

ರಂಗರಾಯನು ಭಾಮಿನಿಯ ಸ್ವಭಾವವನ್ನು ಸಂಪೂರ್ಣವಾಗಿ ತಿಳಿದಿರಲಿಲ್ಲ; ಅರಿತುಕೊಳ್ಳಲಿಕ್ಕೆ ತಕ್ಕ ಸಮಯವನ್ನೂ ಹೊಂದಿರಲಿಲ್ಲ. ದೊರೆದ ಅಲ್ಪಾವಧಿಯಲ್ಲಿ ವಿಚಾರಿಸಿ ತಿಳಕೊಂಡದ್ದರ ಫಲವಾಗಿ 'ಭಾಮಿನಿಯು ತನ್ನ ಮಾತು ಹೊರಳಿಸತಕ್ಕವಳಲ್ಲ' ಎಂಬುದನ್ನು ನಿರ್ಧರಿಸಿಕೊಂಡಿದ್ದನು. ಈ ನಿರ್ಧಾರಣೆಯನ್ನನುಸರಿಸಿ ರಂಗರಾಯನು ಆಗಾಗ್ಗೆ "ಭಾಮಿನಿಯ ತವರು ಮನೆಗೆ ಹೋಗುವದನ್ನು ತಪ್ಪಿಸತಕ್ಕವಳಲ್ಲ; ಆದರೆ ಅವಳ ಈಗಳಿನ ಕೃತಿಯು ಪಿತೃಗೃಹಗಮನದ ನಿರ್ಧಾರಣೆಗೆ ತೀರ ವಿಪರೀತವಿದೆ. ಹೀಗಾದದ್ದು ಹೇಗೆ?" ಎಂಬ ಗೂಢವಿಚಾರಕ್ಕೊಳಗಾಗುತ್ತಿದ್ದನು; ಸರಿಯಾದ ಉತ್ತರವನ್ನು ಕಾಣದೆ ಚಟಪಡಿಸುತ್ತಿದ್ದನು.

ರಂಗರಾಯನು ಹಲವು ಜನರ ಸ್ವಭಾವಗಳನ್ನು ಅವಲೋಕಿಸಿದ್ದನು; ಭಿನ್ನ ಸ್ವಭಾವದ ಅನೇಕ ಜನರೊಡನೆ ವ್ಯವಹರಿಸಿದ್ದನು. ಮಾನಸಶಾಸ್ತ್ರದ ದೊಡ್ಡ ದೊಡ್ಡ ಹೊತ್ತಿಗೆಗಳನ್ನು ಓದಿಕೊಂಡಿದ್ದನು. ಪ್ರಸಿದ್ಧ ಲೇಖಕರ ಕಾವ್ಯ-ಕಾದಂಬರಿ-ಕಥೆಗಳ ನಾಯಕ-ನಾಯಕಿಯರ ಸ್ವಭಾವವೈಶಿಷ್ಟ್ಯವನ್ನು ಕುರಿತು ಆಲೋಚಿಸುತ್ತಿದ್ದನು. ಇವನು ಈ ಎಲ್ಲವುಗಳ ಸಹಾಯ ತಕ್ಕೊಂಡರೂ, ಭಾಮಿನಿಯ ಸ್ವಭಾವವೈಶಿಷ್ಟ್ಯವನ್ನು ಕಂಡುಹಿಡಿಯಲಸಮರ್ಥನಾಗಿದ್ದನು.

ಭೀಮರಾಯನು ಬಂದು ಅಡುಗೆಯ ಮನೆಯ ಬಾಗಿಲ ಬಳಿಯಲ್ಲಿ ನಿಂತನು. ಒಳಗೆ ಹಣಿಕಿ ಹಾಕಿ ನೋಡಿ, "ತಂಗಿ, ಊಟಕ್ಕೆ ಕುಳ್ಳಿರಲಿಕ್ಕೆ ಇನ್ನು ಎಷ್ಟು ಅವಕಾಶವಿದೆ?" ಎಂದು ಕೇಳಿದನು.

ಭಾಮಿನಿಯು ನಗೆಮೊಗದಿಂದ "ಎಲ್ಲವೂ ಸಿದ್ಧವಿದೆ. ನನ್ನಿಂದ ತಡವಾಗುವಂತಿಲ್ಲ. ಯಾವಾಗ ಊಟಕ್ಕೆ ಏಳುವರೆಂಬದನ್ನು ನಿಮ್ಮ ಸ್ನೇಹಿತರನ್ನು ವಿಚಾರಿಸಿಕೊಳ್ಳಿರಿ" ಎಂದು ನುಡಿದಳು.

"ನೀನು ಕೆಲಸಕ್ಕೆ ಹಿಂಜರಿಯತಕ್ಕವಳಲ್ಲ, ಮಾತಿನಲ್ಲಿ ಸೋಲ ತಕ್ಕವಳಲ್ಲ ಎಂಬದನ್ನು ನಾನು ಬಲ್ಲೆನು. ನಿನ್ನ ಸರ್ವೋತ್ಕೃಷ್ಟವಾದ ಅಡುಗೆಯ ರುಚಿಯನ್ನು ಒಮ್ಮೆಯಾದರೂ ನೋಡಬೇಕೆಂಬ ಆಶೆಯು ನನಗುಂಟಾಗಿದೆ; ಆದರೆ ಊಟಮಾಡಿ ಬಂದಿದ್ದ ನಾನು, ಅಪಚನದ ಭಯದಿಂದ ಇಂದು ಆ ಆಶೆಯನ್ನು ತ್ಯಜಿಸಬೇಕಾಗಿದೆ. ಇನ್ನೊಂದು ದಿನ ನೀನು ಊಟಕ್ಕೆ ಆಮಂತ್ರಣ ಕೊಡದಿದ್ದರೂ ನಾನೇ ನಾನಾಗಿ ಬಂದು ಊಟ ಮಾಡಿ ಹೋಗುವೆನು."

ಭಾಮಿನಿಯು 'ಅವಶ್ಯವಾಗಿ ಬರ್ರಿ.' ಎಂದಂದು ಸುಮ್ಮನಾದಳು.

"ನಿನ್ನ ಆ ಮಗನು ಎಲ್ಲಿ? ಎಲ್ಲಿಯೂ ಕಾಣುವದಿಲ್ಲವಲ್ಲ!" ಭೀಮರಾಯನಂದನು.

"ಇಂದು ಶಾಲೆಗೆ ಹೋಗುವದಿಲ್ಲವೆಂದು ಹಟತೆಗೆದಿದ್ದನು. ಹಲವು ಬಗೆಯಾಗಿ ಹೇಳಿ, ಸಮಾಧಾನಪಡಿಸಿ, ಊಟಕ್ಕೆ ಹಾಕಿ, ಇದೇ ಈಗ ಶಾಲೆಗೆ ಕಳುಹಿ ಕೊಟ್ಟಿರುವೆನು."

"ಅವನು ನಿನ್ನನ್ನು ಬಹಳವಾಗಿ ಪ್ರೀತಿಸುತ್ತಾನೆ." ಎಂದು ನುಡಿದು, ಭೀಮರಾಯನು ತುಸ ನಕ್ಕು, ಮತ್ತೆ ಮಾತಾಡಹತ್ತಿದನು. "ತಂಗಿ, ನೀನು ತೌರುಮನೆಗೆ ಹೊರಡುವುದರ ಸಮಾಚಾರವೇನು? ಸಿಟ್ಟಿನ ಭರದಲ್ಲಿ ನಿನ್ನಂಥವಳೂ ಸುಳ್ಳು ಮಾತಾಡಬಹುದೆಂಬದನ್ನು ನಾನು ನಂಬಲಾರೆ! ಸಿಟ್ಟಿನ ಆವೇಶದಲ್ಲಿ ಬಾಯಿಗೆ ಬಂದಂತೆ ಬೊಗಳುವದು ಸಾಮಾನ್ಯರ ಸ್ವಭಾವ; ಆದರೆ ನಿನ್ನಂತಹ ಸಬಲಚಿತ್ತಳು ಕ್ಷಣಮಾತ್ರವೇ ಏಕಾಗಲೊಲ್ಲಮ, ಸಾಮಾನ್ಯರಂತೆ ಅವಿವೇಚನೆಯಿಂದ ಮಾತಾಡಬಹುದೇ?"

ಭಾಮಿನಿಯು ತನ್ನ ಮೇಲೆ ಹೊರಿಸಲ್ಪಡುತ್ತಿರುವ ಈ ಆರೋಪಣೆಗೆ ಉತ್ತರ ಕೊಡಬಯಿಸಲಿಲ್ಲ. ನತಮುಖಿಯಾಗಿ ನೀರವತೆಯಿಂದ

ಕುಳಿತುಬಿಟ್ಟಳು! ಭೀಮರಾಯನು ಮಾತು ಬಳಿಸದೆ, ಆ ಸ್ಥಳದಿಂದ ಹೊರಟು ರಂಗರಾಯನ ಲಾಯಬ್ರರಿ ಕೋಣೆಗೆ ಬಂದನು. ರಂಗರಾಯನು ಸ್ನಾನದ ತರುವಾಯ ತನ್ನ ಕೋಣೆಗೆ ಬಂದು, ಕನ್ನಡಿಯ ಮುಂದೆ ನಿಂತು ಕ್ರಾಪಿನ ಕೂದಲುಗಳನ್ನು ಸರಿಪಡಿಸಿಕೊಳ್ಳುತ್ತಿದ್ದನು.

"ಕಾಲೇಜಕ್ಕೆ ಇಂದು ಸೂಟಿಯಿರುವದೆ?" ಭೀಮರಾಯನು ಕೇಳಿದನು.

"ಇಲ್ಲ; ಆದರೆ ಇಂದು ಎರಡು ತಾಸು ತಡೆದು ಹೋದರೂ ನಡೆಯುವಂತಿದೆ." ರಂಗರಾಯನಂದನು.

"ಭಾಮಿನಿಯನ್ನು ತವರು ಮನೆಗೆ ಕಳುಹಿಕೊಡುವ ಎತ್ತುಗಡೆಯನ್ನೇನು ಮಾಡಿರುವೆ?"

"ಈಗ ಯಾವ ಎತ್ತುಗಡೆಯನ್ನೂ ಮಾಡಬೇಕಾಗಿಲ್ಲ. ನಾಳೆ ಆವಳ ಅಣ್ಣನು ಬಂದು ಅವಳನ್ನು ಕರೆದೊಯ್ಯುವನಂತೆ. ಅವಳು ಹೋದ ಬಳಿಕ, ಪ್ರಪಂಚದ ವ್ಯವಸ್ಥೆಯ ಬಗ್ಗೆ ನಾನು ಎತ್ತುಗಡೆ ಮಾಡಬೇಕೆಂದಿರುವೆನು."

"ಭಾವನಾವಶ ಮನುಷ್ಯನು ನೀನು! ಇಲ್ಲದ್ದೊಂದು ಕಲ್ಪಿಸಿಕೊಂಡು ಅನರ್ಥವನ್ನು ನಡೆಸಿರುವೆ! ಈ ಹೆಂಡತಿಯೊಡನೆ ನೀನು ಸರಿಯಾಗಿದ್ದು ಬಾಳುವೆ ಮಾಡಲಾರದವನಾಗಿರುವೆ. ಈ ಪ್ರಸಂಗದಲ್ಲಿ ನಾವಿಬ್ಬರೂ ಹೆಂಡಂದಿರ ಅದಲು-ಬದಲುಗಳನ್ನು ಮಾಡಿಕೊಳ್ಳೋಣ. ನಿನಗೂ ಸುಖವಾದೀತು; ನಾನೂ ಸುಖದಿಂದಿರಬಹುದು."

ರಂಗರಾಯನು ಅತಿಶಯ ಕುಪಿತನಾಗಿ "ನೀನು ನಿನ್ನ ಈ ಉತ್ತರ ವಯಸ್ಸಿನಲ್ಲೂ ಬೀಭತ್ಸ ಮಾತಾಡಿ, ಅನ್ಯರಿಗೆ ಚೇಷ್ಟೆ ಮಾಡುವದನ್ನು ಬಿಡಲಾರೆಯಾ?" ಎಂದು ಕೇಳಿದನು.

"ಏನು ಮಾಡಲಿ? ಬಿಡಬೇಕೆಂದಿರುವೆನು; ಆದರೆ ನಿಮ್ಮ ವ್ಯವಹಾರವನ್ನು ನೋಡಿ ಬಿಡಲಾರದವನಾಗಿರುವೆನು. ಭಾಮಿನಿಯು ತನ್ನ ವ್ಯಥೆಯಭರದಲ್ಲಿ ನಾನು ತವರು ಮನೆಗೆ ಹೋಗುವೆನೆಂದುಚ್ಚರಿಸುತ್ತಲೆ, ನೀನು ಅನುಮಾನವಿಲ್ಲದೆ 'ಹೋಗು; ನನಗೆ ಬೇರೊಬ್ಬ ಹೆಂಡತಿ

ದೊರೆಯುವಳು' ಎಂದೇ ಹೇಳಿ ಬಿಟ್ಟೆ! ಇದೇನು ಸರಿಯಾದ ಮಾತೇ? ನೀವು ಅಣ್ಣ-ತಂಗಿಯರಿಬ್ಬರೂ ಒಂದೇ ಪಡಿಯಚ್ಚಿನಲ್ಲಿ ತಯಾರಾದವರು—ಒಂದೇ ವಿಧದ ಸ್ವಭಾವದವರು. ನಿಮ್ಮಂತಹ ಸ್ವಭಾವದವರೊಡನೆ ಹೆರವರು ಬಾಳುವೆ ಮಾಡಿಕೊಂಡಿರುವದು ದುಸ್ಸಾಧ್ಯ! ಇರಲಿ. ನಾನು ಭಾಮಿನಿಗೆ ಹೇಳಿಟ್ಟಿರುವೆನು. ಅವಳು ಇನ್ನು ತವರು ಮನೆಗೆ ಹೋಗಲಿಚ್ಛಿಸುವದಿಲ್ಲ; ಆದರೆ ನೀನು ಅವಳ ಮನಸ್ಸಿಗೆ ನಡುವಂತೆ ಮಾತಾಡುತ್ತ ಹೋಗದಿರು. ಅವಳಿಗೆ ಅಪ್ರಿಯವಾಗುವಂತೆ ಆಚರಿಸದಿರು." ಭೀಮರಾಯನು ಜೇಬಿನಲ್ಲಿಯ ಗಡಿಯಾರವನ್ನು ತೆಗೆದು ನೋಡಿ "ವೇಳೆಯು ಬಹಳವಾಯಿತು. ಇನ್ನು ನಾನು ಹೋಗುವೆನು. ಮತ್ತೆ ನಾಳೆ ಮುಂಜಾನೆ ಬರುವೆನು." ಎಂದು ಹೇಳಿ ಕೊಂಚ ಮುಂದೆ ಹೋದನು. ಮತ್ತೆ ಹಿಂದಿರುಗಿ "ರಂಗ, ಕೆಲವು ದಿನಗಳ ಮಟ್ಟಿಗಾದರೂ ನೀನು ಸಾವಧಾನತೆಯನ್ನವಲಂಬಿಸು. ಅವಳ ಮತದಂತೆ ವರ್ತಿಸು. ಅವಳು ಆಚಾರ್ಯರ ಮಗಳು. ಅನಾಚಾರವನ್ನೆಷ್ಟು ಮಾತ್ರಕ್ಕೂ ಸಹಿಸಳು. ನೀನು ಅನಾಚಾರವಾಗದಂತೆ ಎಚ್ಚರದಿಂದಿರು. ಖಾದ್ಯ-ಪೇಯಗಳ ವಿಷಯದಲ್ಲಿ ಸಂಯಮನವನ್ನವಲಂಬಿಸು. ಇದರಿಂದ ನಿನಗೆ ಲಾಭವಲ್ಲದೆ ಹಾನಿಯಿಲ್ಲ. ಊಟ-ಉಡಿಗೆಗಳ ವಿಷಯದಲ್ಲಿಯ ಆಡಂಬರವು ಪ್ರಕೃತಿಗೂ ಹಿತವಲ್ಲ. ಆರ್ಥಿಕ ದೃಷ್ಟಿಯಿಂದಲೂ ಹಾನಿಕರವು." ಎಂದು ನುಡಿದು, ಉತ್ತರದ ಹಾದಿಯನ್ನು ನೋಡದೆ, ಭರದಿಂದ ಹೊರಟು ಹೋದನು.

ರಂಗರಾಯನು ಕೆಲಹೊತ್ತು ಆಲೋಚನಾಪರನಾಗಿ ನಿಂತುಬಿಟ್ಟನು. ಭೀಮರಾಯನು ಯಾವಾಗ ಬಂದಿದ್ದನು? ಭಾಮಿನಿಗೆ ಏನೆಂದು ಹೇಳಿದನು? ಭಾಮಿನಿಯು ಯಾವ ಮಾತಾಡಿದಳು? ಭಾಮಿನಿಯ ಸ್ಥಿರಸಂಕಲ್ಪವು ಹೀಗೆ ಒಮ್ಮೆಲೆ ಹೊಡಮಳ್ಳಿದ್ದು ಹೇಗೆ? ಇವೇ ಮೊದಲಾದ ಪ್ರಶ್ನೆಗಳನ್ನೆತ್ತಿ ಅವನು ಬಹಳವಾಗಿ ಯೋಚಿಸಿದನು; ಆದರೆ ಸಂಪೂರ್ಣ ಸಮಾಧಾನ ಹೊಂದಬಹುದಾದ ಉತ್ತರವು ದೊರೆಯಲಿಲ್ಲ.

ಪರಿಚಾರಿಕೆಯು ಬಂದು 'ಊಟಕ್ಕೆ ಏಳಿರಿ' ಎಂದು ಕರೆದು ಹೋದಳು. ರಂಗರಾಯನು ಒಳಗೆ ಹೋದನು. ತಾಟು ಬಡಿಸಿ ಸಿದ್ಧವಾಗಿತ್ತು. ಕೊಂಚ ದೂರದಲ್ಲಿ ಭಾಮಿನಿಯು ಕುಳಿತಿದ್ದಳು. ರಂಗರಾಯನು ಸುಮ್ಮನೆ ಹೋಗಿ ಮಣೆಯ ಮೇಲೆ ಕುಳಿತನು. ಊಟ ಮಾಡಹತ್ತಿದನು. ಭೀಮರಾಯನ ಮಾತೆತ್ತಿ ಭಾಮಿನಿಯೊಡನೆ ಮಾತಾಡಬೇಕೆಂದು ಅವನ ಮನಸ್ಸು ಹಾತೊರೆಯುತ್ತಿತ್ತು. ಭೀಮರಾಯನು ಹೇಳಿದಂತೆ ನಾಲ್ಕು ಸರಸ ಮಾತುಗಳನ್ನಾಡಿ, ಹೆಂಡತಿಯ ಮನೋರಂಜನೆ ಮಾಡಲಿಕ್ಕೆ ಅವನ ಮನಸ್ಸು ಉತ್ಸುಕವಾಗಿತ್ತು; ಆದರೆ ನಾಲಿಗೆಯು ರಂಗರಾಯನ ಇಚ್ಛೆಗೆ ಸಹಾಯ ಮಾಡಲಿಲ್ಲ. ರಂಗರಾಯನು ಎಷ್ಟೇ ಪ್ರಯತ್ನಿಸಿದರೂ ಬಾಯಿಂದ ಮಾತುಗಳನ್ನು ಹೊರಡಿಸಲಸಮರ್ಥನಾದನು; ಮೋರೆಯನ್ನು ಮೇಲಕ್ಕೆತ್ತಿ ಭಾಮಿನಿಯ ಮುಖಭಾವವನ್ನು ನೋಡಿಕೊಳ್ಳಲಾರದವನಾದನು. ರಂಗರಾಯನು ತನ್ನ ಸ್ಥಿತಿಯು ಹೀಗೇಕೆ ಆಗಿರಬಹುದೆಂಬದನ್ನು ಭಾವಿಸಿ ತಿಳಿಯದಾದನು. ಕೊನೆಯಲ್ಲಿ ರಾಮನ ಮಾತೆತ್ತಿಯಾದರೂ ಹೆಂಡತಿಯೊಡನೆ ಮಾತಾಡಬೇಕೆಂದಾಶಿಸಿದನು; ಆದರೆ ಅದೂ ಸಾಧ್ಯವಾಗಲಿಲ್ಲ. ರಂಗರಾಯನು ಬೇಗ ಬೇಗನೆ ಊಟಮಾಡಿ ಯಾವ ಮಾತನ್ನೂ ಆಡದೆ ಹೊರಹೊರಟನು.

ಇಂಥ ಘೋರ ವಿಡಂಬನೆಯಾಗುತ್ತಿರಲಿಲ್ಲ.

ಮರುದಿನ ಮುಂಜಾವಿನಲ್ಲಿ ಭಾಮಿನಿಯ ತಮ್ಮನಾದ ವೆಂಕಟರಮಣನು ಬಂದನು. ಇವನ ವಯಸ್ಸು ಹದಿನಾಲ್ಕು-ಹದಿನೈದು ವರ್ಷಗಳದಿರಬಹುದು. ರಂಗರಾಯನು ಕೈಕಾಲು ಮೋರೆಗಳನ್ನು ತೊಳೆಕೊಳ್ಳಲೆಂದು ಬಚ್ಚಲ ಮನೆಗೆ ಹೊರಟ ಸಮಯದಲ್ಲಿ ಈ ಅಪರಿಚಿತ ಕಿಶೋರನನ್ನು ಕಂಡನು. ಯಾವುದೋ ಒಂದು ಆಶಂಕೆಯಿಂದ ಅವನ ಎದೆಯು ಡವಡವ ಎಂದು ಹಾರಹತ್ತಿತು. ಅವನು ನೀನಾರೆಂದು ಆ

ಕಿಶೋರನನ್ನು ಕೇಳಿದನು. ವೆಂಕಟರಮಣನು ತಾನಾರೆಂಬುದನ್ನು ಹೇಳಿ, "ಅಣ್ಣನಿಗೆ ಬರಲಿಕ್ಕೆ ಅನುಕೂಲವಿರಲಿಲ್ಲ. ಕಾರಣ ಅವನು ಅಕ್ಕನನ್ನು ಕರೆತರುವದಕ್ಕೆ ನನ್ನನ್ನೇ ಕಳುಹಿಕೊಟ್ಟನು." ಎಂದು ನುಡಿದನು.

ರಂಗರಾಯನು "ಆಗಲಿ, ಕರೆದುಕೊಂಡು ಹೋಗು" ಎಂದು ನುಡಿದು, ಮುಂದೆ ನಡೆದನು. ಕೈಕಾಲು ತೊಳೆದುಕೊಂಡು ತನ್ನ ಓದುವ ಕೋಣೆಯಲ್ಲಿ ಹೋಗಿ ಕುಳಿತುಕೊಂಡನು. ಅಲ್ಲಿ ಮುಂಜಾವಿನ ಉಪಾಹಾರದ ಸಾಹಿತ್ಯಗಳೆಲ್ಲ ಸಿದ್ಧವಾಗಿದ್ದುವು; ಆದರೆ ರಂಗರಾಯನು ಯಾವ ಪದಾರ್ಥವನ್ನೂ ತಿನ್ನಲಿಲ್ಲ. ಒಂದು ಕಪ್ಪು ಚಹವನ್ನು ಮಾತ್ರ ಕುಡಿದು, ಆರಾಮ ಕುರ್ಚಿಯ ಮೇಲೆ ಬಿದ್ದುಕೊಂಡನು. ಭಾಮಿನಿಯ ತೌರುಮನೆಯಿಂದ ಭಾಮಿನಿಯನ್ನು ಕರೆಯಲಿಕ್ಕೆ ಯಾರಾದರೂ ಬರುವರೆಂಬದು ರಂಗರಾಯನಿಗೆ ಮೊದಲೇ ಗೊತ್ತಿತ್ತು. ಹೀಗಿರಲು, ರಂಗರಾಯನು ವೆಂಕಟರಮಣನನ್ನು ನೋಡಿ ವಿಚಲಿತನಾಗುವ ಕಾರಣವಿರಲಿಲ್ಲ. ಮೇಲಾಗಿ ವೆಂಕಟರಮಣನು ಕರೆಯಬಂದಿರುವನೆಂದ ಬಳಿಕ ಭಾಮಿನಿಯು ತೌರುಮನೆಗೆ ಹೋಗಲೇಬೇಕೆಂಬ ನಿರ್ಬಂಧವೂ ಇರಲಿಲ್ಲ. ಭಾಮಿನಿಯು ತನ್ನ ಇಷ್ಟದಂತೆ ತೌರುಮನೆಗೆ ಹೋಗಬಹುದಿತ್ತು—ಇಲ್ಲವೆ ಕೊನೆಯವರೆಗೂ ತೌರುಮನೆಯನ್ನು ಸೇರಬಯಸದೆ, ಪತಿಗೃಹದಲ್ಲೇ ಚಿರಸ್ಥಾಯಿಕಳಾಗಬಹುದಿತ್ತು; ಆದರೆ ಈ ವಿಷಯವಾಗಿ ನಿಶ್ಚಯಾತ್ಮಕವಾದ ಯಾವುದೊಂದು ಮಾತು ಗೊತ್ತಾದ ಹೊರತು ರಂಗರಾಯನಿಗೆ ಸಮಾಧಾನವಾಗುವಂತಿರಲಿಲ್ಲ. ರಂಗರಾಯನು ಯೋಚಿಸಹತ್ತಿದನು: "ಭೀಮನು ಇಂದು ಮುಂಜಾವಿನಲ್ಲಿಯೆ ಬರುವೆನೆಂದು ಹೇಳಿದ್ದನು. ಇನ್ನೂವರೆಗೆ ಅದೇಕೆ ಬಂದಿರಲಿಕ್ಕಿಲ್ಲ? ಅವನು ಇಷ್ಟರಲ್ಲೇ ನಿನ್ನೆ ಹೇಳಿ ಹೋಗಿದ್ದ ಮಾತನ್ನು ಮರೆದಿರಬಹುದೆ? ಇಲ್ಲವೆ ಕೆಲಸಗಳ ಗಡಬಿಡಿಯಲ್ಲಿ ಇಲ್ಲಿಗೆ ಬರಲಿಕ್ಕೆ ಸಮಯವು ಸಿಕ್ಕಿರಲಿಕ್ಕಿಲ್ಲವೆ? ಅವನು ಬಂದಿದ್ದರೆ, ಯಾವುದೊಂದನ್ನು ನಿಷ್ಕರ್ಷಿಸಲಿಕ್ಕೆ ಒಳ್ಳೇ ಅನುಕೂಲವಾಗುತ್ತಿತ್ತು. ಯಾವುದೊಂದನ್ನು ಗೊತ್ತುಮಾಡಿಕೊಳ್ಳದೆ, ಕೇವಲ ಚಿಂತಾಸಮುದ್ರದಲ್ಲಿ

ಬಿದ್ದುಕೊಂಡಿರುವದು ಬಹು ತಾಪದಾಯಕವು! ಭೀಮರಾಯನು ನಿನ್ನೆ ಇನ್ನು ಭಾಮಿನಿಯು ತೌರುಮನೆಗೆ ಹೋಗುವದಿಲ್ಲೆಂದು ಹೇಳಿ ಹೋದನು. ಇಂದು ಭಾಮಿನಿಯ ತಮ್ಮನು ಕರೆಯ ಬಂದಿರುವನು. ಭಾಮಿನಿಯ ವಿಚಾರಪರಿವರ್ತನೆಯು ವೆಂಕಟರಮಣನಿಗೆ ತಿಳಿದಿರ ಲಿಕ್ಕಿಲ್ಲವೆ? ಇಲ್ಲವೆ ಭೀಮರಾಯನು ನನ್ನ ಮುಂದೆ ಸುಳ್ಳು ಹೇಳಿರ ಬಹುದೆ? ಭಾಮಿನಿಯನ್ನು ವಿಚಾರಿಸಿದರೆ, ಈ ಮಾತಿನ ನಿಷ್ಕರ್ಷೆಯಾಗಿ ಹೋಗುವುದು! ಆದರೆ ನಾನಾಗಿಯೆ ಹೋಗಿ ಅವಳನ್ನು ಕೆಣಕಿ ಮಾತಾಡಿ ಸುವುದು ಬೇಡ!” ರಂಗರಾಯನು ಗಡಿಯಾರದ ಕಡೆಗೆ ನೋಡಿದನು. ಒಂಬತ್ತು ಹೊಡೆದು ಹೋಗಿತ್ತು. ಭೀಮರಾಯನು ಇನ್ನೂ ಯಾಕೆ ಬಂದಿರಲಿಕ್ಕಿಲ್ಲೆಂದು ಬಾಗಿಲದ ಕಡೆಗೆ ನೋಡಿದನು. ಯಾರೋ ಬರುತ್ತಿರುವ ಸಪ್ಪಳವು ಕೇಳಿಸಿತು. ರಂಗರಾಯನು ಭೀಮರಾಯನೇ ಬರುತ್ತಿರಬಹುದೆಂದು ಭಾವಿಸಿದನು; ಆದರೆ ಆಗಂತುಕನು ಭೀಮ ರಾಯನಾಗಿರಲಿಲ್ಲ-ವೆಂಕಟರಮಣನಾಗಿದ್ದನು. ರಂಗರಾಯನು ಒಮ್ಮೆ ಮೋರೆಯನ್ನು ಮೇಲಕ್ಕೆತ್ತಿ ವೆಂಕಟರಮಣನನ್ನು ದೃಷ್ಟಿಸಿದನು. ಬಳಿಕ ಒಂದು ದೊಡ್ಡ ಹೊತ್ತಿಗೆಯನ್ನು ತಕ್ಕೊಂಡು ಓದುತ್ತ ಕುಳಿತು, ತಾನು ವಾಚನದಲ್ಲಿ ನಿಮಗ್ನನಾಗಿರುವಂತೆ ನಟಿಸಹತ್ತಿದನು.

ವೆಂಕಟರಮಣನು ಒಂದು ಕುರ್ಚಿಯ ಮೇಲೆ ಕುಳ್ಳಿರಬೇಕೆಂದು ಹೋದನು; ಆದರೆ ಅಲ್ಲಿ ಉಪಾಹಾರದ ಸಾಮಾನುಗಳು ಹರಡಿರುವ ದನ್ನು ಕಂಡು ದೂರ ಸರಿದು ಕ್ಷಣಕಾಲ ಸುಮ್ಮನೆ ನಿಂತುಕೊಂಡನು. ಬಳಿಕ ಇನ್ನೊಂದು ಕುರ್ಚಿಯನ್ನೆತ್ತಿಕೊಂಡು ಬೇರೊಂದು ಸ್ಥಳದಲ್ಲಿ ರಿಸಿ ಕುಳಿತನು. ಇವನು ರಂಗರಾಯನು ತನ್ನೊಡನೆ ಆನಂದದಿಂದ ಮಾತಾಡನೆಂಬದನ್ನು ತಿಳಿದವನಾಗಿದ್ದನು; ಆದರೂ ಬಂದ ಕಾರಣವನ್ನು ವಿಚಾರಿಸದಷ್ಟು ಕಠೋರನಾಗಿರಬಹುದೆಂಬದನ್ನು ಭಾವಿಸಿರಲಿಲ್ಲ. ರಂಗರಾಯನು ಮಾತಾಡದಿರುವುದನ್ನು ಕಂಡು ವೆಂಕಟರಮಣನು ತಾನೇ ಮಾತಾಡಲುಪಕ್ರಮಿಸಿದನು: “ಅಕ್ಕನು ಎರಡೂವರೆ ಗಂಟೆಯ ಗಾಡಿಯಿಂದ ಹೊರಡಬೇಕೆಂದಿರುವಳು.”

"ಹೊರಡಬೇಕೆಂದಿರುವಳೆ? ಹೊರಡಲಿ. ನಾನು ಬೇಡೆನ್ನುವದಿಲ್ಲ. ಅವಳ ಹೊರಡುವಿಕೆಗೆ ನನ್ನಿಂದ ಪ್ರತಿಬಂಧವಾದೀತೆಂದು ಅವಳು ಬೆದರಿರುವಳೇನು?'' ರಂಗರಾಯನು ಕೇಳಿದನು.

ವೆಂಕಟರಮಣನಿನ್ನೂ ಹುಡುಗನು. ರಂಗರಾಯನ ಪ್ರಶ್ನೆಗೆ ಯಾವ ಉತ್ತರವನ್ನು ಕೊಡಬೇಕೆಂಬುದು ಅವನಿಗೆ ಗೊತ್ತಾಗಲಿಲ್ಲ. ಅವನು ಕ್ಷಣಕಾಲ ಸುಮ್ಮನಿದ್ದು, ಬಳಿಕ 'ಹಾಗೇನೂ ಇಲ್ಲ' ಎಂದು ಉಚ್ಚರಿಸಿ, ಮತ್ತೆ ಸುಮ್ಮನಾದನು.

ಸಮೀಪದ ಕಿಟಕಿಯ ಬಳಿಯಲ್ಲಿ ಬಳೆಗಳ ಮೃದುಸ್ವರವಾಗಹತ್ತಿರುವದು ರಂಗರಾಯನಿಗೆ ಕೇಳಿಸಿತು. ರಂಗರಾಯನು ಭಾಮಿನಿಯೇ ಬಂದು ನಿಂತಿರಬೇಕೆಂದು ಭಾವಿಸಿದನು. ಇವನ ಕೋಪದ ಉತ್ತಾಪವು ಮತ್ತಷ್ಟು ಮೇಲೇರಿತು. ಮಾತಾಡಹತ್ತಿದನು:-"ಅವಳು ಹೋಗುವದಕ್ಕೆ ನಾನಾವಾಗಲೂ ಬೇಡೆಂದು ಅಂದವನಲ್ಲ. ಅವಳು ತನಗೆ ಇಷ್ಟವಿದ್ದಾಗ ಹೊರಟು ಹೋಗಲಿ.''

ವೆಂಕಟರಮಣನು ಮಾತಾಡದೆ ಸುಮ್ಮನಿದ್ದನು. ರಂಗರಾಯನು "ನಿಮ್ಮ ಅಣ್ಣನು ಬರುವನೆಂಬ ಸುದ್ದಿಯನ್ನು ಕೇಳಿದ್ದೆನು. ಅವನೇಕೆ ಬರಲಿಲ್ಲ?'' ಎಂದು ಕೇಳಿದನು.

ವೆಂಕಟರಮಣನು ಸಂಕೋಚದಿಂದ ಮೆಲ್ಲ ಮೆಲ್ಲನೆ ಉಚ್ಚರಿಸಹತ್ತಿದನು:—"ಅವನು ನನ್ನನ್ನು ಕಳುಹಿಕೊಡಲಿಕ್ಕೂ ಮನಸ್ಸಿಲ್ಲದವನಾಗಿದ್ದನು."

"ಅದೇಕೆ?'' ರಂಗರಾಯನು ಕೇಳಿದನು. ವೆಂಕಟರಮಣನು ಮಾತಾಡಲಿಲ್ಲ. ರಂಗರಾಯನು ಮತ್ತೆ ಮಾತಾಡಹತ್ತಿದನು:-"ನೀನು ಸಣ್ಣ ಹುಡುಗ. ನಿನ್ನ ಮುಂದೆ ಎಲ್ಲ ಮಾತುಗಳನ್ನೂ ಮಾತಾಡಲಿಕ್ಕೆ ಬರುವಂತಿಲ್ಲ--ಮಾತಾಡುವದರಿಂದ ಪ್ರಯೋಜನವೂ ಇಲ್ಲ! ಇಲ್ಲಿಂದ ನೀನು ತಿರುಗಿ ಹೋದ ಬಳಿಕ ನಿಮ್ಮ ಅಣ್ಣನು ನಿನ್ನನ್ನು ವಿಚಾರಿಸಬಹುದು. ಒಂದುವೇಳೆ ಅವನು ಹೀಗೆ ವಿಚಾರಿಸಿದರೆ, ಹೇಳುವದಕ್ಕಾಗಿ ನಾನು ಒಂದೆರಡು ಮಾತುಗಳನ್ನು ನಿನ್ನ ಮುಂದೆ ನುಡಿಯು

ವೆನು. ಈ ವಿಷಯದಲ್ಲಿ ಭಾಮಿನಿಯು ದೋಷರಹಿತಳು. ಅಪರಾಧ ವೆಲ್ಲವೂ ನನ್ನದು! ನಾನು ಭಾಮಿನಿಯನ್ನು ಮತ್ತೆ ಕರೆಸಿಕೊಂಡದ್ದು ಸಂಪೂರ್ಣ ಅನುಚಿತವು!"

ರಂಗರಾಯನು ಕ್ಷಣಕಾಲ ಸುಮ್ಮನಿದ್ದು, ಬಳಿಕ ಮತ್ತೆ ಹೇಳ ಹತ್ತಿದನು:—"ಅಪ್ಪನು ದೊಡ್ಡ ತಪ್ಪು ಮಾಡಿ ಹೋಗಿದ್ದನು. ಬಹು ದಿನಗಳ ತರುವಾಯ ಆ ತಪ್ಪನ್ನು ಸುಧಾರಿಸಿಕೊಳ್ಳುವ ಅನುಕೂಲ ತೆಯು ನನಗೆ ತಾನೇ ತಾನಾಗಿ ದೊರೆಯಿತು. ಆಗ ನಾನು ಮುನ್ನಿನ ದೋಷವನ್ನು ಸುಧಾರಿಸಿಕೊಳ್ಳುವ ಸಂಕಲ್ಪ ಮಾಡಿಕೊಂಡೆನು. ಭಾಮಿನಿಯನ್ನು ಕರೆಕಳುಹಿದೆನು. ಭಾಮಿನಿಯೂ ಬಂದಳು; ಆದರೆ ಇದರಿಂದ ನನಗಾಗಲಿ, ಅವಳಿಗಾಗಲಿ ಹಿತವಾಗಲಿಲ್ಲ. ಒಂದು ದೋಷವನ್ನು ಮುಚ್ಚುವದರಲ್ಲಿದ್ದ ನನ್ನೆದುರಿಗೆ ನೂರಾರು ದೋಷಗಳು ತಾವೇ ತಾವಾಗಿ ಆಗಮಿಸಿ ಥೈ ಥೈ ಎಂದು ಕುಣಿದಾಡಹತ್ತಿದುವು.'

ವೆಂಕಟರಮಣನು ಇದಕ್ಕೆ ಏನೆಂದು ಉತ್ತರ ಕೊಡಬೇಕು? ಆವನು 'ಮೌನಂ ಸರ್ವತ್ರ ಸಾಧನಂ' ಎಂಬ ಮಂತ್ರವನ್ನು ಜಪಿಸುತ್ತ ಕುಳಿತಿದ್ದನು. ಈ ಸಮಯದಲ್ಲಿ ಭೀಮರಾಯನು ಬಂದು ಒಳ ಹೊಕ್ಕನು. ರಂಗರಾಯನು ಭೀಮರಾಯನನ್ನು ನೋಡಿದನು; ಆದರೆ ತನ್ನ ವಾಕ್ಪ್ರಹಾರವನ್ನು ತಡೆಯಲಿಲ್ಲ. ನಾಲಿಗೆಗೆ ಒಮ್ಮೆ ಕಠೋರ ವಾಕ್ಯಗಳನ್ನುಚ್ಚರಿಸಲಿಕ್ಕೆ ಸ್ವಾತಂತ್ರ್ಯವಿತ್ತರೆ ಸಾಕು. ಮುಂದಿನ ಮಾತುಗಳು ತಾವೇ ತಾವಾಗಿ ಕಠೋರತರ, ಕಠೋರತಮವಾಗುತ್ತ ನಡೆಯುವವು. ಭಾಮಿನಿಯು ಹೊರಗೆ ನಿಂತಿದ್ದಳು. ಇವಳ ಮನ ಸ್ಸನ್ನು ನೋಯಿಸುವ ಉತ್ತೇಜನಕ್ಕೊಳಗಾಗಿ, ಮೈಮ್ಮರೆದಿದ್ದ ರಂಗ ರಾಯನು ಮತ್ತೆ ಮಾತಾಡಹತ್ತಿದನು:—"ನಾನು ಒಂದು ದಿನ ನಿನ್ನ ಸಹೋದರಿಯನ್ನು ಲಗ್ನಮಾಡಿಕೊಂಡದ್ದೇನೋ ನಿಜ; ಆದರೆ ಅವಳು ನನ್ನ ಸಹಧರ್ಮಿಣಿಯೆಂದೂ ಆಗಳು! ನಮ್ಮಿಬ್ಬರ ಶಿಕ್ಷಣ-ದೀಕ್ಷೆ-ಸಮಾಜ-ಧರ್ಮ ಮೊದಲಾದವು ಒಂದೇ ವಿಧವಲ್ಲವಿಷ್ಟೇ ಅಲ್ಲ; ಪರ ಸ್ಪರ ಹೊಂದಿಕೆಯಿಲ್ಲದವು. ನಾನು ನನ್ನ ಮನಸ್ಸಿನ ವಿರುದ್ಧವಾಗಿಯೂ

ಆವಳನ್ನು ಮನೆಯಲ್ಲಿಟ್ಟುಕೊಂಡು ನನ್ನ ಮನೆಯನ್ನು ಆಚಾರ್ಯರ ಮನೆಯಲ್ಲಿ ರೂಪಾಂತರಗೊಳಿಸಿಕೊಳ್ಳಬಹುದಾಗಿತ್ತು; ಆದರೆ ನಾನು ಅದಕ್ಕೆ ಸಮ್ಮತಿಸುವುದರಿಂದ ನನ್ನ ಏಕಮಾತ್ರ ಸಹೋದರಿಯು ದುಃಖದಿಂದಲೂ ಕ್ಷೋಭದಿಂದಲೂ ನನ್ನನ್ನು ತ್ಯಜಿಸಿ, ನನಗೆ ಪರಕೀಯಳಾಗಿ ಹೋಗುವಳು; ಇದ್ದೊಬ್ಬ ಮಗನು ಕೆಟ್ಟ ಶಿಕ್ಷಣದಲ್ಲಿ ಬೆಳೆದು, ಕೆಟ್ಟದ್ದನ್ನು ಅನುಕರಿಸಿ, ಕೆಲಸಕ್ಕೆ ಬಾರದವನಾಗಿ ಹೋಗುವನು. ನಾನಿದನ್ನು ಎಷ್ಟು ಮಾತ್ರಕ್ಕೂ ಸಹಿಸಲಾರದವನಾಗಿರುವೆನು! ನಾನು ಇಂತಹ ಸಂಕಟದಲ್ಲಿ ಸಿಕ್ಕಿದ್ದರೂ. ಭಾಮಿನಿಗೆ ನನ್ನ ಮನೆಬಿಟ್ಟು ಹೋಗೆಂದು ಹೇಳಲಾರದವನಾಗಿದ್ದೆನು; ಆದರೆ ಅವಳು ತಾನೇ ತಾನಾಗಿ ಮತ್ತೆ ತೌರುಮನೆಗೆ ಹೋಗುವೆನೆಂದು ನುಡಿದು, ನನ್ನ ಮೇಲಿನ ದೊಡ್ಡ ಭಾರವನ್ನು ಕಡಿಮೆ ಮಾಡಿರುವಳು. ಇದಕ್ಕಾಗಿ ನಾನು ಅವಳಿಗೆ ನನ್ನ ಕೃತಜ್ಞತೆಯನ್ನು ಎಷ್ಟುಬಗೆಯಿಂದ ಪ್ರಕಟಿಸಿದರೂ ಸಾಲದಾಗಿದೆ!"

ಭೀಮರಾಯನು ವಿಸ್ಮಯದಿಂದ ಮಾತಾಡಲಾರದವನಾಗಿ ರಂಗರಾಯನ ಮುಖದ ಕಡೆಗೆ ನೋಡುತ್ತಲಿದ್ದನು. ಲಜ್ಜಾಶೀಲನೂ, ದುರ್ಬಲ ಪ್ರಕೃತಿಯವನೂ ಆದ ರಂಗರಾಯನು ಹೆರವರ ಹೃದಯಕ್ಕೆ ತಾಗುವ ಭಯಂಕರ ಮಾತುಗಳನ್ನೆಂದೂ ಉಚ್ಚರಿಸಿದವನಲ್ಲ. ಇಂತಹ ರಂಗರಾಯನು ಇಂದು ಇದೇನು ನುಡಿಯುತ್ತಿರುವನು? ಭಾಮಿನಿಯ ಕಿರಿತಮ್ಮನು ಭಾಮಿನಿಯನ್ನು ಕರೆಯಬಂದುದು ಭೀಮರಾಯನಿಗೆ ಮೊದಲೇ ತಿಳಿದಿತ್ತು; ಮತ್ತು ಭೀಮರಾಯನು ಆ ಕೋಣೆಯಲ್ಲಿ ಕುಳಿತಿದ್ದ ಆ ಅಪರಿಚಿತ ಬಾಲಕನನ್ನು ನೋಡಿ, ಇವನೇ ಭಾಮಿನಿಯ ತಮ್ಮನಾಗಿರಬೇಕೆಂದು ಊಹಿಸಿದ್ದನು. ರಂಗರಾಯನು ಶ್ಯಾಲಕನ ಸಮ್ಮುಖದಲ್ಲಿ ಹೀಗೇಕೆ ಮಾತಾಡುತ್ತಿರಬಹುದು? ಎಂದು ಬಲವಾಗಿ ಯೋಚಿಸಿ, ಭೀಮರಾಯನು ವೆಂಕಟರಮಣನ ಹತ್ತಿರ ಹೋಗಿ, "ತಮ್ಮಾ ಈ ಮಾತುಗಳಲ್ಲಿಯ ಒಂದು ಅಕ್ಷರವು ಸಹ ನಿನ್ನ ಅಕ್ಕನಿಗೆ ತಿಳಿಯದಂತೆ ಮಾಡು," ಎಂದು ಮೆಲ್ಲನೆ ನುಡಿದನು.

ವೆಂಕಟರಮಣನು ಕಿಟಕಿಯ ಕಡೆಗೆ ಕೈ ಮಾಡಿ ತೋರಿಸಿ "ಅದೋ, ಅಲ್ಲಿ ಆಕ್ಕನಿರುವಳು. ಎಲ್ಲವನ್ನೂ ಕೇಳಿಕೊಂಡಿರುವಳು. ನಾನು ಹೇಳುವ ಪ್ರಯೋಜನವೇ ಇಲ್ಲ." ಎಂದು ನುಡಿದನು.

"ಹೊರಗೆ ನಿಂತಿರುವಳೇ? ಎಲ್ಲಿ?" ಭೀಮರಾಯನು ಕೇಳಿದನು.

ವೆಂಕಟರಮಣನಿಗೆ ಮಾತಾಡಲವಕಾಶಕೊಡದೆ, ರಂಗರಾಯನು ಮಾತಾಡಹತ್ತಿದನು: "ಆಹುದು; ನಾನು ಬಲ್ಲೆನು. ಅವಳು ಅಲ್ಲಿ ನಿಂತು, ನಾನಾಡಿದ ಮಾತುಗಳನ್ನು ಕೇಳಿಕೊಂಡಿರುವಳು."

ಭೀಮರಾಯನ ಮೋರೆಯು ಕಪ್ಪಿಟ್ಟಿತು. ಸ್ತಬ್ಧವಾಗಿ ನಿಂತು ಬಿಟ್ಟನು.

ವೆಂಕಟರಮಣನು ಅಂದಿನ ಅಪರಾಹ್ಣ ಸಮಯದಲ್ಲಿ ಭಾಮಿನಿಯನ್ನು ಕರೆದುಕೊಂಡು ಸ್ಟೇಶನ್ನಿಗೆ ಹೊರಟನು. ಈ ಸಮಯವಲ್ಲಿ ರಾಮನು ತನ್ನ ಆತ್ತೆಯ ಮನೆಯಲ್ಲಿದ್ದನು. ರಂಗರಾಯನು ಕಾಲೇಜದ ಕೋಣೆಯಲ್ಲಿದ್ದನು. ಭೀಮರಾಯನು ಕೋರ್ಟಿನ ಬಾರ ಲಾಯಬ್ರರಿಯಲ್ಲಿ ಕುಳಿತಿದ್ದನು.

ಮರುದಿನ ಮುಂಜಾವಿನ ಚಹಾಪಾನ ಸಮಾರಂಭದ ಸಮಯದಲ್ಲಿ ಸುಭದ್ರೆಯು ಪತಿಯ ಮೇಲೆ ಕಡೆಗಣ್ಣಿನ ನೋಟವನ್ನು ಬೀರಿ: "ಅಣ್ಣನು ಏನು ಮಾಡಿದನೆಂಬದನ್ನು ನೋಡಿದಿರಾ?" ಎಂದಂದಳು.

"ನೋಡದೇನು? ಎಲ್ಲವನ್ನೂ ನೋಡಿರುವೆನು. ಮೊದಲು ಪಶ್ಚಾತ್ತಾಪಕ್ಕೆ ಗುರಿಯಾಗುವ ಕೆಲಸವನ್ನು ಮಾಡಿದ್ದಾನೆ. ಬಳಿಕ ಅದನ್ನು ಮರೆಯುವದಕ್ಕಾಗಿ ಪುಸ್ತಕವನ್ನೋದುತ್ತ ಕುಳಿತಿದ್ದಾನೆ."

"ನೀವು ಇಂತಹ ಕೆಲಸವನ್ನು ಯಾವಾಗ ಮಾಡುವಿರಿ?" ಸುಭದ್ರೆಯು ನಗೆಮೊಗದಿಂದ ಕೇಳಿದನು.

"ಯಾವುದನ್ನು? ಪಶ್ಚಾತ್ತಾಪ ಪಡುವ ಕಾರ್ಯವನ್ನೊ-ಪುಸ್ತಕ ಓದುವ ಕೆಲಸವನ್ನೊ?"

"ಇನ್ನು ಪುಸ್ತಕ ಓದುವ ಕೆಲಸವು ನಿಮ್ಮಿಂದಾಗದು. ಪಶ್ಚಾತ್ತಾಪ ಹೊಂದುವ ಕೆಲಸವನ್ನು ಮಾಡಿರಿ."

“ನಾನು ಮಾಡುವುದೇನು? ನೀನು ಅಣ್ಣನನ್ನು ಕರೆಸಿಕೊಂಡು ತೌರುಮನೆಗೆ ಹೋಗಿಬಿಟ್ಟರೆ, ತಾನೇ ತಾನಾಗಿ ಘಟಿಸುವುದು.”

ಸುಭದ್ರೆಯ ಮನಸ್ಸು ಇಂದು ಒಳ್ಳೇ ಪ್ರಸನ್ನವಾಗಿತ್ತು. ಕಾರಣ ಆವಳು ಸಿಟ್ಟಿಗೇಳದೆ:—“ಇಂತಹ ಕೆಲಸವನ್ನು ನಾನೆಂದಿಗೂ ಮಾಡ ಲಾರೆನು; ಯಾಕೆಂದರೆ, ಧರ್ಮದ ಸಂಕುಚಿತ ವಿಚಾರಕ್ಕೊಳಗಾಗಿ ವ್ರತ-ಉಪವಾಸಗಳನ್ನೂ, ಮಡಿ-ಮೈಲಿಗೆಗಳನ್ನೂ ಆಚರಿಸುವ ಶಿಕ್ಷಣವು ಬಾಲ್ಯಕಾಲದಲ್ಲಿ ನನಗೆ ದೊರೆತಿಲ್ಲ.” ಎಂದು ನುಡಿದಳು.

ಹೆಂಡತಿಯ ಮಾತು ಭೀಮರಾಯನ ಮನಸ್ಸಿಗೆ ಬರಲಿಲ್ಲ. ಇವನಿಗೆ ಕೋಪವುಂಟಾಯಿತು; ಆದರೂ ಅದನ್ನು ತೋರ್ಪಡಿಸದೆ, ಸಹಜ ಸ್ವರದಿಂದ ಮಾತಾಡಹತ್ತಿದನು:“ನೀನು ಆ ತರದ ಶಿಕ್ಷಣದ ಪ್ರಯೋಗವನ್ನು ಹೊಂದದಿರುವದು ನಿನ್ನ ಪರಮ ದುರ್ಭಾಗ್ಯದ ಸಂಗತಿಯೆಂದು ತಿಳಿ. ನೀನು ಹಾಗೆ ಶಿಕ್ಷಣವನ್ನು ಹೊಂದಿದ್ದರೆ, ನಿನ್ನ ಅಣ್ಣನು ಇಂದು ಇಂತಹ ಘೋರ ವಿಡಂಬನೆಯನ್ನನುಭವಿಸುವ ಪ್ರಸಂಗವನ್ನು ತಂದು ಕೊಳ್ಳುತ್ತಿದ್ದಿಲ್ಲ.” ಭೀಮರಾಯನು ಹೆಂಡತಿಯೊಡನೆ ಮಾತು ಬಳಿಸ ಲಾರದವನಾಗಿ ಬೇರೆ ಕಡೆಗೆ ಹೋಗಿಬಿಟ್ಟನು.

ಇಲ್ಲ, ನಾನು ಪರಿಹಾಸ ಮಾಡಬಯಸಿದವನಲ್ಲ.

ಮಧ್ವರಾಯನ ವಿದುಷಿಯಾದ ಮಗಳನ್ನು ರಂಗರಾಯನಿಗೆ ಕೊಡುವ ಆಲೋಚನೆಯು ಮತ್ತೆ ತಲೆದೋರಿತು. ಸುಭದ್ರೆಯು ಪತಿಯು ಕೋಪಗೊಳ್ಳುವನೆಂಬ ಭಯದಿಂದ ಆ ಆಲೋಚನೆಯಲ್ಲಿ ಪ್ರತ್ಯಕ್ಷ ರೀತಿಯಿಂದ ಸೇರಿರಲಿಲ್ಲ; ಆದರೆ ಪರೋಕ್ಷರೀತಿಯಿಂದ ಅವಳು ಆ ಆಲೋಚನೆಗೆ ತುಂಬ ಸಹಾನುಭೂತಿಯನ್ನು ತೋರಿಸುತ್ತಿದ್ದಳು. ಕನ್ಯಾಪಕ್ಷದ ಜನರು ಭೀಮರಾಯನಿಗೆ ದುಂಬಾಲಬಿದ್ದರು. ಭೀಮರಾಯನು ಅವರ ಆಗ್ರಹವನ್ನು ಮುರಿಯಲಾರದೆ, ಒಂದು ದಿನ ರಂಗರಾಯನನ್ನು ಸಂದರ್ಶಿಸಿದನು; ಮದುವೆಯ ಮಾತೆತ್ತಿದನು; ಆದರೆ

ರಂಗರಾಯನು ಈ ಮೂರನೆಯ ಮದುವೆಗೆ ಒಪ್ಪದೆ, ಇಂತು ಹೇಳಿದನು: “ಆಯುಷ್ಯದ ಬಹು ಭಾಗವು ಗತಿಸಿ ಹೋಗಿದೆ—ಇನ್ನು ಸ್ವಲ್ಪ ಭಾಗವು ಉಳಿದಿದೆ. ಈ ಅಲ್ಪಕಾಲದ ಸಲುವಾಗಿ ಮತ್ತೂ ಹೊಸ ಹೊರೆಯನ್ನು ಹೇರಿಕೊಳ್ಳಲಾರೆನು.—ಮೂರನೆಯ ಮದುವೆಯನ್ನು ಮಾಡಿಕೊಂಡು ಪ್ರಾಪಂಚಿಕ ತಾಪಕ್ಕೊಳಗಾಗಲಾರೆನು. ರಾಮನಿದ್ದಾನೆ. ನೀವೆಲ್ಲರೂ ಅವನಿಗೆ ಆಶೀರ್ವದಿಸಿರಿ. ಅದರಿಂದ ನಮ್ಮ ವಂಶವಲ್ಲಿಯು ಹಬ್ಬಲಿ!”

ಭೀಮರಾಯನು ರಂಗರಾಯನ ಈ ನಿಷ್ಕಪಟದ ನುಡಿಗಳನ್ನು ಕೇಳಿದನು. ನಿಜವಾದ ವೇದನೆಯನ್ನನುಭವಿಸಿದನು. ಮುಂದೆ ಮಾತ ಬಳೆಸದೆ ಹೋಗಿಬಿಟ್ಟನು. ತರುವಾಯ ಭೀಮರಾಯನು ಪ್ರತಿದಿನ ಕಚೇರಿಯ ಕೆಲಸವು ತೀರುತ್ತಲೆ ರಂಗರಾಯನ ಮನೆಗೆ ಹೋಗಹತ್ತಿದನು. ಮನೆಯಲ್ಲಿ ಗೃಹಿಣಿಯಿಲ್ಲ. ಕೇವಲ ದಾಸದಾಸಿಯರಿಂದ ಬಾಳುವೆಯು ಸಾಗಿತ್ತು. ದಿನಗಳು ಕ್ರಮಿಸುತ್ತ ನಡೆದಂತೆ, ಸಂಸಾರದ ಅವ್ಯವಸ್ಥೆಯು ಹೆಚ್ಚುತ್ತ ನಡೆದಿತ್ತು. ಭೀಮರಾಯನು ರಂಗರಾಯನ ಈ ಗೃಹಸ್ಥಿತಿಯನ್ನು ಕಂಡು ಕ್ಲೇಶಕ್ಕೊಳಗಾದನು. ಒಂದು ತಿಂಗಳಾದ ಮೇಲೆ ಮತ್ತೆ ಮದುವೆಯ ಪ್ರಸ್ತಾಪ ತೆಗೆದು ಹೇಳಹತ್ತಿದನು: “ರಂಗ, ನಾನು ಇನ್ನು ನಿನ್ನ ಈ ಪ್ರಪಂಚದ ಇರವನ್ನು ನೋಡಲಾರದವನಾಗಿದ್ದೇನೆ. ಮನೆಯಲ್ಲಿ ಮಮತೆಯ ಮಡದಿಯು ಇದ್ದ ಹೊರತು ಬಾಳುವೆಯನ್ನು ಮಾಡುವದು ಬಹು ಕಷ್ಟಕರವು. ಅದರಲ್ಲೂ ಮುಪ್ಪಿನ ವಯಸ್ಸಿನಲ್ಲಿ........”

ಸುಶೀಲೆಯು ಇಂದು ಭೀಮರಾಯನ ಸಂಗಡ ಬಂದಿದ್ದಳು ಇವಳು ನಡುವೆ ಬಾಯಿಹಾಕಿ ಮಾತಾಡಹತ್ತಿದಳು: “ರಂಗಣ್ಣನು ಮುದುಕನಾಗಲಿಕ್ಕೆ ಇನ್ನೂ ಬಹಳ ಅವಕಾಶವಿದೆ; ಅಷ್ಟರಲ್ಲಿ ಅಕ್ಕನು ಮತ್ತೆ ಬಾರದಿರಳು. ಕುಪಿತಳಾಗಿ ಹೋದ ಅಕ್ಕನು ತೌರುಮನೆಯಲ್ಲಿ ಎಷ್ಟು ದಿವಸ ಇದ್ದಾಳು?” ಸುಶೀಲೆಯು ಒಮ್ಮೆ ಅಣ್ಣನ ನೋರೆಯ ಕಡೆಗೆ ನೋಡಿದಳು. ಮತ್ತೊಮ್ಮೆ ರಂಗರಾಯನ ಮುಖದ ಕಡೆಗೆ

ನೋಡಿದಳು. ಯಾರೂ ಉತ್ತರ ಕೊಡಲಿಲ್ಲ. ರಂಗರಾಯನ ಮುಖವು ಬಾಡಹತ್ತಿತ್ತು; ಆದರೆ ಅವನು ಸುಶೀಲೆಯು ಉತ್ತರದ ಆಶೆಯಿಂದ ತನ್ನ ಕಡೆಗೆ ನೋಡುತ್ತ ಕುಳಿತಿರುವದನ್ನು ಕಂಡು, "ಇಲ್ಲ. ಇನ್ನು ಅವಳು ಬರುವದಿಲ್ಲ." ಎಂದು ನುಡಿದನು.

ಸುಶೀಲೆಯು ಈ ಮಾತನ್ನು ನಂಬದಾದಳು. ಅವಳು ಅವಿಶ್ವಾಸ ಸೂಚಕ ಸ್ವರದಿಂದ: "ಅಕ್ಕನು ಬರುವದಿಲ್ಲವೆ? ಯಾಕೆ ಬರುವದಿಲ್ಲ? ಬಂದೇ ಬಿಡುವಳು- ಬರಲಿಕ್ಕೆ ವಿಲಂಬವನ್ನು ಮಾಡಳು. ಈ ತಿಂಗಳು ಮುಗಿಯುವಷ್ಟರಲ್ಲಿ ಬಂದರೂ ಬರಬಹುದು" ಎಂದು ನುಡಿದು, ತುಸ ಹೊತ್ತು ಸುಮ್ಮನಾದಳು. ಬಳಿಕ "ಅಣ್ಣಾ, ಅಕ್ಕನು ಬರಲಾರಳೆ?" ಎಂದು ಭೀಮರಾಯನನ್ನು ಕೇಳಿದಳು.

ಭಾಮಿನಿಯು ಪತಿಗೃಹಕ್ಕೆ ಮರಳಿ ಬರುವದು ಎಂತಹ ಕಠಿಣ ವೆಂಬುದನ್ನು ಭೀಮರಾಯನು ಅರಿತವನಾಗಿದ್ದನು. ಭಾಮಿನಿಯು ತೌರುಮನೆಗೆ ಹೊರಡುವ ದಿವಸ ರಂಗರಾಯನಾಡಿದ ಮಾತುಗಳ ಮಾಲೆಯನ್ನು ಅವನು ಹೃದಯದಲ್ಲಿ ಧರಿಸಿಕೊಂಡಿದ್ದಳು. ಭಾಮಿನಿಯು ಆ ಮಾತುಗಳನ್ನೆಲ್ಲ ಮರೆದು, ಮತ್ತೆ ಪತಿಸಾನಿಧ್ಯವನ್ನು ಸೇರಬಯಸ ಬಹುದೆಂಬುದನ್ನು ಭೀಮರಾಯನು ನಂಬಲಾರದವನಾಗಿದ್ದನು. ಮೊದಲು ರಂಗರಾಯನ ತಂದೆಯು ಭಾಮಿನಿಯ ವಿಷಯದಲ್ಲಿ ಅವಿ ಚಾರತೆಯಿಂದ ಆಚರಿಸಿದ್ದನು. ಭಾಮಿನಿಯು ಮತ್ತೆ ಪತಿಗೃಹವನ್ನು ಸೇರಿದಾಗ ಸುಭದ್ರೆಯು ಹೊಟ್ಟೆಕಿಚ್ಚಿನಿಂದ ಅವಳನ್ನು ಹಲವು ಬಗೆ ಯಾಗಿ ಅಪಮಾನಗೊಳಿಸಿದ್ದಳು. ಇವರಿಬ್ಬರ ಕೃತಿಯ ಮಂದಿರಕ್ಕೆ ಶಿಖರವನ್ನು ಕಟ್ಟುವುದಕ್ಕಾಗಿ ರಂಗರಾಯನು ಅಂದಿನ ದಿನ ವಾಗ್ಬಾಣ ಗಳನ್ನು ಒಳ್ಳೇ ಕಸುವಿನಿಂದ ಪ್ರಯೋಗಿಸಿದ್ದನು. ಹೀಗಿದ್ದರೂ ಭೀಮ ರಾಯನು ಭಾಮಿನಿಯ ಸ್ವಗೃಹತ್ಯಾಗವನ್ನು ಸಮರ್ಥಿಸಲಾರದವನಾಗಿ ದ್ದನು. ಒಳ್ಳೇ ಸ್ವಭಾವದ ಭಾಮಿನಿಯು-ಹಿಂದೂಧರ್ಮದ ಶಿಕ್ಷಣ ವನ್ನೂ, ಸಂಸ್ಕಾರವನ್ನೂ ಹೊಂದಿದ ಸತಿಯು-ಪತಿಸಹವಾಸವನ್ನು ಎಂತಹ ಪ್ರಸಂಗವೊದಗಿದರೂ ತ್ಯಜಿಸಲಾಗದೆಂಬುದು ಭೀಮರಾಯನ

ಸ್ಪಷ್ಟ ಮತವಾಗಿತ್ತು. ಭೀಮರಾಯನು ಯೋಚಿಸಹತ್ತಿದನು:'ಪುರಾಣ ಮತಾಭಿಮಾನಿಯಾದ ಭಾಮಿನಿಯು ಹಾಗೆ ಒಮ್ಮೆಲೆ ಪತಿಸಾನ್ನಿಧ್ಯ ವನ್ನು ತ್ಯಜಿಸಿ ಹೋದದ್ದು ಹೇಗೆ? ಇಂತಹ ಹೆಂಗಳೆಯರಿಗೆ ಪತಿ ಯಂತೆ ಧರ್ಮವೂ ಪ್ರೀತಿಯ ವಿಷಯವು. ಭಾಮಿನಿಯು ಪತಿಯಿಂದ ತನ್ನ ಧರ್ಮಾಚರಣೆಗೆ ವಿರೋಧವಾಗುತ್ತಲೆ, ಸಹಿಸದವಳಾಗಿ ಮತ್ತೆ ತೌರುಮನೆಯನ್ನು ಸೇರಲು ಮನಸ್ಸು ಮಾಡಿರಬಹುದು........"

ಸುಶೀಲೆಯು ಪ್ರಶ್ನೆಮಾಡಿ ಅಣ್ಣನ ಮೋರೆಯ ಕಡೆಗೆ ನೋಡು ತ್ತಿದ್ದಳು. ಅಣ್ಣನಿಂದ ಉತ್ತರವು ದೊರೆಯದಿರುವುದನ್ನು ನೋಡಿ ಆಶ್ಚರ್ಯಾನ್ವಿತಳಾಗಿ: "ಅಣ್ಣಾ, ನನಗೆ ಉತ್ತರ ಕೊಡಲಿಲ್ಲವಲ್ಲ?" ಎಂದು ಕೇಳಿದಳು.

"ನೀನೇನು ಕೇಳಿದೆ?" ಭೀಮರಾಯನು ವಿಚಾರತಂದ್ರಿಯಿಂ ದೆಚ್ಚೆತ್ತು ಕೇಳಿದನು.

"ನಾನು ಅಕ್ಕನು ಈ ತಿಂಗಳ ಕೊನೆಯೊಳಗಾಗಿ ಮತ್ತೆ ಇಲ್ಲಿಗೆ ಬರುವಳೆಂದು ಅನ್ನುತ್ತಿರುವೆನು. ನೀನು ನನ್ನ ಈ ಮಾತನ್ನು ನಂಬುವ ದಿಲ್ಲವೆ?"

ಭೀಮರಾಯನು ತಂಗಿಯ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಡ ದೆ, ಬೇರೊಂದು ವಿಧವಾಗಿ ಮಾತಾಡಹತ್ತಿದನು:—"ಅವಳು ಬರಲಿ-ಬಾರದಿರಲಿ; ಬರುವದಿಲ್ಲೆಂದೇ ಈಗ ನಾವು ತಿಳಯೋಣ. ರಂಗ ರಾಯನು ಅವಳಿಲ್ಲದಿದ್ದರೂ ಬಹು ದಿವಸ ಬಾಳುವೆ ಸಾಗಿಸಿದ್ದನು— ಮುಂದೆಯೂ ಸಾಗಿಸುವನು. ಕೇವಲ ಅವಳನ್ನೇ ನಂಬಲಿಕ್ಕಾದೀತೇ? ಪ್ರಪಂಚವು ಸುಸೂತ್ರವಾಗಿ ಸಾಗುವದಕ್ಕೆ ಬೇರೊಂದು ಯುಕ್ತಿಯನ್ನು ಹುಡುಕಿಕೊಳ್ಳಬೇಕು. ಆ ದಾರಿಯಿಂದ ಮುಂದೆ ಸಾಗಬೇಕು."

ಸುಶೀಲೆಯು ಅಣ್ಣನ ಮಾತಿನ ಇಂಗಿತವನ್ನು ಸರಿಯಾಗಿ ತಿಳಿ ಯದೆ, ಸುಮ್ಮನೆ ಅಣ್ಣನ ಮೋರೆಯನ್ನು ನೋಡುತ್ತ ಕುಳಿತಳು. ರಂಗ ರಾಯನು ಇವಳ ವಿಸ್ಮಯಾಪನ್ನ ಮುಖದ ಕಡೆಗೆ ನೋಡಿ ಮಾತಾಡ ಹತ್ತಿದನು:—"ಅವಳು ತಿರುಗಿ ಬರುವದು ವಿಹಿತವೆಂದು ನನಗೆ ಅನಿ

ಸುವದಿಲ್ಲ. ಅವಳು ನನ್ನ ಲಗ್ನದ ಹೆಂಡಿತಿಯಾಗಿದ್ದರೂ ನಾನು ಸಹಧರ್ಮಿಣಿಯೆಂದು ಅವಳನ್ನು ಕರೆಯಲಾರೆನು.''

ಭಾಮಿನಿಯ ವಿಷಯದ ಈ ಕುತ್ಸಿತ ಮಾತನ್ನು ಕೇಳಿ ಭೀಮರಾಯನಿಗೆ ಸಿಟ್ಟು ಬಂತು. ಅವನು ಇಂತು ಮಾತಾಡಿದನು:—''ಧರ್ಮವೇ ನಮಗಿಲ್ಲವೆಂದ ಬಳಿಕ ಸಹಧರ್ಮಿಣಿಯರೆಲ್ಲಿಂದ ಬರಬೇಕು? ರಂಗ, ನಮ್ಮಂಥವರು ತಾತ್ವಿಕ ಮಾತುಗಳನ್ನಾಡಿ ಉಪಯೋಗವಿಲ್ಲ; ನಾವು ನಮ್ಮ ವ್ಯವಹಾರದ ಅನುಕೂಲತೆಯನ್ನೊಂದು ನೋಡಿಕೊಂಡರೆ ಸಾಕು!''

''ನಮಗೆ ಧರ್ಮವೇ ಇಲ್ಲವೆ?" ರಂಗರಾಯನು ವಿಸ್ಮಯಾತಿರೇಕದಿಂದ ಕೇಳಿದನು.

''ಎಲ್ಲಿದೆ? ತೋರಿಕೊಡು! ನಾವು ಕೆಲಸ ಮಾಡುವೆವು. ಗಳಿಸುವೆವು. ಊಟ ಮಾಡುವೆವು. ವಿಹರಿಸುವೆವು. ಇಷ್ಟಾದರೆ ನಮ್ಮ ಕರ್ತವ್ಯಗಳು ಕೊನೆಗಂಡಂತಾದವು. ಈ ಕೆಲಸಗಳನ್ನು ತೀರಿಸಲಿಕ್ಕೆ ಸಹಧರ್ಮಿಣಿಯೇಕೆ ಬೇಕು? ಆ ಕಾಲದ ಜನರು ಸಂಧ್ಯಾವಂದನೆ-ದೇವಪೂಜೆಗಳನ್ನು ಮಾಡುತ್ತಿದ್ದರು. ವ್ರತ-ಉಪವಾಸಗಳನ್ನಾಚರಿಸುತ್ತಿದ್ದರು. ಹವ್ಯ-ಕವ್ಯಗಳನ್ನು ಮಾಡುತ್ತಿದ್ದರು. ಅವರು ಸದಾ ಧಾರ್ಮಿಕ ಕ್ರಿಯೆಗಳಲ್ಲಿ ತೊಡಗಿರುತ್ತಿದ್ದರು. ಅವರಿಗೆ ಸಹಧರ್ಮಿಣಿಯರ ಅವಶ್ಯಕತೆಯಿತ್ತು. ನಮಗೆ ಆ ಸಹಧರ್ಮಿಣಿಯರ ಗೊಡವೆಯೇಕೆ?'' ಭೀಮರಾಯನು ಆವೇಶದಿಂದ ಮಾತಾಡಿದನು.

ರಂಗರಾಯನು ಮರ್ಮಾಹತನಾಗಿ ಇಂತು ಕೇಳಿದನು:—''ಯಾರು ವ್ರತೋಪವಾಸಗಳನ್ನೂ, ಹೋಮ-ಹವನಗಳನ್ನೂ ಮಾಡುವರೋ, ಅವರಿಗಷ್ಟೇ ಸಹಧರ್ಮಿಣಿಯರ ಅವಶ್ಯಕತೆಯೆ? ನಮಗೆ ಸಹಧರ್ಮಿಣಿಯರು ಬೇಡವೆ?........''

ಭೀಮರಾಯನು ರಂಗರಾಯನನ್ನು ಮುಂದೆ ಮಾತಾಡಗೊಡದೆ ಹೇಳಹತ್ತಿದನು:—''ಬೇಡ, ನಿಜವಾಗಿಯೂ ನಮಗೆ ಸಹಧರ್ಮಿಣಿಯರು ಬೇಡ. ನೀನೂ ಹಿಂದುವು, ನಾನೂ ಹಿಂದುವು; ಆದರೆ ಕ್ರಿಯಾ

ಕಲಾಪಗಳಿಲ್ಲದ ಹಿಂದುಗಳು ನಾವು! ನಾವು ಪೂಜೆಯನ್ನು ಮಾಡುವ ದಿಲ್ಲ; ದೇವಮಂದಿರಕ್ಕೆ ಹೋಗುವದಿಲ್ಲ. ಅವತಾರಿಕರ ಹೆಸರೆತ್ತಿ ಮನ ಬಂದಂತೆ ಚರ್ಚೆಯನ್ನೂ ಮಾಡುವದಿಲ್ಲ. ನಮ್ಮ ಪ್ರಮದೆಯರು ನಮಗಿಂತಲೂ ನಿರೀಹರು. ನಾವು ಸಹಜ ಮನುಷ್ಯರು. ವ್ಯವಹಾರಕ್ಕೆ ಉಪಯುಕ್ತರು. ಇಂತಹ ವ್ಯಾವಹಾರಿಕ ಮನುಷ್ಯರು ಐದಾರು ಅಕ್ಷರಗಳನ್ನೊಳಗೊಂಡು, ಉಚ್ಚರಿಸಲಿಕ್ಕೆ ಕಠಿಣವಾದ ದೊಡ್ಡ ಸಹಧರ್ಮಿಣಿಯನ್ನು ಕಟ್ಟಿಕೊಂಡು ಮಾಡುವದೇನು? ನಮಗೆ ಸಣ್ಣ ಸ್ತ್ರೀಯೊಬ್ಬಳಾದರೆ ಸಾಕು. ನಮ್ಮ ಎಲ್ಲ ಕೆಲಸಗಳು ಸುಸೂತ್ರವಾಗಿ ಸಾಗುವವು.'' ಕ್ಷಣಕಾಲ ಸುಮ್ಮನಿದ್ದು, ಭೀಮರಾಯನು ಮತ್ತೆ ಹೇಳ ಹತ್ತಿದನು:—''ನೀನು ಮೂರನೆಯ ಮದುವೆಗೆ ಒಪ್ಪುವದು ಯೋಗ್ಯವೆಂದು ನನಗೆ ಅನಿಸುತ್ತಿದೆ. ಮದುವೆಯು ಎರಡು ಸಾರೆ ಆಗಿಹೋಗಿದೆ. ಈ ಮೂರನೆಯ ಸರತಿಗೆ ಭಯಗೊಳ್ಳುವದೇಕೆ? ಗಟ್ಟಿಮನಸ್ಸು ಮಾಡಿ ಒಪ್ಪಿಕೊಂಡು ಬಿಡು. ಮಧ್ವರಾಯನು ನನ್ನ ಬೆನ್ನ ಬಿಡದವನಾಗಿದ್ದಾನೆ. ನಿನ್ನ ಸಹೋದರಿಯ ಭಯಾನಕ ಇಚ್ಛೆಯೂ ಹೀಗೆಯೇ ಇದೆ. ನನ್ನ ಮತವೂ ಅನುಕೂಲವಿದೆ. ಹೀಗಿರಲು, ನೀನು ಒಲ್ಲೆನೆನ್ನುವದು ಸರಿಯೆ?''

ರಂಗರಾಯನ ಮುಖವು ಕಪ್ಪಿಟ್ಟು ಹೋಯಿತು! ಅವನು ಎದ್ದು ನಿಂತು: ''ಭೀಮ, ನೀನು ನನಗೆ ಪರಿಹಾಸ ಮಾಡುತ್ತಿರುವೆ.'' ಎಂದು ನುಡಿದನು.

ಸುಶೀಲೆಯು ಗಾಬರಿಯಾದಳು. ಭೀಮರಾಯನು ಭೀತನಾಗಿ ಮಾತಾಡಹತ್ತಿದನು: ''ಇಲ್ಲ, ನಾನು ಪರಿಹಾಸ ಮಾಡಬಯಸಿದವನಲ್ಲ. ನಿಜವನ್ನೇ ನುಡಿದನು. ಒಂದುವೇಳೆ ಅದು ಪರಿಹಾಸವಾಗಿದ್ದರೆ ನಿನಗಿಂತಲೂ ನನಗೆ ಹೆಚ್ಚಾಗಿ ತಾಗುವಂತಿದೆ!''

ರಂಗರಾಯನು ಪ್ರತಿ ಮಾತನಾಡಲಿಲ್ಲ. ಕೇವಲ ಸ್ತಬ್ಧನಾಗಿ ನಿಂತುಕೊಂಡಿದ್ದನು.

——

ಆದರೆ ಆ ಜಾಡ್ಯ ಕಳೆಯುವ ಮಾರ್ಗವಿದಲ್ಲ.

ರಂಗರಾಯನ ಕೋಪವನ್ನೂ ಆವೇಶವನ್ನೂ ನೋಡಿ ಭೀಮರಾಯನು ಇನ್ನು ಮದುವೆಯ ಸಂಬಂಧದ ಮಾತು ಬಳಿಸುವುದು ಅನುಪಯುಕ್ತವಿಷ್ಟೇ ಅಲ್ಲ; ಘಾತುಕವೂ ಆಗಬಹುದೆಂದು ಭಾವಿಸಿದನು. ನಾಲ್ಕೆಂಟು ದಿನಗಳ ತರುವಾಯ ರಂಗರಾಯನು ಶಾಂತನಾಗಿದ್ದ ಸಮಯವನ್ನು ಸಾಧಿಸಿ ಬಂದು, ಮತ್ತೆ ಮದುವೆಯ ಮಾತು ತೆಗೆಯಬಹುದೆಂದು ಬಗೆದು, ತಂಗಿಯನ್ನು ಕರೆದುಕೊಂಡು ಮನೆಗೆ ಹೊರಟನು.

ಮುಂದೆ ಒಂದು ವಾರದಲ್ಲಿಯೆ ಭೀಮರಾಯನು ಕಚೇರಿಯ ಕೆಲಸಕ್ಕಾಗಿ ಮುಂಬಯಿಗೆ ಹೊರಡುವ ಪ್ರಸಂಗ ಬಂತು. ಅವನು ಮುಂಬಯಿಗೆ ಹೊರಡುವ ಮೊದಲು ಹೆಂಡತಿಯನ್ನು ಕರೆದು ಇಂತು ನುಡಿದನು:—"ಮಧ್ವರಾಯನು ತನ್ನ ಮಗಳನ್ನು ರಂಗರಾಯನಿಗೆ ಕೊಡಬೇಕೆಂಬ ಉತ್ಕಟೇಚ್ಛೆಯುಳ್ಳವನಾಗಿದ್ದಾನೆ. ವಿದುಷಿಯಾದ ಕನ್ಯೆಯು ರಂಗರಾಯನ ಕೈ ಹಿಡಿಯಲು ಸಿದ್ಧಳಿದ್ದಾಳೆ; ಆದರೆ ರಂಗರಾಯನು ಮಾತ್ರ ಇದುವರೆಗೆ ಸಮ್ಮತಿಯನ್ನು ತೋರ್ಪಡಿಸಿಲ್ಲ. ನಾವು ನಿರಾಶರಾಗುವ ಕಾರಣವಿಲ್ಲ. ನಾನು ಇನ್ನು ಕೆಲವು ದಿನಗಳಲ್ಲಿಯೇ ರಂಗರಾಯನ ಮನಸ್ಸನ್ನು ಒಲಿಸುವೆನು—ಅವನು ಈ ವಿವಾಹಕ್ಕೆ ಒಪ್ಪುವಂತೆ ಮಾಡುವೆನು. ಇಲಿಯು ಖಾದ್ಯವನ್ನು ನೋಡಿದೆ. ಆಶೆಯಿಂದ ಬಲೆಯ ಕಡೆಗೆ ತಿರುಗಿದೆ. ಇನ್ನು ಅವನ್ನು ಬಲೆಯಲ್ಲಿ ಕೆಡಹುವದಕ್ಕೆ ಅವಕಾಶ ಹಿಡಿಯದು.

ಭೀಮರಾಯನು ತನ್ನ ಹೆಂಡತಿಯೊಡನೆ ಬಹು ದಿನಗಳ ತರುವಾಯ ಹೀಗೆ ಸದ್ಭಾವನೆಯಿಂದ ಮಾತಾಡಿದ್ದನು. ಸುಭದ್ರೆಯು ಆನಂದಿತಳಾದಳು. ಇವಳು ಸುಶೀಲೆಯ ಮುಖದಿಂದ ಕೆಲವು ಸಂಗತಿಗಳನ್ನು ಕೇಳಿ ತಿಳಿದಿದ್ದಳು. ಮಾತಾಡಹತ್ತಿದಳು: "ನೀವು ಭಾಮಿನಿಯ ಪರಮ ಹಿತೈಷಿಗಳೆಂದು ನಾನು ತಿಳಿದಿದ್ದೆನು. ನೀವು ಅಣ್ಣನ

ವಿವಾಹಕ್ಕೆ ಮನಸ್ಸು ಮಾಡಬಹುದೆಂಬ ಮಾತು ನನಗೆ ಅಸ
ನೀಯವಾಗಿ ತೋರಿತ್ತು; ಆದರೆ ಇಂದು ನೀವೇ ಹೀಗೆ ನುಡಿಯು
ವುದರಿಂದ ನಾನು ನಂಬಬೇಕಾಗಿದೆ.''

''ಅಹುದು. ಈಗ್ಗೆ ಒಂದೆರಡು ತಿಂಗಳ ಹಿಂದೆ ನಾನು ಈ
ಹಕ್ಕೆ ವಿರೋಧವುಳ್ಳವನಾಗಿದ್ದೆನು; ಆದರೆ ಈಗ ರಂಗರಾಯನ
ನೆಯ ಮದುವೆಗೆ ನಾನು ವಿರುದ್ಧನಾಗಿಲ್ಲವಿಷ್ಟೇ ಅಲ್ಲ; ಈ ವಿವಾ
ಆಗುವದು ಅವಶ್ಯವೆಂದು ಭಾವಿಸಿ ಪ್ರಯತ್ನಕ್ಕೆ ತೊಡಗಿದ್ದೇನೆ.
ರಿಂದ ನೀನು ನಾನು ಭಾಮಿನಿಯ ಶತ್ರುವೆಂದು ಮಾತ್ರ ಭಾವಿಸಬೆ
ನಾನು ಹಿಂದೆಯೂ ಭಾಮಿನಿಯ ಹಿತಚಿಂತಕನಾಗಿದ್ದೆನು—ಈಗ
ಆಗಿರುವೆನು—ಮುಂದೆಯೂ ಇರುವೆನು. ನಾನು ಅನುದಿನವೂ ಅ
ಶುಭಾಕಾಂಕ್ಷಿಯು; ಆದರೆ ಯಾವದು ಆಗಲಾರದ್ದೋ, ಅದಕ
ಪ್ರಯತ್ನಿಸಿ ಉಪಯೋಗವಿಲ್ಲ! ಇನ್ನು ಭಾಮಿನಿ ಹಾಗು ರಂಗರಾ
ನಿಗೆ ಕೂಡಿ ನಡೆಯದು! ಹೀಗಿರಲು, ಇವರ ಮಿಲನಕ್ಕಾಗಿ ನಾ
ಯತ್ನಿಸುವುದು ಹಿತಕರವಲ್ಲ. ಕಾರಣ ನಾನು ಈಗ ರಂಗರಾಯ
ನವೀನ ವಿವಾಹಕ್ಕೆ ಮನಸ್ಸು ಮಾಡಿದವನಾಗಿದ್ದೇನೆ.''

ಸುಭದ್ರೆಯು ಉಪಹಾಸಸೂಚಕ ನಗೆಯಿಂದ ಮಾತಾಡಹ
ದಳು: ''ನೀವು ಪುರುಷರಾದ್ದರಿಂದ ಭಾಮಿನಿಯ ಸ್ವಭಾವದ ಇಂಗಿ
ವನ್ನರಿತುಕೊಳ್ಳಲಿಕ್ಕೆ ತಡವಾಯಿತು; ಆದರೆ ನಾನು ಅವಳನ್ನು ನೋ
ತ್ರಲೆ, ಇವಳೊಡನೆ ನಾವು ವ್ಯವಹರಿಸುವದು ಅಸಂಭವವೆಂಬುದನ
ಗೊತ್ತುಮಾಡಿಕೊಂಡಿದ್ದೆನು. ಗಂಡಸರಿಗೆ ಹೆಂಗಸರ ಸ್ವಭಾವದ ರ
ಸ್ಯವು ಬೇಗನೆ ಹೊಳೆಯದು. ಹೆಂಗಸರು ಹೆಂಗುಸರ ಸ್ವಭಾವದ ಇಂಗಿ
ವನ್ನು ಕೂಡಲೆ ಕಂಡುಹಿಡಿಯಬಲ್ಲರು.''

''ಇರಬಹುದು. ಭಾಮಿನಿಯು ಪತಿಯೊಡನೆ ಕೂಡಿ ಇರುವ
ಅಸಂಭವವಾದ್ದರಿಂದಲೆ ಹೊರಟು ಹೋದಳು. ಅವಳು ಹೀಗೆ ವರ್ತಿ
ಸದೆ, ಬೇರೊಂದು ವಿಧವಾಗಿ ಆಚರಿಸಿದ್ದರೆ ಹೇಗಾಗುತ್ತಿತ್ತೆಂಬದನ
ಕಲ್ಪಿಸಿ, ನಾವು ವಾದ-ವಿವಾದ ಮಾಡುವುದರಲ್ಲಿ ಪ್ರಯೋಜನವಿಲ್ಲ

ಆಗ ನಾನು ಭಾಮಿನಿಯ ಸ್ವಭಾವವನ್ನು ಸರಿಯಾಗಿ ಅರಿಯಲಿಲ್ಲವೆಂಬುದು ನಿಜವು. ಈಗ ಅರಿತಿರುವೆನಾದ್ದರಿಂದ ರಂಗರಾಯನ ಮೂರನೆಯ ಮದುವೆಗೆ ಉದ್ಯುಕ್ತನಾಗಿರುವೆನು.''

''ಸರಿಯಾಗಿ ಮಾತಾಡಿದಿರಿ. ದೋಷವನ್ನುಗುಣವೆಂದು ಸಾಧಿಸಬಯಸುವುದರಲ್ಲಿ ಹಿತವಿಲ್ಲ. ದೋಷವನ್ನೊಪ್ಪಿಕೊಂಡು ಸುಧಾರಿಸಿಕೊಳ್ಳುವುದು ಹಿತಕರವು. ನೀವು ಒಮ್ಮೆಂದೊಮ್ಮೆಲೆ ಜಪ-ತಪಗಳನ್ನು ಮಾಡುವವರ ಹಾಗು ವ್ರತೋಪವಾಸಗಳನ್ನಾಚರಿಸುವವರ ಬಟ್ಟಂಗಿಗಳಾದುದನ್ನು ನೋಡಿ ನಾನು ಬಹು ಭಯಗೊಂಡಿದ್ದೆನು. ನಾವೂ ಹಿಂದುಗಳು. ಮುಸಲ್ಮಾನರಲ್ಲ, ಕ್ರಿಶ್ಚಿನರಲ್ಲ; ಆದರೆ ನಾವೇ ಶ್ರೇಷ್ಠರು ಉಳಿದವರೆಲ್ಲರು ಹೀನರು. ಕೀಳು ಜಾತಿಯವರನ್ನುಮುಟ್ಟುತ್ತಲೆ ನಮ್ಮ ಜಾತಿಯು ಹಾಳಾಗಿ ಹೋಗುವುದು, ಎಂದು ಅಭಿಮಾನ ಬಡುವುದು ಸಮ್ಮತವೇ? ಜಾತಿ ನಿಯಮಗಳನ್ನು ಪಾಲಿಸುವವರಷ್ಟೇ ಸ್ವರ್ಗಕ್ಕೆ ಹೋಗುವರು. ಉಳಿದವರೆಲ್ಲ ನರಕಭೋಗಿಗಳಾಗುವರು; ಎಂದು ಹೇಳುವದು ಅವಳ ತೌರುಮನೆಯಲ್ಲಿ ಸಮ್ಮತವಾಗಬಹುದು; ಆದರೆ ಇಲ್ಲಿ ನಡೆಯದು. ಇಲ್ಲಿ ತನ್ನಾಟವು ನಡೆಯದ್ದರಿಂದಲೇ ಅವಳು ಪತಿಯ ಬಳಿಯಲ್ಲಿ ಆಶ್ರಯವನ್ನು ಹೊಂದಲಿಲ್ಲ!"

ಈ ಮಾತು ಸತ್ಯವಲ್ಲ: ಅಸತ್ಯವೂ ಅಲ್ಲ. ಪುಸಿ-ದಿಟಗಳ ಸರಿಬೆರಕೆಯದು. ಕಾರಣ ಭೀಮರಾಯನು ಉತ್ತರ ಕೊಡಬಯಸದೆ, ಹೆಂಡತಿಯ ಮೋರೆಯ ಕಡೆಗೆ ನೋಡುತ್ತ ನಿಂತನು. ಈ ಸಮಯದಲ್ಲಿ ಸುಶೀಲೆಯು ಬಂದು:—''ಅಣ್ಣಾ, ಮತ್ತೇನಾಯಿತು?" ಎಂದು ಕೇಳಿದಳು.

ಸುಭದ್ರೆಯು ತನ್ನ ವಾಕ್ಪ್ರವಾಹವನ್ನು ಭರದಿಂದ ಹರಿಬಿಟ್ಟಳು: ''ಭಾಮಿನಿಯು ಜಾತಿರಕ್ಷಣೆಯೇ ತನ್ನ ಶ್ರೇಷ್ಠತಮ ಕರ್ತವ್ಯವೆಂದು ಭಾವಿಸಿದಳಲ್ಲವೆ? ತನ್ನ ಆಚಾರ ರಕ್ಷಣೆಗಾಗಿ ಪತಿಯನ್ನು ಸಹ ತೊರೆದು ಹೋಗಲಿಕ್ಕೆ ಹಿಂಜರಿಯದಾದಳಲ್ಲವೆ? ನೀವು ಅವಳಾ ಕೃತಿಯನ್ನು ಸಮರ್ಥಿಸುವಿರಾ? ನನ್ನ ಸಲುವಾಗಿ ಅಣ್ಣನು ಅವಳನ್ನು ತಿರಸ್ಕರಿಸಿ

ದಂತೆ, ಅವಳ ಸಲುವಾಗಿ ನೀವು ನನ್ನ ಮನಸ್ಸಿಗೆ ನಡುವಂತೆ ಮಾತಾಡಲಿಲ್ಲವೆ? ನಾನು ನಿಮ್ಮ ಆ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಂಡು ತವರು ಮನೆಗೆ ಹೋಗಬೇಕಾಗಿತ್ತೇ? ಹೀಗೆ ನಾನು ಹೋಗಿದ್ದರೆ ನೀವು ನನ್ನ ಕೆಲಸವನ್ನು ಸ್ತುತಿಸುತ್ತಿದ್ದಿರಾ?"

"ಇಲ್ಲ, ನಾನು ಹೀಗೆಂದೂ ಅಂದವನಲ್ಲ."

"ಹೀಗೆ ಅನ್ನಲಾರಿರೆಂಬುದನ್ನು ನಾನು ಬಲ್ಲೆನು." ಬಳಿಕ ಸುಶೀಲೆಯ ಕಡೆಗೆ ಮೋರೆ ಮಾಡಿ ಮಾತಾಡತೊಡಗಿದಳು:—"ನಿನ್ನ ಈ ಸಹೋದರರು ಭಾಮಿನಿಯ ಅಪರಿಚಿತ ಬಹಿರಾಚರಣೆಯನ್ನು ನೋಡಿ, ಒಮ್ಮೆಲೆ ಮೋಸಹೋಗಿಬಿಟ್ಟಿದ್ದರು. ಬಟ್ಟಂಗಿಯಂತೆ ಅವಳ ವರ್ಣನೆಗೆ ಬದ್ಧಕಂಕಣರಾಗಿದ್ದರು. ತಾಯಿ-ತಂದೆಗಳು ನನಗೆ ಹಿಂದೂ ಧರ್ಮದ ಸಂಕುಚಿತ ವಿಚಾರದ, ಆಚಾರ--ರೀತಿ-ನೀತಿಗಳ ಶಿಕ್ಷಣವನ್ನು ಕೊಟ್ಟಿಲ್ಲವೆಂಬುದು ನಿಜವು; ಆದರೆ ಆವರು ನನಗೆ ಯಾವ ತರದ ಶಿಕ್ಷಣವನ್ನೂ ನೀಡಿಲ್ಲವೆಂದು ಅನ್ನಲಿಕ್ಕಾದೀತೇ? ನಾನು ನನ್ನ ಜನನೀ-ಜನಕರಿಂದ ಪಡೆದ ಶಿಕ್ಷಣವು ಭಾಮಿನಿಯು ಹೊಂದಿದ ಶಿಕ್ಷಣಕ್ಕಿಂತ ಮೇಲ್ತರದ್ದು; ಹೆಚ್ಚು ಹಿತಕರವಾದುದು." ಸುಭದ್ರೆಯು ಕೊಂಚ ನಕ್ಕು, ಮತ್ತೆ ಮಾತಾಡಹತ್ತಿದಳು:—"ನೀನು ಭಾಮಿನಿಯ ಸಹವಾಸದಲ್ಲಿದ್ದು ಹಲವು ವಿಷಯಗಳನ್ನು ಕಲಿತುಕೊಳ್ಳಬೇಕೆಂದು ನಿನ್ನ ಈ ಸಹೋದರರು ಹೇಳಿದ್ದರಷ್ಟೆ? ನೀನು ಅವಳ ಬಳಿಯಲ್ಲಿ ಯಾವ ಯಾವ ವಿಷಯಗಳನ್ನು ಅಭ್ಯಾಸಿಸಿದೆಯೆಂಬುದನ್ನು ಸಾವಧಾನತೆಯಿಂದ ಕೇಳಿಕೊಳ್ಳುವ ಅವಕಾಶವು ನನಗಿಲ್ಲದಾಗಿದೆ. ನಾನು ಹೋಗುವೆನು. ನೀನು ಯಾವ ವಿಷಯಗಳನ್ನು ಎಷ್ಟು ಕಲಿತಿರುವೆಯೆಂಬುದನ್ನು ನಿನ್ನ ಈ ಸಹೋದರರಿಗೇ ವಿವರಿಸಿ ಹೇಳು." ಸುಭದ್ರೆಯು ನಗುತ್ತ ಬೇರೆ ಕಡೆಗೆ ಹೊರಟು ಹೋದಳು.

ಭೀಮರಾಯನು ಸುಮ್ಮನಿದ್ದನು. ತನ್ನ ತಂಗಿಯ ಸಮಕ್ಷದಲ್ಲಿ ಹೆಂಡತಿಯು ಹೂಡಿ ಎಸೆದಿದ್ದ ವಾಗ್ಬಾಣಗಳು ಭೀಮರಾಯನಿಗೆ ಚೆನ್ನಾಗಿ ತಾಕಿದ್ದುವು. ಅವನು ವಿಷಾದಾತಿರೇಕದಿಂದ ಹೆಂಡತಿಗೆ

ಉತ್ತರ ಕೊಡುವ ಮನಸ್ಸು ಮಾಡಲಿಲ್ಲ. ಭೀಮರಾಯನು ಹಿಂದೂ ಧರ್ಮದ ಆಚಾರ-ವಿಚಾರಗಳನ್ನು ಸರಿಯಾಗಿ ಅರಿತುಕೊಂಡವನಲ್ಲ; ಆಚರಿಸಿದವನಲ್ಲ; ಆದರೂ ರಮಣಿಯರ ಆಚಾರನಿಷ್ಠೆಯೂ, ಪ್ರಾಚೀನ ಆರ್ಯಮಹಿಳೆಯರ ಜೀವನ ಚರಿತೆಯೂ ಇವನ ಮನಸ್ಸನ್ನು ಚೆನ್ನಾಗಿ ಆಕರ್ಷಿಸಿಕೊಂಡಿದ್ದುವು. ಕಾರಣ ಇವನು ಅಕಸ್ಮಾತ್ತಾಗಿ ಬಂದು ಆತ್ಮೀಯಳಾಗಿದ್ದ ಭಾಮಿನಿಯ ಆಚಾರ-ವ್ಯವಹಾರಗಳನ್ನು ನೋಡಿ ಮುಗ್ಧನಾಗಿ ಹೋಗಿದ್ದನು. ಅಂತೆಯೇ ಇವನು ಭಾಮಿನಿಯ ಪಕ್ಷಪಾತಿಯಾಗಿ ಸುಭದ್ರೆಯ ಮನಸ್ಸು ನೊಯ್ಯುವಂತೆ ಮಾತಾಡಲಿಕ್ಕೆ ಹಿಂದೆಗೆದಿದ್ದಿಲ್ಲ. ಭಾಮಿನಿಯು ಸ್ತ್ರೀಸಮಾಜಕ್ಕೆ ಆದರ್ಶರೂಪಳೆಂದೂ, ಹೆಂಗಳೆಯರು ಭಾಮಿನಿಯ ಆಚಾರ-ವಿಚಾರಗಳನ್ನು ಅನುಕರಿಸುವದು ಹಿತಕರವೆಂದೂ ಭಾವಿಸಿದ್ದನು. ಈ ಕಾರಣದಿಂದ ಇವನು ಪರಿಚಿತ ಹೆಂಗುಸರೊಡನೆ ಮಾತಾಡುವ ಪ್ರಸಂಗ ದೊರೆತಾಗ, ಗೌರವದಿಂದ ಭಾಮಿನಿಯ ಹೆಸರನ್ನು ಉಲ್ಲೇಖಿಸುತ್ತಿದ್ದನು; ಹಾಗು ಭಾಮಿನಿಯ ಆಚಾರ-ವಿಚಾರಗಳನ್ನು ಹೊಗಳುತ್ತಿದ್ದನು; ಆದರೆ ಭೀಮರಾಯನು ಇಂದು ತನ್ನ ಹಿಂದಿನ ಈ ಕಾರ್ಯಕ್ಕಾಗಿ ತಲೆಬೊಗ್ಗಿಸಬೇಕಾಗಿ ಬಂದಿತ್ತು. ಸುಮ್ಮನಿದ್ದು ಹೆಂಡತಿಯ ವಾಗ್ಬಾಣಗಳನ್ನು ಸಹಿಸಿಕೊಳ್ಳುವ ಪ್ರಸಂಗವೊದಗಿತ್ತು. ಈ ಸಮಯದಲ್ಲಿ ಇವನು ಭಾಮಿನಿಯು ತನ್ನ ಮನಸ್ಸಿಗೆ ಸರಿಗಂಡ ರೀತಿಯಲ್ಲಿ ವ್ಯವಹರಿಸಿದ್ದಾಳೆ; ಅವಳ ಈ ಆಚರಣೆಯಿಂದ ಹೆರವರಿಗೇನೂ ಅಪಾಯವಾಗಿಲ್ಲ. ಹೀಗಿರಲು ಅವಳನ್ನು ನಿಂದಿಸುವದೇಕೆ? ಎಂದು ಮಾತಾಡಿ ಹೆಂಡತಿಗೆ ಉತ್ತರ ಕೊಡಬೇಕೆಂದಿದ್ದನು; ಆದರೆ ಹೀಗೆ ಮಾತಾಡಲಿಕ್ಕೆ ಇವನ ನಾಲಿಗೆಯೇ ಏಳಲಿಲ್ಲ.

ಭೀಮರಾಯನು ಹೆಂಡತಿಯು ಹೋದ ಬಳಿಕ ಕೊಂಚ ಕಾಲದ ಮೇಲೆ ತಂಗಿಯನ್ನುದ್ದೇಶಿಸಿ ಸಂದಿಗ್ಧಸ್ವರದಿಂದ ಮಾತಾಡಹತ್ತಿದನು: ''ಯಾವ ವಿಷಯದಲ್ಲೂ ಅತಿರೇಕವು ಒಳ್ಳೆಯದಲ್ಲ. ಅಂತೆಯೇ ಹಿರಿಯರು 'ಅತಿಯಾದರೆ ಗತಿಗೆಡುವದು' ಎಂದು ಹೇಳಿದ್ದಾರೆ.

ಹಿಂದೂ ಧರ್ಮಾಭಿಮಾನಿಗಳು ಈ ದೃಷ್ಟಿಯಿಂದ ಧಾರ್ಮಿಕ ಆಚಾರ-ವಿಚಾರಗಳಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕು; ಹಾಗು ಸಾಮಾನ್ಯ ಜನರಿಗೆ ಈ ಪರಿವರ್ತನೆಯ ಇಂಗಿತವನ್ನು ತಿಳುಹಿಕೊಡಬೇಕು. ಇದು ಹೇಗೆಯೇ ಇರಲಿ. ಧಾರ್ಮಿಕ ಆಚರಣೆಯ ಭಾಮಿನಿಯಂಥವರಿಗಿಂತ ಧರ್ಮಲಂಡರಾದ ನಾವು ಹೀನರೆಂಬದನ್ನು ಒಪ್ಪಿಕೊಂಡ ಹೊರತು ಗತ್ಯಂತರವಿಲ್ಲ."

ದಂಪತಿಗಳ ವಾದ-ವಿವಾದ ಸಮಯದಲ್ಲಿ ಸುಶೀಲೆಯು ಸುಮ್ಮನೆ ಕುಳಿತಿದ್ದಳು. ಈಗ ಸುಭದ್ರೆಯು ಹತ್ತಿರಿರದಿದ್ದರೂ ಸುಶೀಲೆಯು ಉತ್ತರ ಕೊಡಬಯಸಲಿಲ್ಲ.

ಅಂದಿನ ರಾತ್ರಿಯಲ್ಲಿ ಭೀಮರಾಯನು ಮುಂಬಯಿಗೆ ಹೊರಡುವ ಸಮಯದಲ್ಲಿ ಹೆಂಡತಿಗೆ ಇಂತು ಹೇಳಿದನು:“ನಾನು ನಾಲ್ಕಾರು ದಿವಸಗಳ ತರುವಾಯ ಬರುವೆನು. ಈ ಅವಧಿಯಲ್ಲಿ ಮಧ್ವರಾಯನೇ ಆಗಲಿ, ಅವನ ಪಕ್ಷದ ಜನರೇ ಆಗಲಿ ಬಂದು ವಿಚಾರಿಸಿದರೆ, ನಾನು ಬಂದ ಬಳಿಕ ಮದುವೆಯ ಮಾತನ್ನು ಬಗೆಹರಿಸಿ ಕೊಡುವೆನೆಂದು ಹೇಳು.”

“ಭಾಮಿನಿಯು ಇನ್ನು ಇಲ್ಲಿಗೆ ಬರುವದಿಲ್ಲೆಂದೇ ನಿಮ್ಮ ನಿರ್ಧಾರಣೆಯಾಗಿರುವದೇನು?”

“ಅಹುದು. ಅವಳು ಇನ್ನು ಇಲ್ಲಿಗೆ ಬರುವದಿಲ್ಲ—ಬಂದರೂ ಪ್ರಯೋಜನವಿಲ್ಲ. ನಾನು ಈ ಬಗ್ಗೆ ಬಹಳವಾಗಿ ಯೋಚಿಸಿರುವೆನು. ನೀನು ಅಂದದ್ದೇ ಸರಿಯೆಂದು ನನಗೆ ಈಗ ಅನಿಸಹತ್ತಿದೆ. ರಂಗರಾಯನಿಗಿಂತಲೂ ಭಾಮಿನಿಯ ಅಪರಾಧವು ದೊಡ್ಡದು. ಯಾವ ಶಿಕ್ಷಣವು ಮನುಷ್ಯನನ್ನು ಇಂತಹ ಸಂಕುಚಿತ ವಿಚಾರಗಳಿಗೊಳಗು ಮಾಡುವದೋ, ಸ್ವಾರ್ಥಪರನನ್ನಾಗಿ ಮಾಡುವದೋ ಆ ಶಿಕ್ಷಣಕ್ಕೆ ಒಂದು ಕಾಲದಲ್ಲಿ ಎಷ್ಟೇ ಬೆಲೆಯಿದ್ದರೂ, ಈಗದಕ್ಕೆ ಮಹತ್ವ ಕೊಡುವಂತಿಲ್ಲ. ಆ ಶಿಕ್ಷಣವನ್ನು ಇನ್ನು ನಮ್ಮೊಳಗೆ ಬಳಕೆಯಲ್ಲಿ ತಂದು ಪ್ರಯೋಜನವಿಲ್ಲ. ಭಾಮಿನಿಯು ಧರ್ಮದ ನಿಜವಾದ ತತ್ವಗಳನ್ನರಿದವಳಲ್ಲ.


ಕೇವಲ ಬಾಹ್ಯಾಚರಣೆಗಳಲ್ಲಿ ಮೈಮ್ಮರೆದವಳು. ಅಂತೆಯೇ ಅವಳು ಸ್ವಗೃಹವನ್ನು ತ್ಯಜಿಸಿ ಹೋಗಿಬಿಟ್ಟಳು. ಇರಲಿ. ನಾನೀಗ ಹೋಗಿ ಬರುವೆನು.'' ಭೀಮರಾಯನು ಹೊರ ಹೊರಟನು. ಮೋಟರಿನಲ್ಲಿ ಕುಳಿತನು.

ಭೀಮರಾಯನು ಕಚೇರಿಯ ಕೆಲಸವನ್ನು ತೀರಿಸಿಕೊಂಡು ತಿರುಗಿ ಬರಬೇಕಾದರೆ, ಹದಿನೈದು ದಿನಗಳು ಹತ್ತಿದುವು. ಇವನು ಮರಳಿ ಮನೆಗೆ ಬಂದ ಕೂಡಲೆ ಮೊದಲು ಸುಶೀಲೆಯನ್ನು ಕಂಡನು. ಸುಶೀಲೆಯು:—''ರಂಗಣ್ಣನು ಆರು ತಿಂಗಳ ರಜೆ ತಕ್ಕೊಂಡು ಮಂತ್ರಾಲೆಗೆ ಹೋಗಿರುವನೆಂದೂ, ಸಂಗಡ ರಾಮುನನ್ನೂ ಕರೆದೊಯ್ದನೆಂದೂ'' ಹೇಳಿದಳು.

''ಹೀಗೆ ಒಮ್ಮಿಂದೊಮ್ಮೆಲೆ ಹೋಗಲಿಕ್ಕೆ ಕಾರಣವೇನು?'' ಭೀಮರಾಯನು ಕೇಳಿದನು.

''ರಂಗಣ್ಣನು ರಾಮುನನ್ನು ಕರೆದೊಯ್ಯಲಿಕ್ಕೆಂದು ಈ ಮನೆಗೆ ಬಂದಿದ್ದನು. ನಾವು ವಿಚಾರಿಸಲಾಗಿ, ಮೈಯಲ್ಲಿ ಸ್ವಾಸ್ಥ್ಯವಿಲ್ಲೆಂದು ನುಡಿದನು.''

ಈ ಸಮಯದಲ್ಲಿ ಸುಭದ್ರೆಯು ಅಲ್ಲಿ ಕಾಣಿಸಿಕೊಂಡಳು. ಭೀಮರಾಯನು ಹೆಂಡತಿಯನ್ನುದ್ದೇಶಿಸಿ ಮಾತಾಡಹತ್ತಿದನು:— ''ಮೈಯಲ್ಲಿ ಸ್ವಾಸ್ಥ್ಯವಿಲ್ಲದಿರುವದು ಸ್ವಾಭಾವಿಕವಾದದ್ದು; ಆದರೆ ಆ ಜಾಡ್ಯವನ್ನು ಕಳೆದುಕೊಳ್ಳುವ ಮಾರ್ಗವಿದಲ್ಲ.'' ಭೀಮರಾಯನು ಇನ್ನೂ ಮಾತಾಡತಕ್ಕವನಿದ್ದನು; ಆದರೆ ಬಳಿಯಲ್ಲಿ ಸುಶೀಲೆಯಿರುವದನ್ನು ಜ್ಞಾಪಕಕ್ಕೆ ತಂದುಕೊಂಡು ಇವನು ಮುಂದೆ ಮಾತಾಡಲಿಲ್ಲ.



ಸಂಗಡ ನಾನೂ ಬಂದಿದ್ದರೆ ಒಳಿತಾಗುತ್ತಿತ್ತು.

ಬೇರೆ ವಕೀಲರು ದಿನಗಳನ್ನು ಕಳೆಯುತ್ತಿರುವಂತೆ ಭೀಮರಾಯನ ದಿನಗಳೂ ಕ್ರಮಿಸುತ್ತಿದ್ದುವು. ಇವನು ಹಣದ ಅಡಚಣಿಯಾಗುತ್ತಲೆ ಪ್ರಾಚೀನರ ರೀತಿ-ನೀತಿಗಳ ಪಕ್ಷಪಾತಿಯಾಗುತ್ತಿದ್ದನು; ಹಿಂದೂ ಧರ್ಮದ ಉಚ್ಚ ತತ್ವಗಳ ಹಾಗು ಆಚಾರ-ವ್ಯವಹಾರಗಳ ಪ್ರಶಂಸೆ ಮಾಡುತ್ತಿದ್ದನು. ಸಾಕಷ್ಟು ಧನವು ಕೈಸೇರಿತೆಂದರೆ, ಸುಮ್ಮನಾಗಿಬಿಡುತ್ತಿದ್ದನು. ಇವನು ಬಾಯಿಯಿಂದ ಏನೇ ಮಾತಾಡಲಿ, ಆಚರಣೆಯಲ್ಲಿ ಸ್ಥಿತ್ಯಂತರವನ್ನು ತೋರ್ಪಡಿಸುತ್ತಿದ್ದಿಲ್ಲ. ಇವನು ರಂಗರಾಯನ ನಿಜವಾದ ಹಿತಚಿಂತಕನು; ರಂಗರಾಯನ ಸ್ವಭಾವವನ್ನರಿತವನು. ದುರ್ಬಲಚಿತ್ತನಾದ ರಂಗರಾಯನನ್ನು ಬೇಕಾದ ಕೆಲಸಕ್ಕೆ ಹುರಿಗೊಳಿಸಬಹುದೆಂದು ಬಗೆದಿದ್ದ ಇವನು, ಮಧ್ವರಾಯನಿಗೆ ನಿರಾಶೆಯ ಉತ್ತರವನ್ನು ಹೇಳಲಿಲ್ಲವಿಷ್ಟೇ ಅಲ್ಲ; ರಂಗರಾಯನು ಬರುವದೊಂದೇ ತಡ, ಕೂಡಲೆ ಲಗ್ನವಾಗುವಂತೆ ಮಾಡಿ ಕೊಡುವೆನು; ಎಂದು ಆಶೆದೋರುತ್ತ ನಡೆದಿದ್ದನು.

ಭೀಮರಾಯನು ಭಾಮಿನಿಯ ಹಿತಚಿಂತಕನೂ ಅಹುದು; ಆದರೆ ಭಾಮಿನಿಯ ಆಚಾರ-ವಿಚಾರಗಳ ವಿಷಯದಲ್ಲಿದ್ದ ಆ ಶ್ರದ್ಧೆಯು ಈಗ ಇವನಲ್ಲಿ ಉಳಿದಿರಲಿಲ್ಲ. ಇವನು ಭಾಮಿನಿಗೆ ಕೆಡಕು ಆಗಬೇಕೆಂದು ಎಂದೂ ಅಪೇಕ್ಷಿಸಿದವನಲ್ಲ; ಆದರೆ ಭಾಮಿನಿಯು ಇನ್ನು ಪತಿಗೃಹವನ್ನು ಸೇರಿ ಉಪಯೋಗವಿಲ್ಲವೆಂದು ಬಗೆವವನಾಗಿದ್ದನು. ಅವಳು ಎಲ್ಲಿ ಇರುವಳೋ ಅಲ್ಲಿಯೇ ಇರಲಿ; ಸಿರಾಪದಳಾಗಲಿ; ಧರ್ಮಾಚರಣೆಯ ಮಾರ್ಗದಲ್ಲಿ ಉತ್ತರೋತ್ತರ ಉನ್ನತಿಯನ್ನು ಹೊಂದಲಿ; ಆದರೆ ರಂಗರಾಯನ ಮನೆಯಲ್ಲಿ ಬಂದು ಉತ್ಪಾತವೆಬ್ಬಿಸುವದು ಬೇಡ, ಎಂದು ಅನ್ನುತ್ತಿದ್ದನು. ಇವನು ಈ ವಿಷಯದಲ್ಲಿ ಇಂತು ಭಾವಿಸುತ್ತಿದ್ದನು: "ಭಾಮಿನಿಯು ಪ್ರೇಮಮಯಳಲ್ಲ. ದಿವ್ಯಪ್ರೇಮದಿಂದ ಪತಿಯನ್ನು ಪ್ರೀತಿಸಿದವಳಲ್ಲ. ಅವಳು ಆಚಾರ್ಯರ ಮನೆಯನ್ನು ಬೆಳೆ

ದವಳು. ತಾಯಿ-ತಂದೆಗಳ ನಿಷ್ಠುರ ಆಚರಣೆಯಲ್ಲಿ ದೊಡ್ಡವಳಾದವಳು. ವ್ರತೋಪವಾಸಗಳ ಹಾಗು ಮಡಿ-ಮೈಲಿಗೆಗಳ ಕಠೋರ ನಿಯಮಗಳನ್ನು ಪಾಲಿಸುತ್ತ ಬಂದವಳು. ಈ ಸ್ಥಿತಿಯಲ್ಲಿ ಬೆಳೆದು ದೊಡ್ಡವಳಾದ ಅವಳು, ಧಾರ್ಮಿಕಳಾಗಬಹುದು; ಕರ್ತವ್ಯತತ್ಪರಳಾಗಬಹುದು; ಆದರೆ ಪ್ರೇಮಪೂರ್ಣಳಾಗಳು. ಅವಳು ಪತಿಯನ್ನು ಪ್ರೀತಿಸಿದ್ದು, ಅವನೊಡನೆ ಸರಳರೀತಿಯಿಂದ ವರ್ತಿಸಿದ್ದು ಕೇವಲ ಕರ್ತವ್ಯಪಾಲನೆಗಾಗಿ--ಧರ್ಮದ ಆಜ್ಞೆಗಳನ್ನು ಉಲ್ಲಂಘಿಸದಿರುವದಕ್ಕಾಗಿ. ಅಂತೆಯೇ ಅವಳು ಪತಿಯ ಕಡೆಯಿಂದ ತನ್ನ ಧರ್ಮಾಚರಣೆಗೆ ಆಘಾತವಾಗಹತ್ತುತ್ತಲೆ, ಪತಿ ಸಹವಾಸವನ್ನು ಸಹಜ ರೀತಿಯಿಂದ ತ್ಯಾಗಮಾಡಿಬಿಟ್ಟಳು. ಅವಳು ರಾಮುನನ್ನು ಅಷ್ಟು ಬೇಗನೆ ಪ್ರೀತಿಸಿದ್ದಾದರೂ ಕರ್ತವ್ಯಪಾಲನೆಗಾಗಿಯೆ. ಒಂದು ವೇಳೆ ಅವಳು ನಿಜವಾಗಿಯೂ ರಾಮುನನ್ನು ಪ್ರೀತಿಸಿದ್ದರೆ, ತೌರುಮನೆಗೆ ಹೊರಡುವದಕ್ಕೆ ಹಿಂದೆಗೆಯುತ್ತಿದ್ದಿಲ್ಲವೆ? ಹೊರಡುವ ಮೊದಲು ರಾಮುನನ್ನು ನೋಡಲಿಕ್ಕೆ-ಮಾತಾಡಿಸಲಿಕ್ಕೆ ಮನಸ್ಸು ಮಾಡುತ್ತಿದ್ದಿಲ್ಲವೆ?''

ಹೀಗೆ ಎರಡು ತಿಂಗಳು ಕ್ರಮಿಸಿದವು. ಒಂದು ದಿನ ಮಂತ್ರಾಲೆಯಿಂದ ಭೀಮರಾಯನಿಗೊಂದು ಪತ್ರವು ಬಂತು. ಭೀಮರಾಯನ ಗೆಳೆಯನೊಬ್ಬನು ಆ ಪತ್ರವನ್ನು ಬರೆದಿದ್ದನು. ಈ ಪತ್ರದ ಸಾರವಿಂತು: ``ರಂಗರಾಯನು ಗುರುವಿನಿಂದ ಮಂತ್ರವನ್ನು ಗ್ರಹಿಸಿದ್ದಾನೆ. ಮಗನ ಮುಂಜಿಯನ್ನು ಮಾಡಿದ್ದಾನೆ. ತಂದೆ-ಮಕ್ಕಳಿಬ್ಬರೂ ದಿನಾಲು ನಸಕಿನಲ್ಲಿಯೇ ಸ್ನಾನ ಮಾಡುವರು. ರಂಗರಾಯನು ಸಂಧ್ಯಾವಂದನೆಯ ತರುವಾಯ ಜಪಮಾಡುತ್ತ ಕುಳ್ಳಿರುವನು. ಆರುತಾಸು ಹೊತ್ತೇರಿದರೂ ಇವನ ಜಪವು ಮುಗಿಯುವದಿಲ್ಲ. ಜಪದ ತರುವಾಯ ದೇವಪೂಜೆಯನ್ನು ಮಾಡಿಕೊಂಡು ಒಂದು ಹೊತ್ತು ಮಾತ್ರ ಪ್ರಸಾದವನ್ನು ಸ್ವೀಕರಿಸುವನು. ರಾತ್ರಿಯಲ್ಲಿ ಬಹುಕಾಲ ಎಚ್ಚತ್ತಿದ್ದು ಭಜನೆ ಮಾಡುವನು. ರಾಮುನಿಗೆ ಮಂತ್ರಗಳನ್ನು ಕಲಿಸಲಿಕ್ಕೆ ಒಬ್ಬ ಗುರುವನ್ನು ನಿಯಮಿಸಿದ್ದಾನೆ.''

ಭೀಮರಾಯನ ಮನೆಯಲ್ಲಿ ಈ ಸಂಗತಿಯು ಚರ್ಚೆ ನಡೆಯಿತು. ಸುಶೀಲೆಯು ಈ ಸುದ್ದಿಯನ್ನು ಕೇಳಿ ನಗಹತ್ತಿದಳು. ಸುಭದ್ರೆಯು: "ಈ ಪತ್ರವನ್ನು ನಿಮ್ಮ ಗೆಳೆಯನು ಬರೆದಿರುವನಷ್ಟೆ? ಅವನು ಹುಡುಗಾಟ ಮಾಡಿ, ನಿಮ್ಮನ್ನು ಬೆರಗುಗೊಳಿಸಲಿಕ್ಕೆ ಇಚ್ಛಿಸಿ, ಹೀಗೆ ಪತ್ರ ಬರೆದಿರಬಹುದು" ಎಂದು ನುಡಿದಳು.

"ಅವನು ನನ್ನ ಗೆಳೆಯನಾದರೂ ಹುಡುಗಾಟಿಕೆಯ ಸ್ವಭಾವದವನಲ್ಲ—ನನ್ನೊಡನೆ ಚೇಷ್ಟೆ ಮಾಡತಕ್ಕವನಲ್ಲ."

"ಅವನು ನಿಮ್ಮ ಗೆಳೆಯನೆಂದ ಬಳಿಕ ಅಣ್ಣನ ಸ್ನೇಹಿತನೂ ಆಗಿರಬೇಕು ಅವನು ಅಣ್ಣನ ಮುಖದಿಂದ ಭಾಮಿನಿಯ ಹಾಗು ನಿಮ್ಮ ಸಂಗತಿಯನ್ನು ಕೇಳಿಕೊಂಡಿರಬಹುದು. ನೀವು ಭಾಮಿನಿಯ ಆಚಾರ-ವಿಚಾರಗಳ ಪರಮಭಕ್ತರಾಗಿದ್ದುದನ್ನು ಅರಿತಿರಬಹುದು. ಅವನು ನಿಮ್ಮೊಡನೆ ವಿನೋದ ಮಾಡಲು ಬಯಸಿ ಹೀಗೆ ಪತ್ರವನ್ನು ಬರೆದಿರಬಹುದು." ಸುಭದ್ರೆಯು ನಸುನಗುತ್ತ ಮತ್ತೆ ಮಾತಾಡಹತ್ತಿದಳು: "ನಿಮಗೆ ಪತ್ರದ ಇಂಗಿತವು ಹೊಳೆಯದಾಯಿತಲ್ಲವೆ? ಕೇವಲ ಪುಸ್ತಕಗಳನ್ನು ಪಾಠಮಾಡಿ ಪರೀಕ್ಷೆಗೊಟ್ಟು ಪದವಿಗಳನ್ನು ಪಡೆದಿದ್ದರೇನಾಯಿತು? ಮೇಲ್ಬುದ್ಧಿಯು ಬೇಕೇಬೇಕು! ಇನ್ನು ನೀವು ನಿಮ್ಮ ಖಟ್ಲೆಗಳಲ್ಲಿ ನಿಮ್ಮಂತೆಯೆ ತೀವ್ರನಾಗಬೇಕೆಂಬ ಇಚ್ಛೆಯಿದ್ದರೆ, ನನ್ನ ಮತವನ್ನು ತಕ್ಕೊಳ್ಳುತ್ತ ಹೋಗಿರಿ. ನನ್ನ ಮತವಂತೆ ನೀವು ಖಟ್ಲೆಯನ್ನು ನಡಿಸಹತ್ತಿದರೆ ಗೆದೆಯುವಿರಿ; ಹೇರಳ ಹಣವನ್ನು ಸಂಪಾದಿಸುವಿರಿ; ಪಕ್ಷಕಾರರನ್ನೂ ಸಂತೋಷಗೊಳಿಸುವಿರಿ." ಬಳಿಕ ಸುಭದ್ರೆಯು ಸುಶೀಲೆಯನ್ನುದ್ದೇಶಿಸಿ: "ಇನ್ನು ನೀನು ಇಲ್ಲಿ ನಿಲ್ಲಬೇಡ. ಬೇಗನೆ ನಿನ್ನ ಕೆಲಸವನ್ನು ತೀರಿಸಿಕೊಳ್ಳು. ಶಕುಂತಲೆಯ ನಿಮಂತ್ರಣವನ್ನು ಸ್ವೀಕರಿಸಿದ್ದ ನಾವು, ನಿಯಮಿತ ವೇಳೆಗೆ ಅವಳ ಮನೆಗೆ ಹೋಗಲಿಕ್ಕೇ ಬೇಕು," ಎಂದು ನುಡಿದಳು.

ಸುಶೀಲೆಯು ನಗುತ್ತ ಒಳಗೆ ಹೋದಳು. ಸುಭದ್ರೆಯು ಪತ್ರದ ಇಂಗಿತವನ್ನು ಸರಿಯಾಗಿ ಹೊರಗೆಡವಿದಳೆಂದು ಅವಳು ತಿಳಿದಳು.

ಮುಂದೆ ಐದಾರು ದಿನಗಳ ತರುವಾಯ ಒಂದು ದಿನ ಭೀಮರಾಯನು ಹೆಂಡತಿಯ ಮುಂದೆ ಒಂದು ಜಡವಾದ ಪತ್ರವನ್ನು ಚೆಲ್ಲಿ ಕೊಟ್ಟು, ಇಂತು ಹೇಳಿವನು:—"ಈ ಪತ್ರವನ್ನೋದಿಕೊಳ್ಳು. ನನ್ನ ಗೆಳೆಯನ ತಂದೆಯು ಈ ಪತ್ರವನ್ನು ಬರೆದಿದ್ದಾನೆ. ಪತ್ರಲೇಖಕನು ಪರಮ ಧಾರ್ಮಿಕನು. ಎಪ್ಪತ್ತು ವರುಷದ ಮುದುಕನು. ನನ್ನನ್ನು ನೋಡಿದವನಲ್ಲ. ಇಂಥವನು ನನ್ನೊಡನೆ ಹುಡುಗಾಟವಾಡುವ ಸಂಭವವಿದೆಯೇ?"

ಪತ್ರವು ಬಹು ದೊಡ್ಡದು. ಕನ್ನಡದಲ್ಲಿ ಬರೆಯಲ್ಪಟ್ಟಿತ್ತು. ಸುಭದ್ರೆಯು ಎರಡು ಸಲ ಪತ್ರವನ್ನೋದಿಕೊಂಡಳು. ಅವಳ ಮುಖದ ಮೇಲೆ ವಿಷಾದದ ಛಾಯೆಯು ಘನೀಭವಿಸುವದರಲ್ಲಿತ್ತು. ಅವಳು: "ಈ ಸಂಗತಿಯು ನಿಜವಿರಬಹುದೇನು? ಏನೇ ಇರಲಿ, ನೀವು ಒಮ್ಮೆ ಅಲ್ಲಿಗೆ ಹೋಗಿ ನಿಜ ಸಂಗತಿಯನ್ನು ನೋಡಿಕೊಂಡು ಬರಲಿಕ್ಕೇಬೇಕು" ಎಂದು ಅಂದಳು.

"ನಾನು ಹೇಗೆ ಹೋಗಲಿ? ನನಗೆ ಕೊಂಚವೂ ಅವಕಾಶವಿಲ್ಲದಾಗಿದೆ."

"ಹೇಗೆಂದರೆ ನಾನು ಕೇಳತಕ್ಕವಳಲ್ಲ. ಅಣ್ಣನ ಈ ವಿಪತ್ಪ್ರಸಂಗದಲ್ಲಿ ಅವನಿಗೆ ನಾವು ಸಹಾಯ ಮಾಡದಿದ್ದರೆ, ಮತ್ತಾರು ಸಹಾಯಕರಾಗಬೇಕು? ಈ ಪತ್ರವಲ್ಲಿಯ ಅರ್ಧಸಂಗತಿಯು ನಿಜವಿದ್ದರೂ ಅಣ್ಣನು ಸಂಕಟಪರಂಪರೆಯಲ್ಲಿ ಸಿಕ್ಕಿರುವನೆಂಬುವು ಮಾತ್ರ ನಿಶ್ಚಿತವಾದದ್ದು. ನೀವು ಈ ಸಂಕಟದಿಂದ ಅಣ್ಣನನ್ನು ರಕ್ಷಿಸಲಿಕ್ಕೇಬೇಕು."

"ನೀನಂದದ್ದು ನಿಜ; ಆದರೆ ನಾನು ಅಲ್ಲಿಗೆ ಹೋಗುವದು ಹೇಗೆ? ಕಚೇರಿಯ ಕೆಲಸಗಳಲ್ಲಿ ನನಗೆ ಒಂದೆರಡು ದಿನಗಳ ಅವಕಾಶವು ಕೂಡ ದೊರೆಯದಾಗಿದೆ. ಒಂದುವೇಳೆ ಆ ಕೆಲಸಗಳನ್ನೆಲ್ಲ ಬದಿಗಿರಿಸಿ ಹೋದರೂ, ಕೃತಕಾರ್ಯನಾಗಿಯೇ ಬಿಡುವೆನೆಂಬುದರ ನಿಶ್ಚಯವಿಲ್ಲದಾಗಿದೆ; ಯಾಕೆಂದರೆ, ಈ ಪ್ರಸಂಗದಲ್ಲಿ ನಿನ್ನ ಅಣ್ಣನು ನನ್ನ ಮಾತನ್ನು ನಡೆಸುವನೋ-ಇಲ್ಲವೋ ಎಂಬುದನ್ನಾರು ಬಲ್ಲರು?"

ಇಬ್ಬರೂ ಕೆಲಹೊತ್ತು ಸುಮ್ಮನಿದ್ದರು. ಬಳಿಕ ಭೀಮರಾಯನು ನಿಟ್ಟುಸಿರಬಿಟ್ಟು ನುಡಿಯಹತ್ತಿದನು:-"ದುರ್ಬಲ ಪ್ರಕೃತಿಯ ರಂಗನು ಪ್ರವೃತ್ತಿಯ ದಾಸನು. ಅವನಿಂದ ಇಂತಹ ಕೆಲಸವಾದೀತು-ಇಲ್ಲವೆ ಆಗಲಿಕ್ಕಿಲ್ಲವೆಂದು ಹೇಳಲಿಕ್ಕೆ ಬರುವಂತಿಲ್ಲ. ಅವನು ಯಾವ ಕೆಲಸವನ್ನೂ ಮಾಡಲಿಕ್ಕಿಲ್ಲ; ಅಥವಾ ಎಲ್ಲ ಕೆಲಸಗಳನ್ನೂ ಮಾಡುವನು! ಆ ಚಂಚಲಚಿತ್ತನು ಏನೇ ಮಾಡಲಿ; ಹಾಳಾಗಿ ಹೋಗಲಿ! ನಾನು ವಿಶೇಷ ದುಃಖಗೊಳ್ಳುವದಿಲ್ಲ. ಅವನು ತನ್ನೊಡನೆ ಹುಡುಗನನ್ನೂ ಕೆಡಿಸುತ್ತಿರುವದಕ್ಕಾಗಿ ನನಗೆ ಬಹಳ ದುಃಖವಾಗುತ್ತದೆ. ನಾವು ಈಗಲೇ ಅವನನ್ನು ಈ ಪ್ರವೃತ್ತಿಯಿಂದ ತಡೆಯಲಿಕ್ಕೆಬೇಕು."

ಸುಭದ್ರೆಯು ಮನಸ್ಸಿನ ವಿಷಾದಾತಿರೇಕದಿಂದ ಗಂಭೀರಮುಖಿಯಾಗಿ ಸುಮ್ಮನೆ ಕುಳಿತಿದ್ದಳು. ಭೀಮರಾಯನು ಕೆಲ ಸಮಯದ ವರೆಗೆ ಸ್ತಬ್ಧವಾಗಿದ್ದು, ಮತ್ತೆ ಮಾತಾಡಹತ್ತಿದನು:-"ಇಂತಹದೊಂದು ದುರ್ಘಟನೆಯು ಘಟಿಸುವದೆಂದು ನಾನು ಮೊದಲೇ ತರ್ಕಿಸಿದ್ದೆನು; ಯಾಕೆಂದರೆ, ರಂಗನು ಭಾಮಿನಿಯನ್ನು ನಿಜವಾಗಿಯೂ ಪ್ರೀತಿಸುತ್ತಿದ್ದನು. ಅವನು ರಾಮನ ತಾಯಿಯನ್ನು ಇಷ್ಟೊಂದು ಪ್ರೀತಿಸಿದವನಲ್ಲ. ಈಗ ನಡೆದಿರುವುದು ಆ ಉದಾತ್ತ ಪ್ರೇಮದ ಪ್ರತಿಕ್ರಿಯೆಯು."

ಸುಭದ್ರೆಯು ಕೋಪದಿಂದ ಹೀಗೆ ನುಡಿದಳು:—"ಅಣ್ಣನು ಈ ಮಾರ್ಗದಿಂದ ಭಾಮಿನಿಯ ಮನವೊಲಿಸಬೇಕೆಂದಿರುವನೆ? ನಾನಿದನ್ನು ನಂಬಲಾರೆನು! ನನ್ನ ಅಣ್ಣನು ದುರ್ಬಲ ಪ್ರಕೃತಿಯುವನಾಗಿರಬಹುದು; ಆದರೆ ಹೀನವೃತ್ತಿಯುವನೆಂದೂ ಆಗಲಾರನು. ಯಾರ ಸಲುವಾಗಿಯೂ ಅವನು ಇಂತಹ ನಟನೆಯನ್ನು ನಟಿಸ ಬಯಸುವದು ಸಂಭವವಿಲ್ಲ."

ಪ್ರೇಮದ ಪ್ರತಿಕ್ರಿಯೆಯು ಎಂತಹ ಅದ್ಭುತ ವ್ಯಾಪಾರವೆಂಬುದನ್ನು ಸುಭದ್ರೆಯು ಅರಿಯಳು. ಭೀಮರಾಯನಾದರೂ ಈ ಶಬ್ದವನ್ನು ಪುಸ್ತಕದಲ್ಲಿ ಓದಿಕೊಂಡಿದ್ದನೇ ಹೊರತು, ಅನುಭವದಿಂದ ಅರಿತುಕೊಂಡವನಲ್ಲ. ಕಾರಣ ಇವನು ಹೆಂಡತಿಯ ಕುಪಿತ ವಚನಗಳಿಗೆ

ಉತ್ತರ ಕೊಡಬಯಸಲಿಲ್ಲ; ತನಗೆ ಗೊತ್ತಿರದ ವಿಷಯದಲ್ಲಿ ವಾಗ್ಯುದ್ಧವನ್ನು ನಡೆಸಲಿಕ್ಕೆ ಸಾಹಸಗೊಳ್ಳಲಿಲ್ಲ.

ಪ್ರತಿಕ್ರಿಯಾ ಶಬ್ದದ ಅರ್ಥವು ಏನೇ ಇರಲಿ, ಪರಿಣಾಮವು ಹೇಗೇ ಆಗಲಿ, ಮಾತ್ರ ಸುಭದ್ರೆಯು ತನ್ನ ಹಟವನ್ನು ಸಾಧಿಸಿಕೊಂಡಳು. ಭೀಮರಾಯನು ತನ್ನ ಕೆಲಸಗಳನ್ನು ಬದಿಗಿರಿಸಿ, ಒಂದೆರಡು ದಿನಗಳಲ್ಲಿಯೇ ಮಂತ್ರಾಲೆಗೆ ಹೊರಡಬೇಕಾಯಿತು. ಇವನು ಮಂತ್ರಾಲೆಯಿಂದ ಮರಳಿ ಬಂದು ವಿವರಿಸಿದ ಸಂಗತಿಯು ಹಾಸ್ಯಾಸ್ಪದವಾಗಿದ್ದಂತೆ ಅಪ್ರಿಯವೂ ಆಗಿತ್ತು. ಭೀಮರಾಯನು ಹೆಂಡತಿಗೆ ಹೇಳಹತ್ತಿದನು:—“ರಂಗನ ದರ್ಶನವಾಗಲಿಲ್ಲ. ಅವನು ದೇವದರ್ಶನಕ್ಕೆಂದು ಗುರುವಿನೊಡನೆ ತಿರುಪತಿಗೆ ಹೋಗಿದ್ದನು. ನಾನು ರಾಮನನ್ನು ಮಾತ್ರ ನೋಡಿದೆನು. ಅವನು ಬ್ರಹ್ಮಚಾರಿಯ ವೇಷದಿಂದಿದ್ದನು. ಶಾಲೆಗೆ ಹೋಗುವದನ್ನು ಬಿಟ್ಟುಕೊಟ್ಟು, ಆಚಾರ್ಯರ ಬಳಿಯಲ್ಲಿ ಸಂಸ್ಕೃತವನ್ನು ಕಲಿಯುತ್ತಿರುವನಂತೆ. ಸ್ನಾನ-ಸಂಧ್ಯಾದಿಗಳು ಯಥಾಕ್ರಮವಾಗಿ ಸಾಗಿರುವವಂತೆ.” ಭೀಮರಾಯನು ತುಸ ಹೊತ್ತು ಸುಮ್ಮನಿದ್ದು, ಮತ್ತೆ ಹೇಳತೊಡಗಿದನು:—“ರಾಮನು ನನ್ನನ್ನು ನೋಡುತ್ತಲೆ ಕಣ್ಣಲ್ಲಿ ನೀರು ತಂದನು. ನನಗೆ ಬಹಳ ಕೆಡಕೆನಿಸಿತು. ಅವನ ಮುಖಲಕ್ಷಣವನ್ನು ನೋಡುತ್ತಿರಲು, ಅವನಿಗೆ ಆಹಾರದ ಕಷ್ಟವು ಅತಿಶಯವಾಗಿದೆಯೆಂದು ನನಗೆ ಅನಿಸಿತು.”

ಸುಭದ್ರೆಯು ರಾಮನನ್ನು ಪ್ರೀತಿಸುತ್ತಿದ್ದಳು. ಈ ಪ್ರೇಮವು ಅಷ್ಟೊಂದು ಉದಾತ್ತವಾಗಿರದಿದ್ದರೂ, ಅಳಿಯನು ದೂರ ದೇಶದಲ್ಲಿ ಆಹಾರವಿಲ್ಲದೆ ಬಳಲುತ್ತಿರುವನೆಂಬದನ್ನು ಕೇಳಿ ಸಹಿಸದವಳಾದಳು. ಇವಳು ಕಣ್ತುಂಬ ನೀರು ತಂದು: “ನೀವು ಅವನನ್ನು ನಿಮ್ಮ ಸಂಗಡ ಕರೆತರಲಿಲ್ಲವೇಕೆ?” ಎಂದು ಕೇಳಿದಳು.

ಕರೆತರಬೇಕೆಂಬ ಇಚ್ಛೆಯು ನನಗೂ ಆಗಿತ್ತು; ಆದರೆ ಪರಿಣಾಮವು ಒಳಿತಾಗಲಿಕ್ಕಿಲ್ಲೆಂದು ಭಾವಿಸಿ ಬಿಟ್ಟು ಬಂದೆನು. ಎಲ್ಲ ಆಕರ್ಷಣ ಶಕ್ತಿಗಳಲ್ಲಿ ಧರ್ಮಾಕರ್ಷಣವು ಹೆಚ್ಚು ಬಲವತ್ತರವಾದದ್ದು!

ನಾನು ಈಗ ರಾಮುನನ್ನು ಕರೆತಂದಿದ್ದರೆ, ರಂಗನು ನಮ್ಮ ಮೇಲೆ ವಿಶೇಷ ಕೋಪಗೊಳ್ಳುತ್ತಿದ್ದನು."

ಸುಭದ್ರೆಯು ಕಣ್ಣುಗಳನ್ನೊರಿಸಿಕೊಳ್ಳುತ್ತ: "ನಾನೂ ನಿಮ್ಮ ಸಂಗಡ ಬಂದಿದ್ದರೆ ಒಳಿತಾಗುತ್ತಿತ್ತು." ಎಂದು ನುಡಿದಳು.

ಇದರ ಇಂಗಿತವೇನು?

ರಂಗರಾಯನು ಪತ್ರ ಬರೆಯುವದನ್ನು ಬಿಟ್ಟುಕೊಟ್ಟಿದ್ದನು. ಆದರೂ ಆತ್ಮೀಯರೂ, ಬಂಧು-ಬಾಂಧವರೂ, ಗೆಳೆಯರೂ ರಂಗ ರಾಯನ ಮಾತೆತ್ತಿ ಚರ್ಚಿಸಹತ್ತಿದರು. ಕೆಲವರು ರಂಗರಾಯನ ಅದ್ಭುತ ಸಾಧನೆಯ ಮಹತಿಯನ್ನು ವಿವರಿಸಿ, ರಂಗರಾಯನನ್ನು ಸ್ತುತಿಸುತ್ತಿದ್ದರು; ಬೇರೆ ಹಲವರು ಕುತ್ಸಿತ ಮಾತುಗಳನ್ನೆತ್ತಿ, ರಂಗ ರಾಯನ ಉಪಹಾಸ ಮಾಡುತ್ತಿದ್ದರು. ರಂಗರಾಯನ ಈ ಕೀರ್ತಿ ಕಥೆಯು ಮಧ್ವರಾಯನ ಮನೆಗೆ ಮುಟ್ಟಲಿಕ್ಕೆ ವಿಲಂಬವಾಗಲಿಲ್ಲ. ಸುಭದ್ರೆಯು ನಾಚುಗೆಯಿಂದ ಸಮಾಜದಲ್ಲಿ ಮೋರೆ ದೋರದಾದಳು. ಆಗಾಗ್ಗೆ ಪತಿಯ ಬಳಿಯಲ್ಲಿ ಮಾತ್ರ:—"ಅಣ್ಣನು ಇಲ್ಲಿಗೆ ಒಮ್ಮೆ ಬಂದಾದರೂ ಬರಲಿ; ಇಲ್ಲಿ ಆವನ ಹುಚ್ಚುಚ್ಚಾರವನ್ನು ನಾನೆಷ್ಟು ಮಾತ್ರಕ್ಕೂ ನಡೆಯಗೊಡೆನು!" ಎಂದು ಬೆಡಗಿನಿಂದ ನುಡಿಯುತ್ತಿದ್ದಳು. ಭೀಮರಾಯನು ಈ ಮಾತಿಗೆ ಉತ್ತರ ಕೊಡುತ್ತಿದ್ದಿಲ್ಲ. ಯಾಕಂದರೆ, ತನ್ನ ಹೆಂಡತಿಯಿಂದ ಯಾವ ಕಾರ್ಯವೂ ಆಗದೆಂದು ಇವನು ತಿಳಿದಿದ್ದನು; ಆದರೆ ಭೀಮರಾಯನು ಸಮಾಜದ ಸಮವೇತ ಶಕ್ತಿಯ ವಿಷಯದಲ್ಲಿ ನಂಬುಗೆಯುಳ್ಳವನಾಗಿದ್ದನು. ಬಹು ಜನರು ಕೂಡಿ ಒತ್ತಾಯ ಪಡಿಸಹತ್ತಿದರೆ, ದುರ್ಬಲ ಪ್ರಕೃತಿಯ ರಂಗ ರಾಯನು ಹಾದಿಗೆ ಬಾರದಿರನೆಂದು ಭಾವಿಸಿದ್ದನು.

ರಂಗರಾಯನು ಮತ್ತೆ ನಾಲ್ಕು ತಿಂಗಳ ರಜೆಯನ್ನು ತಕ್ಕೊಂಡಿದ್ದನು. ಒಟ್ಟು ರಜೆಯ ಅವಧಿಯು ಮುಗಿಯುವದಕ್ಕೆ ಇನ್ನು ಎರಡು

ತಿಂಗಳ ಅವಕಾಶವಿತ್ತು. ರಂಗರಾಯನು ನವಕರಿಯನ್ನು ಬಿಡನೆಂಬ ವಿಷಯದಲ್ಲಿ ಭೀಮರಾಯನು ನಿಶ್ಚಿಂತನಾಗಿದ್ದನು; ಯಾಕಂದರೆ ರಂಗರಾಯನ ಗುರುವು ರಂಗರಾಯನಿಗೆ ಯಾವುದೇ ಮಂತ್ರದ ಉಪದೇಶ ಮಾಡಲಿ, ನವಕರಿ ಬಿಡು ಎಂಬ ಮಂತ್ರದ ಉಪದೇಶ ಮಾಡನೆಂಬದನ್ನು ಇವನು ನಿರ್ಧರಿಸಿದ್ದನು.

ಇಂದಿನ ಚಹಾಪಾನದ ಸಮಯದಲ್ಲಿ ಭೀಮರಾಯನು ಹೆಂಡತಿಯನ್ನುದ್ದೇಶಿಸಿ ಮಾತಾಡಹತ್ತಿದನು: "ಇನ್ನು ಭಾಮಿನಿಯು ಇಲ್ಲಿಗೆ ಬಂದರೆ, ಅವಸರದಿಂದ ತಮ್ಮನನ್ನು ಕರೆಸಿಕೊಂಡು ತೌರುಮನೆಗೆ ಹೋಗುವ ಪ್ರಸಂಗ ಬಾರದು. ಸತಿ-ಪತಿಗಳಿಬ್ಬರೂ ಜಪ-ತಪಗಳಲ್ಲಿ ತೊಡಗಿ, ಸ್ವಚ್ಛಂದದಿಂದ ಕಾಲ ಕಳೆಯುವರು."

ಬಾಡಿದ ಮೋರೆಯಿಂದ ಸುಭದ್ರೆಯು: "ಭಾಮಿನಿಯು ಮತ್ತೆ ಬರತಕ್ಕವಳಿರುವಳೆಂಬ ಸುದ್ದಿಯನ್ನು ನೀವು ಕೇಳಿರುವಿರೇನು?"

"ಇಲ್ಲ."

ಸುಭದ್ರೆಯು ಕ್ಷಣಕಾಲ ಸುಮ್ಮನಿದ್ದು, ಬಳಿಕ ಮೆಲ್ಲನೆ ಮಾತಾಡಲುಪಕ್ರಮಿಸಿದಳು: "ಹಳ್ಳಿಗಳಲ್ಲಿ ಮದ್ದು-ಮಾಟಗಳ ಗೊಂದಲವು ಬಹಳವಿರುವದಂತೆ. ನೀವು ಮದ್ದು-ಮಾಟಗಳನ್ನು ನಂಬುತ್ತಿರುವಿರಾ?"

"ನಾನು ನಂಬುವದಿಲ್ಲ. ಒಂದು ವೇಳೆ ಮದ್ದು-ಮಾಟಗಳಿದ್ದರೂ, ಭಾಮಿನಿಯು ಇವುಗಳ ಉಪಯೋಗ ಮಾಡಿಕೊಳ್ಳತಕ್ಕವಳಲ್ಲ." ಭೀಮರಾಯನು ನಕ್ಕು ನುಡಿದನು.

"ಯಾಕೆ ಮಾಡಿಕೊಳ್ಳಲಾರಳು?"

"ಭಾಮಿನಿಯ ವಿಷಯದಲ್ಲಿ ನಾನು ಸಂತುಷ್ಟನಲ್ಲ; ಅವಳ ಮೇಲಿದ್ದ ಮುನ್ನಿನ ಶ್ರದ್ಧೆಯೂ ಈಗ ನನ್ನಲ್ಲಿ ಉಳಿದಿಲ್ಲ; ಆದರೂ ಇಂತಹ ಹೀನ ಕಾರ್ಯಗಳನ್ನು ಅವಳೆಂದೂ ಆಚರಿಸಳೆಂದು ನಾನು ಆಣೆ ಮಾಡಿ ಹೇಳಬಲ್ಲೆನು."

ಸುಭದ್ರೆಯು ಪತಿಯು ಈ ಮಾತನ್ನು ನಂಬಲಿಲ್ಲ. ಅವಳು ಈ ವಿಷಯದಲ್ಲಿ ಮಾತು ಬೆಳೆಸಲಾರದವಳಾಗಿ: "ಏನೇ ಆಗಲಿ, ರಾಮ

ನನ್ನ ಹೇಗಾದರೂ ಮಾಡಿ ಇಲ್ಲಿಗೆ ಕರೆತರಲಿಕ್ಕೆ ಬೇಕು.'' ಎಂದು ನುಡಿದು ಸುಮ್ಮನಾದಳು.

ಈ ಸಮಯದಲ್ಲಿ ರಂಗರಾಯನ ಸೇವಕನು ಪಿಯಾನೊ ಪೆಟ್ಟಿಗೆಯನ್ನು ಬೇಡಬಂದಿರುವ ಸುದ್ದಿಯನ್ನು ಈ ದಂಪತಿಗಳು ಕೇಳಿದರು. ವಿಸ್ಮಿತರಾಗಿ ಆ ಸೇವಕನ ಹತ್ತಿರ ಹೋದರು. ‘‘ಪಿಯಾನೊ ಪೆಟ್ಟಿಗೆ ಏತಕ್ಕೆ ಬೇಕು?” ಭೀಮರಾಯನು ಆ ಸೇವಕನನ್ನು ಕೇಳಿದನು.

‘‘ಮನೆಗೆ ಮೂವರು-ನಾಲ್ವರು ಹೊಸಬರು ಬಂದಿದ್ದಾರೆ. ಇಂದು ಮನೆಯಲ್ಲಿ ಗಾಯನ-ವಾದನಗಳು ನಡೆಯುತಕ್ಕವಿವೆ.'' ಆ ಸೇವಕನು ಹೇಳಿದನು.

‘ಅಣ್ಣನು ಬಂದಿರುವನೇ?’ ಸುಭದ್ರೆಯು ಕೌತುಕಾತಿಶಯದಿಂದ ಕೇಳಿದಳು.

‘‘ರಂಗರಾಯರು ಬಂದಿರುವರೇ?'' ಭೀಮರಾಯನು ಕೇಳಿದನು.

‘‘ಎಲ್ಲರೂ ನಿನ್ನಿನ ರಾತ್ರಿಯಲ್ಲಿ ಬಂದರು'' ಸೇವಕನು ಹೇಳಿದನು; ಹಾಗು ಪಿಯಾನೊ ಪೆಟ್ಟಿಗೆಯನ್ನು ತಕ್ಕೊಂಡು ತಿರುಗಿ ಹೋದನು. ದಂಪತಿಗಳು ಕೆಲಹೊತ್ತು ನೀರವವಾಗಿ ನಿಂತುಬಿಟ್ಟರು!

ಮರುದಿನ ಮುಂಜಾವಿನಲ್ಲಿ ಭೀಮರಾಯನು ಹೆಂಡತಿಯನ್ನೂ ತಂಗಿಯನ್ನೂ ಸಂಗಡ ಕರೆದುಕೊಂಡು ರಂಗನ ಮನೆಗೆ ಹೋದನು. ಲಾಯಬ್ರರಿಯ ಕೋಣೆಯ ಬಾಗಿಲಲ್ಲಿ ನಿಂತು ಒಳಗೆ ನೋಡಿದನು. ರಂಗರಾಯನಿರಲಿಲ್ಲ. ಮೊದಲಿನ ಕುರ್ಚಿ-ಮೇಜು-ಕಪಾಟುಗಳಿರಲಿಲ್ಲ. ನೆಲದ ಮೇಲೆ ಕಂಬಳಿಗಳು ಹಾಸಲ್ಪಟ್ಟಿದ್ದುವು. ಮೇಲೆ ಜಾಜೂಮು ಹಾಸಲ್ಪಟ್ಟಿತ್ತು. ಭೀಮಸೇನನಂತಿರುವ ಇಬ್ಬರು ಬ್ರಾಹ್ಮಣರು ದಿಂಬುಗಳಿಗೆ ಆವಿತುಕೊಂಡು ಸ್ವಚ್ಛಂದದಿಂದ ಕುಳಿತಿದ್ದು, ಎಲೆ-ಅಡಿಕೆ-ತಂಬಾಕುಗಳ ಹೋಳಿಯನ್ನು ನಡೆಸಿದ್ದರು. ಮನಬಂದಂತೆ ಹರಟೆಯನ್ನು ಸಾಗಿಸಿದ್ದರು. ಇವರು ಎದುರಿನಲ್ಲಿ ಸಾಹೇಬ-ಮೇಮಸಾಹೇಬರು ಬರುತ್ತಿರುವದನ್ನು ನೋಡಿ. ಗಾಬರಿಯಿಂದ ಎದ್ದು ನಿಂತರು. ಭೀಮರಾಯನು ಇವರ ವಿಶ್ರಾಂತಿಗೆ ವ್ಯಾಘಾತವನ್ನುಂಟುಮಾಡಲಿಕ್ಕೆ

ಇಚ್ಛಿಸಲಿಲ್ಲ. ಆ ಕೋಣೆಯಲ್ಲಿ ಹೋಗದೆ, ಅಂತಸ್ತಿನ ಮೇಲೆ ಏರಿ ಹೋಗಹತ್ತಿದನು. ಸುಭದ್ರೆಯೂ, ಸುಶೀಲೆಯೂ ಭೀಮರಾಯನನ್ನು ಹಿಂಬಾಲಿಸಿ ನಡೆದರು.

ಸೇವಕನು ಭೀಮರಾಯನನ್ನು ಮುಂದೆ ಹೋಗಗೊಡಲಿಲ್ಲ. ಸಾಹೇಬರು ಗುರುವಿನ ಸನ್ನಿಧಾನದಲ್ಲಿರುವರೆಂದೂ, ಮೇಲೆ ಯಾರನ್ನೂ ಬಿಡಕೂಡವೆಂದು ಅಪ್ಪಣೆ ಮಾಡಿರುವರೆಂದೂ ವಿನಯದಿಂದ ನುಡಿದನು. ಭೀಮರಾಯನು ಅಲ್ಲಿಯೇ ನಿಂತು: 'ರಂಗ, ರಂಗ' ಎಂದು ಗಟ್ಟಿಯಾಗಿ ಕೂಗಹತ್ತಿದನು; ಆದರೆ ರಂಗರಾಯನು ಬರಲಿಲ್ಲ-ರಾಮನು ಓಡಿ ಬಂದನು. ಅವನ ಇರವನ್ನೂ ವೇಷವನ್ನೂ ನೋಡಿ. ಸುಭದ್ರೆಯು ಕಣ್ಣೀರು ತಡೆಯದಾದಳು. ಬರಿಮೈಯಿಂದಿದ್ದ ರಾಮನು ಕೇವಲ ಲಂಗೋಟಿಯನ್ನು ಧರಿಸಿದ್ದನು. ಕೊರಳಲ್ಲಿ ತುಳಸೀಮಣಿಯ ಮಾಲೆಯಿತ್ತು. ದೇಹವು ಸೊರಗಿ ಹೋಗಿತ್ತು. ರಾಮನು ಇವರ ಹತ್ತಿರ ಬರಲಿಲ್ಲ. ದೂರದಲ್ಲಿಯೇ ನಿಂತು ನಮಸ್ಕರಿಸಿದನು. ಸುಶೀಲೆಯು ರಾಮನನ್ನು ಹಿಡಿಯಬೇಕೆಂಬಾಶೆಯಿಂದ ಧಾವಿಸುವುದರಲ್ಲಿದ್ದಳು; ಆದರೆ ಭೀಮರಾಯನು ಬೇಡವೆಂದು ಸನ್ನೆಮಾಡಿ:—"ಈ ಸಮಯದಲ್ಲಿ ಅವನನ್ನು ಮುಟ್ಟಬೇಡ. ನೀನು ಅವನನ್ನು ಮುಟ್ಟಿದರೆ, ಮೈಲಿಗೆಯಾಯಿತೆಂದು ಭಾವಿಸಿ, ಅವನು ಮತ್ತೆ ಸ್ನಾನ ಮಾಡಬೇಕಾದೀತು" ಎಂದು ನುಡಿದನು.

ಭೀಮರಾಯನು ತುಸಹೊತ್ತು ಸುಮ್ಮನಿದ್ದು, ಬಳಿಕ:-"ರಾಮು, ಅಪ್ಪನೆಲ್ಲಿರುವನು?" ಎಂದು ಕೇಳಿದನು.

"ಪೂಜ್ಯಪಾದ ಗುರುಗಳ ಸನ್ನಿಧಿಯಲ್ಲಿ ಕುಳಿತು ಭಾಗವತವನ್ನು ಶ್ರವಣ ಮಾಡುತ್ತಿರುವನು."

"ನಾವು ಇಲ್ಲಿಯೇ ನಿಂತಿರುವೆವು. ಅಪ್ಪನನ್ನು ಕಳುಹಿ ಕೊಡು." ಭೀಮರಾಯನು ಹೇಳಿದನು.

"ನೀವು ಬಂದ ಸುದ್ದಿಯು ಅಪ್ಪನಿಗೆ ಗೊತ್ತಾಗಿದೆ. ಇನ್ನು ಮೇಲೆ ಬರುವನು."

ಕೆಲ ಕಾಲದ ಮೇಲೆ ಆವ್ರಗೆಗಳನ್ನು ಧರಿಸಿದ್ದ ರಂಗರಾ
ಬಂದನು. ಮೈಮೇಲೆ ಉಡುವ-ಹೊದುವ ದೋತರಗಳ ಹೊ
ಬೇರೆ ಬಟ್ಟೆಯಿರಲಿಲ್ಲ. ಕೊರಳಲ್ಲಿ ತುಳಸೀಮಾಲೆಯಿತ್ತು. ವ
ಲಕ್ಷಣದಲ್ಲಿ ಪರಿವರ್ತನೆಯಿರಲಿಲ್ಲ. ಶರೀರವು ಸೊರಗಿರಲಿಲ್ಲ; ಆ
ಆಚರಣೆಯಲ್ಲಿ ವಿಶೇಷ ಸ್ಥಿತ್ಯಂತರವಾಗಿತ್ತು. ವಿನೀತಭಾವಪ್ರದಶ
ಮೆಲ್ಲನೆ ಮಾತಾಡುವಿಕೆ ಮೊದಲಾದವುಗಳು ರಂಗರಾಯನ ಸ್ವಭ
ಪರಿವರ್ತನೆಯನ್ನು ಸೂಚಿಸುತ್ತಿದ್ದವು. ಸುಭದ್ರೆಯೂ ಸುಶೀಲೆಯ
ನಮಸ್ಕಾರ ಮಾಡುತ್ತಲೆ, ರಂಗರಾಯನು ದೂರ ಸರಿದು ನಿಂ
ಆಶೀರ್ವಾದ ಮಾಡಿದನು.

"ಮನೆಯಲ್ಲಿ ನಮಗೆ ಕುಳ್ಳಿರಲಿಕ್ಕೆ ಸ್ಥಳವಿಲ್ಲದಾಯಿತೆ?" ಭೀ
ರಾಯನು ಕೇಳಿದನು. ರಂಗರಾಯನು ಲಜ್ಜಿತನಾಗಿ:—"ನಿನ್ನೆ ಬಂ
ರುವೆನು. ಒಂದೆರಡು ದಿನಗಳಲ್ಲಿ ತಕ್ಕ ವ್ಯವಸ್ಥೆ ಮಾಡಿಸುವೆನು.

"ಹೀಗಿದ್ದರೆ, ಈಗ ನಾವು ಮನೆಗೆ ತಿರುಗಿ ಪೋಗುವೆವು
ಇನ್ನು ನಿನಗೆ ನಮ್ಮ ಪ್ರಯೋಜನವಿಲ್ಲದು. ಆದರೂ ತಕ್ಕ ವ್ಯವಸ್
ಯಾಗುತ್ತಲೆ ತಿಳುಹು. ಒಮ್ಮೆ ಬಂದು ನಾಲ್ಕು ಮಾತುಗಳಾಡಿ ಹೋಗ
ಬೇಕೆಂದಿರುವೆವು."

ರಂಗರಾಯನು ಮಾತಾಡದೆ ಸುಮ್ಮನಿದ್ದನು. ಭೀಮರಾಯನು
ಸುಭದ್ರೆ-ಸುಶೀಲೆಯರೊಡನೆ ಮನೆಗೆ ಹೊರಟನು. ಮೋಟರ ಬಂಡಿ
ಯಲ್ಲಿ ಸುಭದ್ರೆಯು ಪಿಟ್ಟೆಂದು ಮಾತಾಡಲಿಲ್ಲ. ಇವಳ ಕಣ್ಣುಗಳಿಂದ
ಅಶ್ರುಗಳು ತಾವೇ ತಾವಾಗಿ ಹೊರಬೀಳುತಲಿದ್ದುವು. ಇನ್ನು ತವರು
ಮನೆಯಲ್ಲಿ ತನಗೆ ಸ್ಥಳವಿಲ್ಲವೆಂಬುದನ್ನು ಸುಭದ್ರೆಯು ಗೊತ್ತುಮಾಡಿ
ಕೊಂಡಿದ್ದಳು. ಇವಳ ಅಣ್ಣನು ಏನೇ ಅನ್ನಲಿ, ಒತ್ತಾಯದಿಂದಾ
ದರೂ ರಾಮುನನ್ನು ಮನೆಗೆ ಕರೆಕೊಂಡು ಹೋಗಬೇಕೆಂದು ಮಾಡಿ
ದ್ದಳು; ಆದರೆ ತವರು ಮನೆಯಲ್ಲಿ ನಡೆದಿದ್ದ ಆ ಅನಾಹೂತವನ್ನು
ನೋಡಿದ ಬಳಿಕ, ಈ ಕೆಲಸವೂ ತನ್ನಿಂದಾಗದೆಂದು ಗೊತ್ತುಮಾಡಿ
ಕೊಳ್ಳಲಿಕ್ಕೆ ತಡಹಿಡಿಯಲಿಲ್ಲ.

ಮುಂದೆ ಒಂದು ತಿಂಗಳು ಕ್ರಮಿಸಿತು. ಬಂಧು-ಬಾಂಧವರೂ ಸ್ನೇಹಿತರೂ ರಂಗರಾಯನ ವಿಷಯವನ್ನೆತ್ತಿ ಮನಬಂದಂತೆ ಮಾತಾಡಿ ಕೊಳ್ಳುತ್ತಿದ್ದರು. ಸುಭದ್ರೆಯು ಈ ಜನರಿಗೆ ಮೋರೆ ತೋರಿಸದವ ಳಾದಳು; ಎಲ್ಲಿಯೂ ಹೋಗಲಾರವಳಾದಳು. ಭೀಮರಾಯನೂ ಖಿನ್ನ ನಾಗಿ, ಬಗೆ ಬಗೆಯ ಯೋಜನೆಗೊಳಗಾದನು:--"ರಂಗರಾಯನು ಪರಲೋಕದ ಸೌಖ್ಯದ ಬೆನ್ನಹತ್ತಿದ್ದಾನೆ. ಅವನನ್ನು ಈ ಕೃತಿಯಿಂದ ತಡೆಯುವುದು ಹೇಗೆ? ಮೇಲಾಗಿ ಭಾಮಿನಿಯ ಭಯವಂತೂ ಇದ್ದೇ ಇದೆ. ಆತ್ಮೀಯಳಾಗಿ ಬಂದ ಆ ಕುಹಕಿನಿಯು ಅಲ್ಪಾವಧಿಯಲ್ಲಿಯೆ ಈ ಬೇಗೆಯನ್ನು ಹರಡಿ, ಮಾಯವಾಗಿ ಹೋಗಿಬಿಟ್ಟಳು! ಈಗಳಿನ ರಂಗರಾಯನ ಸ್ಥಿತಿಯ ಸುದ್ದಿಯನ್ನು ಕೇಳಿ ಅವಳು ಮತ್ತೆ ಬಂದು ಬಿಟ್ಟರೆ, ಅನರ್ಥಪರಂಪರೆಗೆ ಆಳತೆಯಿಲ್ಲದಾಗಿ ಹೋಗುವುದು!"

ಈ ಸಮಯದಲ್ಲಿ ಸುಭದ್ರೆಯೊಬ್ಬಳೇ ಅಲ್ಲ, ಸುಶೀಲೆಯೂ ಭೀಮರಾಯನೂ ಭಾಮಿನಿಯ ಮೇಲೆ ಕೋಪಗೊಂಡಿದ್ದರು. ಇವ ರೆಲ್ಲರೂ ಇಷ್ಟೆಲ್ಲ ಅನರ್ಥಕ್ಕೆ ಭಾಮಿನಿಯೇ ಮೂಲ ಕಾರಣಳೆಂದೂ, ಅವಳು ಇಲ್ಲಿಗೆ ಬರದಿದ್ದರೆ ಈ ಉತ್ಪಾತವೇಳುತ್ತಿರಲಿಲ್ಲವೆಂದೂ ಭಾವಿಸಿದವರಾಗಿದ್ದರು.

ಇಂದು ರವಿವಾರ. ಭೀಮರಾಯನೂ, ಸುಭದ್ರೆಯೂ ಮುಂಜಾ ವಿನ ಚಹಾಪಾನದ ವೇಳೆಯಲ್ಲಿ ರಂಗರಾಯನ ವಿಷಯದಲ್ಲಿ ಮಾತಾಡು ತ್ತಿದ್ದರು. ಇವರು ಅಂದು ರಂಗರಾಯನ ಮನೆಗೆ ಹೋಗಿ, ಕುಳ್ಳಿರ ಲಿಕ್ಕೆ ಸ್ಥಳವನ್ನು ಕೂಡ ಕಾಣದೆ ತಿರುಗಿ ಬಂದಾಗಿನಿಂದ, ಇದು ವರೆಗೆ ಅಲ್ಲಿಗೆ ಹೋಗಿರಲಿಲ್ಲ. ಆದರೂ ರಂಗರಾಯನ ಮನೆಯಲ್ಲಿ ನಡೆಯು ತ್ತಿರುವ ಎಲ್ಲ ವ್ಯವಹಾರಗಳನ್ನು ಕೇಳಿ ತಿಳಿದವರಾಗಿದ್ದರು. ರಂಗ ರಾಯನು ಗುರು-ಶಿಷ್ಯಮಂಡಳಿಯೊಡನೆ ವಾಸವಾಗಿದ್ದಾನೆ. ಗುರುವು ಬೇಗನೆ ಹೊರಡುವ ಆಲೋಚನೆಯಲ್ಲಿಲ್ಲ. ಮನೆಯಲ್ಲಿ ದೇವಪೂಜೆಯೂ ಭಜನೆಯೂ ಒಳ್ಳೇ ವಿಜೃಂಭಣೆಯಿಂದ ಸಾಗುತ್ತಲಿದೆ. ಪ್ರಸಾದದ ವ್ಯವ ಸ್ಥೆಯೂ ಚನ್ನಾಗಿ ನಡೆದಿದೆ. ಈ ಮೊದಲಾದ ಸುದ್ದಿಗಳನ್ನು ಸುಭದ್ರೆ

ಯು ಮೊದಲೇ ತಿಳಿದಿದ್ದಳು. ಈಗ ಮತ್ತೊಂದು ಹೊಸ ಸುದ್ದಿಯನ್ನು ಕೇಳಿದ್ದಳು. ಇದಾವುದೆಂದರೆ, ರಂಗರಾಯನು ತನ್ನ ಗುರುವಿಗೆ ಮಠ ತ್ನಾಲೆಯಲ್ಲಿ ಮನೆ ಕಟ್ಟಿಸಿ ಕೊಡುವದಕ್ಕಾಗಿ ಸಾಲ ಮಾಡುವುದರಲ್ಲಿ ದ್ದಾನೆ. ಸುಭದ್ರೆಯ ವಿಷಾದಕ್ಕೆ ಪಾರಾವಾರವಿಲ್ಲದಾಯಿತು. ಇವಳು ಪತಿಯನ್ನುದ್ದೇಶಿಸಿ: ''ಅಣ್ಣನು ಸಾಲಮಾಡುವದರಲ್ಲಿದ್ದರೆ, ನೀವು ಅವನನ್ನು ತಡೆಯಲಿಕ್ಕೆಬೇಕು. ನಾವು ಈ ವೇಳೆಯಲ್ಲಿ ಸುಮ್ಮನೆ ಕುಳಿತರೆ, ಮುಂದೆ ರಾಮನ ಗತಿಯೇನು?'' ಎಂದು ನುಡಿದಳು.

ಭೀಮರಾಯನು ನಿಟ್ಟುಸಿರು ಬಿಟ್ಟು, ಇಂತು ಹೇಳಿದನು: ''ಇದರಲ್ಲಿ ನಾನೇನು ಮಾಡಲಿಕ್ಕೆ ಬರುವಂತಿದೆ? ಈ ಪ್ರಸಂಗದಲ್ಲಿ ರಂಗನು ನನ್ನ ಮಾತನ್ನು ಕೇಳುವ ಸಂಭವವಿಲ್ಲ. ಮನೆಗೆ ಹೋದರೆ ಮಾತಾಡಿಸದಿದ್ದ ಅವನು, ನಾನು ಸಾಲ ಮಾಡಬೇಡವೆಂದು ಹೇಳಿದರೆ ಬಿಡುವನೆ?''

ಸುಭದ್ರೆಯು ಯೋಚನೆಗೊಳಗಾದಳು. ಏನು ಮಾಡಬೇಕೆಂಬುದು ಇವಳಿಗೆ ಹೊಳೆಯಲಿಲ್ಲ. ಭೀಮರಾಯನು: ''ಏನೇ ಆಗಲಿ, ರಂಗನ ಮನೆಗೆ ಹೋಗದೆ ಬಹು ದಿನಗಳಾದವು. ಇಂದು ಮತ್ತೊಮ್ಮೆ ಹೋಗಿ ಬರೋಣ, ನಡೆ'' ಎಂದು ನುಡಿದನು.

ಸುಭದ್ರೆಗೆ ಇಂದು ಅತ್ಯಂತ ದುಃಖವಾಗಿತ್ತು. ಕಾರಣ ಇವಳು ಮಾನಾಪಮಾನಗಳ ಪ್ರಶ್ನೆಯನ್ನು ಮರೆದು, ಅಣ್ಣನ ಮನೆಗೆ ಹೊರಡಲಿಕ್ಕೆ ಸಿದ್ಧಳಾದಳು.

ಭೀಮರಾಯನು ಇಂದು ಸುಶೀಲೆಯನ್ನು ಸಂಗಡ ಕರೆದುಕೊಳ್ಳಲಿಲ್ಲ. ದಂಪತಿಗಳು ಮೋಟಾರ ಬಂಡಿಯನ್ನೇರಿ ರಂಗರಾಯನ ಮನೆಗೆ ಹೋದರು. ಮುಂಜಾವಿನ ಹತ್ತುಗಂಟೆಯಾಗಿತ್ತು. ಹೊರ ಮನೆಯಲ್ಲಿ ಆ ಆಗಡಬಂಬ ಬ್ರಾಹ್ಮಣರಿದ್ದು, ಅವರು ಗಂಟುಕಟ್ಟಿಕೊಳ್ಳುವುದರಲ್ಲಿದ್ದರು. ಭೀಮರಾಯನು:—''ರಂಗರಾಯನು ಮನೆಯಲ್ಲಿದ್ದಾನೆಯೆ?" ಎಂದು ಆ ಬ್ರಾಹ್ಮಣೋತ್ತಮರನ್ನು ವಿಚಾರಿಸಿದನು.

ಬ್ರಾಹ್ಮಣರು ಮೋರೆಯೆತ್ತಿ ನೋಡಿದರು. ಕ್ಷಣಕಾಲ ಸುಮ್ಮ

ನಿದ್ದರು. ಬಳಿಕ "ರಾಯರು ಮಂತ್ರಾಲಗೆ ಹೋಗಿದ್ದಾರೆ" ಎಂದು ಉತ್ತರ ಕೊಟ್ಟರು.

"ತಿರುಗಿ ಯಾವಾಗ ಬರುವನು?"

"ನಾಳೆ ಸಾಯಂಕಾಲಕ್ಕೆ."

"ರಂಗರಾಯನ ಮಗನು ಮನೆಯಲ್ಲಿರುವನೆ?"

'ಇರುವನು.' ಬ್ರಾಹ್ಮಣರು ಮತ್ತೆ ತಮ್ಮ ಕೆಲಸವಲ್ಲಿ ತೊಡಗಿದರು.

ದಂಪತಿಗಳು ರಂಗರಾಯನ ಲಾಯಬ್ರರಿ ಕೋಣೆಗೆ ಹೋಗಿ ನೋಡಿದರು. ಅದು ಮತ್ತೆ ಮೊದಲಿನ ಸಾಮಾನುಗಳಿಂದ ಮಂಡಿತವಾಗಿತ್ತು. ಸುಭದ್ರೆಯು ಸಂತೋಷದಿಂದ: 'ಅಣ್ಣನಿಗೆ ಮತ್ತೆ ಸುಬುದ್ಧಿಯುಂಟಾದಂತೆ ತೋರುತ್ತಿದೆ," ಎಂದು ನುಡಿದಳು. ಹಿಂದೆ ಸಪ್ಪಳವಾಗುತ್ತಿರುವದೆನ್ನು ಕೇಳಿ, ದಂಪತಿಗಳು ಹಿಂದಿರುಗಿ ನೋಡಿದರು. ವಿಸ್ಮಯದಿಂದ ವಾಕ್ಶಕ್ತಿಯಿಲ್ಲದವರಾಗಿ ಹೋದರು! ಹೊರಗೆ ಹೋಗಿದ್ದ ರಾಮನು 'ರಬ್ಬರಿನ ಚಂಡನ್ನು ಪುಟಿಸುತ್ತ ಪುಟಿಸುತ್ತ ಒಳಗೆ ಬರುತ್ತಿದ್ದನು. ಇಂದು ಆ ಲಂಗೋಟಿಯಿರಲಿಲ್ಲ; ತುಳಸೀ ಮಾಲೆಯಿರಲಿಲ್ಲ. ಮೈಯಲ್ಲಿ ಶರ್ಟ ತೊಟ್ಟಿದ್ದನು. ಅಂಚಿನ ದೋತರವನ್ನುಟ್ಟಿದ್ದನು. ತಲೆಯ ಮೇಲೆ ಜರದ ಟೊಪ್ಪಿಗೆಯಿತ್ತು. ರಾಮನು ಧಾವಿಸಿ ಹೋಗಿ, ಸುಭದ್ರೆಗೆ ತೆಕ್ಕೆಬಿದ್ದು: "ಅತ್ತೀ, ಅವ್ವನು ಬಂದಿದ್ದಾಳೆ; ಅಡುಗೆ ಮಾಡುತ್ತಿದ್ದಾಳೆ; ನಡೆ, ಹೋಗೋಣ." ಎಂದು ನುಡಿದನು.

ಸುಭದ್ರೆಯ ವಿಸ್ಮಯಕ್ಕೆ ಪಾರಾವಾರವಿಲ್ಲದಾಯಿತು! ಭೀಮರಾಯನು ಇಂತು ಮಾತಾಡಿದನು: "ರಾಮೂ, ನಿನ್ನ ಅವ್ವನು ಬಂದಿರುವಳೇ? ಅಂತೆಯೆ ಈ...."

"ನಿನ್ನೆ ಮಧ್ಯಾಹ್ನದಲ್ಲಿ ಬಂದಳು. ಮಾವಾ, ಅಡುಗೆಯ ಮನೆಗೆ ಹೋಗೋಣ, ನಡೆ."

"ನಡೆ."

ಮೂವರೂ ಅಡುಗೆಯ ಮನೆಯ ಹತ್ತರ ಬರುತ್ತಲೆ, ಭಾಮಿನಿಯು ಕೈ ತೊಳೆದುಕೊಂಡು ಎದ್ದು ಬಂದಳು. ಸುಭದ್ರೆಯು ಕಾಲೊಳಗಿನ ಬೂಟುಗಳನ್ನು ತೆಗೆದಿರಿಸಿ ಹೋಗಿ, ನಮಸ್ಕಾರ ಮಾಡಿ: ‘‘ಅತ್ತಿಗೆ, ನಡೆದಿದ್ದ ಅನಾಹೂತವನ್ನು ನೋಡಿದೆಯಷ್ಟೆ?’’ ಎಂದಳು.

ಭಾಮಿನಿಯು ಸುಭದ್ರೆಯ ಕೂದಲುಗಳನ್ನು ಸರಿಪಡಿಸಿ ಆಲಿಂಗಿಸಿದಳು. ನಕ್ಕು ಮಾತಾಡಹತ್ತಿದಳು:—‘‘ತಂಗೀ, ನೋಡದೇನು ಮಾಡಲಿ? ಎಲ್ಲವನ್ನೂ ನೋಡಿದೆನು. ಈ ಬಾಲಕನ ಸ್ಥಿತಿಯನ್ನು ನೋಡಿ ನನಗೆ ಅತ್ಯಂತ ದುಃಖವಾಯಿತು. ಕೂಡಲೆ ತಕ್ಕ ಏರ್ಪಾಟು ಮಾಡಿದೆನು. ನೀವು ಇಲ್ಲಿಯೇ ಇರಲಿಲ್ಲವೆ? ನೋಡಿ, ಹೇಗೆ ಸುಮ್ಮನಿದ್ದಿರಿ?’’ ಭಾಮಿನಿಯು ಭೀಮರಾಯನ ಕಡೆಗೆ ನೋಡಿದಳು.

‘‘ತಂಗೀ, ಇಷ್ಟು ಅವಸರದಿಂದ ಮಾತಾಡುವ ಕಾರಣವಿಲ್ಲ. ಸ್ವಸ್ಥಚಿತ್ತರಾಗಿ ಕುಳಿತು, ಸಾವಕಾಶವಾಗಿ ಮಾತಾಡೋಣವಂತೆ. ಈಗ ನನಗೆ ಹೊಟ್ಟೆ ಹಸಿದಿದೆ. ಮೊದಲು ನನಗೆ ಏನಾದರೂ ತಿನ್ನಲಿಕ್ಕೆ ಕೊಡು.’’ ಭೀಮರಾಯನು ಅತ್ತಿತ್ತ ನೋಡಿ:—‘‘ಶಿಷ್ಯದ್ವಯರು ಹೋಗಲಿರುವದನ್ನು ಕಂಡೆನು. ಗುರುವರ್ಯರೆಲ್ಲಿಯೂ ಕಾಣಲೊಲ್ಲರು. ಎಲ್ಲಿಗೆ ಹೋಗಿದ್ದಾರೆ?’’ ಎಂದು ಕೇಳಿದನು.

‘‘ನೀವು ಭಯಗೊಳ್ಳುವ ಕಾರಣವಿಲ್ಲ. ಅವರು ಮಂತ್ರಾಲೆಗೆ ಹೋಗಿದ್ದಾರೆ.’’ ಭಾಮಿನಿಯು ನಗುತ್ತ ನುಡಿದಳು.

‘ತಿರುಗಿ ಯಾವಾಗ ಬರುವರು?’ ಭೀಮರಾಯನು ಕೇಳಿದನು.

‘‘ತಿರುಗಿ ಬರುವದೇ ಇಲ್ಲ.’’ ಭಾಮಿನಿಯು ಮುಗುಳು ನಗೆಯಿಂದ **ಹೇಳಿದಳು.**

‘‘ತಂಗೀ, ನಿನಗೆ ಇಂತಹ ಸುಬುದ್ಧಿಯುಂಟಾದೀತೆಂಬದನ್ನು ನಾವು ಕನಸಿನಲ್ಲಿ ಕೂಡಾ ಭಾವಿಸಿದವರಲ್ಲ. ಪುರಾಣ ಮತಾಭಿಮಾನಿಯಾದ ನೀನು, ಬ್ರಹ್ಮಚಾರಿಯಾಗಿದ್ದ ರಾಮನ ಕೊರಳೊಳಗಿನ ತುಳಸೀ ಮಣಿಯ ಮಾಲೆಯನ್ನು ತೆಗೆದಿರಿಸಿದೆಯಲ್ಲವೆ? ಇದರ ಇಂಗಿತವೇನು?’’ ಭೀಮರಾಯನು ಕೇಳಿದನು.

ಭಾಮಿನಿಯು ನಗೆಮೊಗದಿಂದ ಭೀಮರಾಯನ ಮಾತನ್ನನು ಕರಿಸಿ ಇಂತು ನುಡಿದಳು:—"ಅಣ್ಣಾ, ಅವಸರದಿಂದ ಮಾತಾಡುವ ಕಾರಣವಿಲ್ಲ. ಸ್ವಸ್ಥಚಿತ್ತವಾಗಿ ಕುಳಿತು, ಸಾವಕಾಶವಾಗಿ ಮಾತಾಡೋಣ. ಈಗ ನೀವು ಮೋರೆ ತೊಳೆಯಿರಿ. ಮೊದಲು ನಿಮಗೆ ತಿನ್ನಲಿಕ್ಕೆ ಕೊಡುವೆನು.

ವಂಚಿತಳಾಗಲಿಲ್ಲ.

ವಾಚಕಮಹಾಶಯ, ನಾವು ಬರೆಯಲಾರಂಭಿಸಿದ ಕತೆಯು ಇಲ್ಲಿಗೆ ಕೊನೆಗಂಡಿತು. ಭಾಮಿನಿಯ ಮುಂದಿನ ಪರಿಣಾಮವನ್ನು ಊಹಿಸುವದು ಜಡವಲ್ಲ. ಹೀಗೆ ಊಹಿಸುವ ಶ್ರಮವನ್ನು ವಹಿಸದ ವಾಚಕರ ಸಲುವಾಗಿ ನಾವು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಭಾಮಿನಿಯು ಮುಂದೆ ತನ್ನ ಪ್ರಾಪ್ಯ ಅಧಿಕಾರದಿಂದ ಎಂದೂ ವಂಚಿತಳಾಗಲಿಲ್ಲ-ಪತಿಸನ್ನಿಧಿಯನ್ನು ತ್ಯಜಿಸಲಿಲ್ಲ. ಇವಳನ್ನು ಈ ಸ್ಥಳದಿಂದ ಹೊರದೂಡುವದಕ್ಕೆ ಯಾರೂ ಇಚ್ಛಿಸಲಿಲ್ಲವಿಷ್ಟೇ ಅಲ್ಲ; ಎಲ್ಲರೂ ಮಿಗಿಲಾದ ಪ್ರೀತಿಯಿಂದ ವರ್ತಿಸಹತ್ತಿದರು. ಹೀಗೆ ಭಾಮಿನಿಯು ಎಲ್ಲರಿಗೂ ಬೇಕಾಗಿ ಸಂಸಾರವನ್ನು ಸಾಗಿಸಿದಳು. ಗಂಡುಮಕ್ಕಳನ್ನು ಹೆತ್ತಳು. ಸೌಭಾಗ್ಯವತಿಯಾಗಿ ಬಹು ಕಾಲ ಬಾಳಿದಳು.

ಸಂಪೂರ್ಣ